Bailahongal taluk, Belgaum district is a rehabitated village. Amount required to electrify this rehabitated village is about Rs. 48,000/- It is not possible to electrify the rehabitated villages under Boad's funds. The above mount required to electrify this rehabitated village will have to be paid to the Board by CADA (Irrigation Department).The CADA authorities in Belgaum have already been informed to pay the amount to the Board. Further, to facilitate the electrification of Lingadahalli village, energisation work of irrigation pumpsets in the nearby Degaon village has already been completed. As Soon as the CADA (Irrigation Department) authorities, Belgaum pay the amount to the Board, the electrification of Lingadahalli rehabitated village will be done at a faster rate.

ಶಿವಮೊಗ್ಗ -ಭದ್ರಾವತಿ ಮಹಾನಗರ ಪಾಲಿಕೆಗೆ ಚುನಾವಣೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ, ಭದ್ರಾವತಿ ಮಹಾನಗರ ಪಾಲಿಕೆಗೆ ಈಗಾಗಲೇ ಆಡಳಿತಾಧಿಕಾರಿ ನೇಮಕವಾಗಿದ್ದಾರೆ. ಹಿಂದೆಯಿದ್ದ ನೇಮಕಾತಿ ಮಾಡಿದ್ದ ಅಧಿಕಾರೇತರ ವ್ಯಕ್ತಿಗಳ ಮುಖಾಂತರ ನಡೆದ ಆಡಳಿತ-ಭ್ರಷ್ಟಾಚಾರದಿಂದ ಕೂಡಿದ್ದರಿಂದ ಆ ಮೇಯರ್ - ಉಪಮೇಯರ್ ಹಾಗೂ ಸದಸ್ಯರ ನೇಮಕಾತಿ ಸಮಿತಿ ರದ್ದು ಮಾಡಲಾಗಿದೆ. ಈ ಮಹಾನಗರ ಪಾಲಿಕೆಗೆ ಮತ್ತೆ ಅಧಿಕಾರೇತರ ಸಮಿತಿಯ ನೇಮಕ ಮಾಡಲಾಗುವುದೇ? ಚುನಾವಣೆ ನಡೆಸಲು ಪ್ರಯತ್ನ ನಡೆದಿದೆಯೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಆಕ್ಟ್ 1976ರ ಸೆಕ್ಷನ್ 503ಎ ಅನ್ವಯ, ಶಿವಮೊಗ್ಗ, ಭದ್ರಾವತಿ ನಗರಪಾಲಿಕೆಗೆ ಮೊದಲ ಬಾರಿಗೆ ನಾಮಕರಣ ಮಾಡಲಾದ ಕೌನ್ಸಿಲರುಗಳು, ಕರ್ತವ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿರುವುದಿಲ್ಲ. ಆದ್ದರಿಂದ ಇವರುಗಳ ನೇಮಕಾತಿಯನ್ನು ಮೇಯರ್, ಉಪ ಮೇಯರ್ ಮತ್ತು ಸ್ಥಾಯಿ ಸಮಿತಿಯ ಸದಸ್ಯರನ್ನು ಒಳಗೊಂಡಂತೆ ಸರ್ಕಾರವು ರದ್ದುಗೊಳಿಸಿ ಶಿವಮೊಗ್ಗದ ಜಿಲ್ಲಾಧಿಕಾರಿಗಳನ್ನು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಆಕ್ಟ್, 1976ರ ನಿಯಮ 100 (1)ರನ್ವಯ ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡಿದೆ. ಶಿವಮೊಗ್ಗ ಭದ್ರಾವತಿ ಮಹಾನಗರ ಪಾಲಿಕೆಗೆ ಅಧಿಕಾರೇತರ ಸದಸ್ಯರ ಸಮಿತಿಯನ್ನು ನೇಮಕ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ದಿನಾಂಕ 1-6-94 ರಿಂದ ರಾಜ್ಯದ ಮುನ್ಸಿಪಲ್ ಕಾನೂನುಗಳನ್ನು ಸಂವಿಧಾನದ (74ನೇ ತಿದ್ದುಪಡಿ) ವಿಧೇಯಕ 1992ರನ್ವಯ ತಿದ್ದುಪಡಿ ಮಾಡಲಾಗುತ್ತಿದೆ. ಸಂವಿಧಾನದ (74ನೇ ತಿದ್ದುಪಡಿ) ಅಧಿನಿಯಮ 1992ರನ್ವಯ ಯಾವುದೇ ಸ್ಥಳೀಯ ಸಂಸ್ಥೆಯನ್ನು 6 ತಿಂಗಳಿಗಿಂತ ಹೆಚ್ಚಿನ ಕಾಲ ಆಡಳಿತಾಧಿಕಾರಿಗಳ ಅಧೀನದಲ್ಲಿ ಇಡುವಂತಿಲ್ಲವಾದ್ದರಿಂದ, ದಿನಾಂಕ 1-6-94ರ ಬಳಿಕ ಹೊಸ ಮುನ್ಸಿಪಲ್ ಕಾನೂನುಗಳನ್ವಯ ಚುನಾವಣೆ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳುತ್ತದೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ನಿಜವಾಗಿ ತಮಗೆ ಹೇಳಬೇಕಾದರೆ, ರಾಜ್ಯಪಾಲರ ಬಗ್ಗೆ ಸಾಕಷ್ಟು ಗೌರವ ಇದೆ ಆದರೂ ಸಹ ಕೆಲವು ಸಾರಿ ಈ ಭಾಷಣದ ಮೇಲೆ ಮಾತನಾಡಬೇಕೋ ಅಥವಾ ಬೇಡವೋ ಎಂಬ ಸಂದೇಹ ನನ್ನ ಮನಸ್ಸಿನಲ್ಲಿ

ಬರುತ್ತದೆ. ಏಕೆಂದರೆ ರಾಜ್ಯಪಾಲರ ಭಾಷಣ ಕೇವಲ ಪ್ರತಿ ವರ್ಷ ಒಂದು ಸೆರೆಮೊನಿ ರೀತಿಯಲ್ಲಿ ನಡೆಯುತ್ತಿದೆ. ರಾಜ್ಯಪಾಲರ ಭಾಷಣ ಅಂದರೆ ಮುಖ್ಯವಾಗಿ ಇಲ್ಲಿ ಸರಕಾರದ ಪಾಲಿಸಿ ಬಗ್ಗೆ ಸರಕಾರದ ನೀತಿ ಬಗ್ಗೆ ಸ್ಪಷ್ಟವಾದ ದಾರಿ ಇರಬೇಕಾಗುತ್ತದೆ. ಆ ಸ್ಪಷ್ಟವಾದ ದಾರಿಯಾವುದು ಎಂದು ಸರಕಾರದಿಂದ ರಾಜ್ಯಪಾಲರ ಭಾಷಣದ ಮುಖಾಂತರ ನಾಡಿನ ಜನರಿಗೆ ಇನ್ನೂ ಗೊತ್ತಾಗುತ್ತಿಲ್ಲ.

3.50 ಪಿ.ಎಂ.

ಕಳೆದ ನಾಲ್ಕೈದು ವರ್ಷಗಳ ರಾಜ್ಯಪಾಲರ ಭಾಷಣ ನೋಡಿದಾಗ, ಯಾವ ಮಾತು ಕಳೆದ ವರ್ಷ ಹೇಳಿದ್ದರೋ ಅದೇ ಮಾತು ಈ ವರ್ಷ ಹೇಳಿದ್ದಾರೆ. ಈ ವರ್ಷ ಏನು ಮಾತು ಇದೆ, ಅದು ಎರಡು ವರ್ಷಗಳ ಹಿಂದೆ ಕೂಡ ಇತ್ತು. ಸರ್ಕಾರ ಕೇವಲ ರಾಜ್ಯಪಾಲರ ಒಂದು ಭಾಷಣ ತನ್ನ ಪೊಳ್ಳು ಭರವಸೆಗಳ, ಪೊಳ್ಳು ಮಾತುಗಳ ಮುಖಾಂತರ ಹೇಳುವುದಕ್ಕೆ ಪ್ರಯತ್ನವನ್ನು ಮಾಡಿದೆಯೇ ವಿನಃ ಇದರಲ್ಲಿ ಸರ್ಕಾರದ ಬರುವ ವರ್ಷದ ತನ್ನ ಪಾಲಿಸಿಯೇನು? ತನ್ನ ರೂಪರೇಷೆಗಳೇನು? ಅದೇನೂ ಇದರಲ್ಲಿ ಕಂಡುಬರುತ್ತಿಲ್ಲ. ಹಾಗಾಗಿ ನಾನು ಹೇಳಿದೆ. ರಾಜ್ಯಪಾಲರ ಭಾಷಣದ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಅಂತ ಇದರ ಬಗ್ಗೆ ಇವತ್ತು ದೇಶದ ಎಲ್ಲಾ ಸದನಗಳಲ್ಲಿ ಪಾರ್ಲಿಮೆಂಟ್‌ನಲ್ಲೂ ಚರ್ಚೆಯಾಗಬೇಕಾಗಿದೆ. ಏಕೆಂದರೆ ರಾಜ್ಯಪಾಲರ ಮುಖಾಂತರ ಸಾವಿರಾರು ಸುಳ್ಳು ಮಾತುಗಳನ್ನು ಹಾಕಿ ಆ ಒಂದು ಸ್ಥಾನಕ್ಕೆ ಅಗೌರವವನ್ನು ತರುವುದಕ್ಕಿಂತ ಇಂಥ ರಾಜ್ಯಪಾಲರ ಭಾಷಣಕ್ಕೆ ಒಂದು ಪೂರ್ಣ ವಿರಾಮ ಕೊಡಬೇಕಾದದ್ದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ರಾಜ್ಯಪಾಲರು ಕಳೆದ ಮೂರು-ನಾಲ್ಕು ವರ್ಷಗಳಲ್ಲಿ ಏನು ಮಾತನಾಡಿದ್ದಾರೆ, ಅದೇ ಮಾತುಗಳನ್ನು ಈವರ್ಷ ಸಹ ಪುನಃಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇವತ್ತು ಯಾವ ಒಂದು ಕಾಂಗ್ರೆಸ್ ಪಕ್ಷ ಈ ನಾಡಿನ ಜನರ ಆಶೀರ್ವಾದವನ್ನು ಪಡೆದುಕೊಂಡು ಬಹಳ ದೊಡ್ಡ ಬಹುಮತವನ್ನು ಪಡೆದುಕೊಂಡು ಈ ರಾಜ್ಯದಲ್ಲಿ 1989ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂತು. ಹಾಗೆ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯನ್ನು ಕೂಡ ಮರೆತು, ತನ್ನ ಜನರನ್ನು ಮರೆತರು, ರಾಜ್ಯದ ಕಡು ಬಡವರು, ಹಿಂದುಳಿದ ಜನಾಂಗ, ಪರಿಶಿಷ್ಟ ಜಾತಿಯ ಜನಾಂಗ, ರೈತರು ಇವರೆಲ್ಲರ ಸಮಸ್ಯೆಯನ್ನು ಮರೆತು ನಾಲ್ಕು ವರ್ಷಗಳಿಂದ ಕೇವಲ ಅಧಿಕಾರದ ಸಲುವಾಗಿ ಕಚ್ಚಾಟ, ಮುಖ್ಯಮಂತ್ರಿಗಳ ಬದಲಾವಣೆ ಮತ್ತು ಶಾಸನಸಭೆಯಲ್ಲಿ ಇಡೀ ದೇಶದ ಇತಿಹಾಸದಲ್ಲಿ ಪಾರ್ಲಿಮೆಂಟರಿ ಡೆಮಾಕ್ರಸಿಯ ಇತಿಹಾಸದಲ್ಲಿ ಒಂದು ಆಳುವ ಪಕ್ಷದ ಸರ್ಕಾರವು ತನ್ನದೇ ಆದಂಥ ಸರ್ಕಾರಕ್ಕೆ ಫಂಕ್ಷನ್ ಮಾಡುವುದಕ್ಕೆ ಬಿಡಲಿಲ್ಲ. ಇಂಥ ಉದಾಹರಣೆಗಳನ್ನು ನಾವು ಕಾಣುತ್ತೇವೆ. ಈ ದೇಶದಲ್ಲಿ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ವಿಶ್ವದ ಯಾವುದೇ ಭಾಗದಲ್ಲೂ ಈ ರೀತಿ ಕಂಡು ಬರುವುದಕ್ಕೆ ಸಾಧ್ಯವಿಲ್ಲ. ಆ ಒಂದು ಇತಿಹಾಸವನ್ನು ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ ಸರ್ಕಾರ ಮಾಡಿದೆ. ಇದರ ಬಗ್ಗೆ ನಾವು ಮೆಚ್ಚಬೇಕಾಗುತ್ತದೆ. ಅವರ ಜೊತೆಯಲ್ಲಿ ನಾವು ಕಾಂಪೀಟ್ ಮಾಡುವುದಕ್ಕೆ ಸಾಧ್ಯವಿಲ್ಲ.

ನಾನು ಒಪ್ಪಿಕೊಳ್ಳುತ್ತೇನೆ. ನಾವು ಅಧಿಕಾರದಲ್ಲಿದ್ದು ಕೆಲಸವನ್ನು ಮಾಡಿದ್ದೇವೆ. ಆದರೆ ಅಲ್ಪ ಸ್ವಲ್ಪ ಜಗಳದಿಂದ 89ನೇ ಇಸವಿಯ ಚುನಾವಣೆಯಲ್ಲಿ ಜನರು ನಮಗೆ ಪಾಠವನ್ನು ಕಲಿಸಿದರು. ಆದರೆ ಕೆಲಸವನ್ನು ಮಾಡಿದ್ದೇವೆ. ಜಗಳ ಮಾಡಿದ್ದೇವೆ. ಆದರೆ ನಿಮ್ಮ ಜಗಳ ಬೀದಿಯಲ್ಲಿ ನಡೆಯಿತು, ಕಛೇರಿಯಲ್ಲಿ ನಡೆಯಿತು. ಶಾಸನಸಭೆಯಲ್ಲಿ ನಡೆಯಿತು. ಅವರ ಮುಖ್ಯಮಂತ್ರಿ ಬಗ್ಗೆ ಮಾನ್ಯ ಸದಸ್ಯರುಗಳು ಬಹಳ ಅಭಿಮಾನದಿಂದ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ನನಗೆ ಸಂತೋಷ [illegible]ಟಿ. [illegible]ಮಂತ್ರಿಗಳು ಸಭಾನಾಯಕರಾಗಿರುತ್ತಾರೆ. ಸಭಾನಾಯಕರಿಗೆ ಪಕ್ಷದ ಶಿಸ್ತಿನ ಪ್ರಕಾರ ಶಾಸಕಾಂಗ ಪಕ್ಷದ [illegible]ಗೆ ಗೌರವ ಎಲ್ಲಾ ಇರಬೇಕಾಗುತ್ತದೆ. ಅದರಲ್ಲೇನೂ

ವಾದವಿವಾದ ಇಲ್ಲ. ಕೆಟ್ಟ ಸಂಪ್ರದಾಯವನ್ನು ಹಾಕಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಈ 15-20 ದಿನಗಳ ಹಿಂದೆ ಮುಖ್ಯಮಂತ್ರಿಯವರಿಗೆ ಅರ್ಹತೆಯೇ ಇಲ್ಲ, ಇವರು ಸಭಾನಾಯಕರಾಗುವುದಕ್ಕೆ ಲಾಯಕ್ ಇಲ್ಲ ಎಂದು ಹೇಳಿ ಈಗ ಮೆಚ್ಚುಗೆಯ ಮಾತುಗಳನ್ನು ಹೇಳಿದರೆ ಅರ್ಥವೇನು? ಇದು ಕೇವಲ ಅಧಿಕಾರದ ಸಲುವಾಗಿ ಆ ಉದ್ದೇಶ ಇದೆಯೇ? ವಿನಹ ಬೇರೆ ಯಾವ ಉದ್ದೇಶವೂ ಇದ್ದಹಾಗೆ ಕಾಣುವುದಿಲ್ಲ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈಗಾಗಲೇ ಹೇಳಿದ ಹಾಗೆ ರಾಜ್ಯಪಾಲರ ಭಾಷಣ ಅದು ಪಾಲಿಸಿ ಡಾಕ್ಯುಮೆಂಟ್. Policy document should be a reflection in Governors address ಅದು ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಬರುತ್ತಿಲ್ಲ. ಅದರ ರಿಫ್ಲೆಕ್ಷನ್ಸ್ ಸಹ ಅದರಲ್ಲಿ ಇರಬೇಕಾಗುತ್ತದೆ. ಆ ಒಂದು ರಿಫ್ಲೆಕ್ಷನ್ ರಾಜ್ಯಪಾಲರ ಭಾಷಣದಲ್ಲಿ ಕಾಣಿಸುತ್ತಿಲ್ಲ.

ಕೇವಲ ಇದು ಒಂದು ಕಾಂಗ್ರೆಸ್ ಸರ್ಕಾರದ ಅಥವಾ ಮುಖ್ಯಮಂತ್ರಿಗಳು ಏನು ಪೊಳ್ಳು, ಸುಳ್ಳು ಭರವಸೆಗಳನ್ನು ಕೊಡುತ್ತಾ ಹೋಗುತ್ತಿದ್ದಾರೆ. ಅದೇ ಪೊಳ್ಳು ಭರವಸೆಗಳು ರಾಜ್ಯಪಾಲರ ಮುಖಾಂತರ ನಾಡಿನ ಜನತೆಯ ಮುಂದೆ ಇಟ್ಟಿದ್ದಾರೆ. ಈಗಾಗಲೇ ಹೇಳಿದ ಹಾಗೆ ಈ ವರ್ಷ ಅಂದರೆ 1989ನೇ ನವೆಂಬರ್ಗೆ ಐದು ವರ್ಷದ ಈ ಶಾಸನ ಸಭೆ ಅವಧಿ ಮುಗಿಯುತ್ತದೆ. ಹಾಗಾಗಿ ಇವತ್ತು ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಭಾಷಣ ಮಾಡಬೇಕಾದರೆ ಬಹಳ ಜವಾಬ್ದಾರಿಯಿಂದ ಮಾಡಬೇಕಾಗಿತ್ತು. ತಾವು ಕೆಲವು ವಿಚಾರಗಳನ್ನು ಇಲ್ಲಿ ಹೇಳಿದ್ದೀರಿ. ಆ ವಿಚಾರಗಳನ್ನು ನೋಡಿದರೆ ತಾವೇ ಮುಂದಿನ ಚುನಾವಣೆಯಲ್ಲಿ ಆರಿಸಿಬರುತ್ತೀರೋ ಅಥವಾ ಬರುವ ಹೊಸ ನಮ್ಮ ಜನತಾದಳದ ಸರ್ಕಾರ ಬಂದರೆ ಅದಕ್ಕೆ ನಾವು ಒಂದು ಮಾರ್ಗದರ್ಶನ ನೀಡಬೇಕು ಎನ್ನುವ ಉದ್ದೇಶದಿಂದ ಮಾಡಿದ್ದೀರೋ ಗೊತ್ತಾಗುತ್ತಿಲ್ಲ. ಆ ವಿಚಾರ ತಾವು ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು. ತಮ್ಮ ಅವಧಿ ನವೆಂಬರ್‌ಗೆ ಮುಗಿಯುತ್ತದೆ. ಆ ವಿಚಾರ ಇಟ್ಟುಕೊಂಡು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಪಾಲಿಸಿಗಳ ರಿಫ್ಲೆಕ್ಷನ್ ಇರಬೇಕಾಗಿತ್ತು. ಆ ರಿಫ್ಲೆಕ್ಷನ್ ರಾಜ್ಯಪಾಲರ ಭಾಷಣದಲ್ಲಿ ಕಂಡು ಬರುತ್ತಿಲ್ಲ. ರಾಜ್ಯಪಾಲರ ಹುದ್ದೆಯನ್ನು ಇಂತಹ ಭಾಷಣದಿಂದ ನಾವು ಟೋಟಲಿ ಡೀಗ್ರೇಡ್ ಮಾಡಿದ್ದೇವೆ. ಏಕೆಂದರೆ ಕೆಲವು ಸಾರಿ ಯಾವ ವಿಚಾರ ಅವರು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅಂತಹ ವಿಚಾರಗಳನ್ನು ಸಹ ಅವರ ಮುಖಾಂತರ ಇವತ್ತು ತಾವು ಹೇಳಿಸಿದ್ದೀರಿ. ಇದು ಸರಿ ಏನು? ಇದರ ಬಗ್ಗೆ ಸಹ ಚರ್ಚೆ ಆಗಬೇಕಾಗುತ್ತದೆ, ಡಿಬೇಟ್ ಆಗಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ರಾಜ್ಯಪಾಲರ ಭಾಷಣ it is totally hallow, directionless ಇದರಿಂದ ಯಾವ ಪಾಲಿಸಿಯೂ ಕ್ಲಿಯರ್ಕಟ್ ಆಗಿ ಕಾಣಿಸುತ್ತಿಲ್ಲ. ಸರ್ಕಾರದಲ್ಲಿ ಯಾವ ಒಂದು ಕಾರ್ಯಕ್ರಮದ ಬಗ್ಗೆ, ಯಾವುದೇ ಒಂದು ಪಾಲಿಸಿ ಬಗ್ಗೆ ಕ್ಲಾರಿಟಿ ಇಲ್ಲ. ಕೇವಲ ಗೊಂದಲ ಇದೆ. ಕೇವಲ ಚುನಾವಣೆಯ ವರ್ಷ ಇದೆ. ಹಾಗಾಗಿ ಕೆಲವು ಪೊಳ್ಳು ಘೋಷಣೆಗಳು ಪೊಳ್ಳು ಮಾತುಗಳನ್ನು ಹೇಳಿ ಜನರಿಗೆ ಮರುಳು ಮಾಡುವ ಪ್ರಯತ್ನ ಮಾಡಿದ್ದೀರಿ. ಆದರೆ ನಾಡಿನ ಜನ ಬಹಳ ಜಾಣರಿದ್ದಾರೆ. ಈ ವರ್ಷದ ರಾಜ್ಯಪಾಲರ ಭಾಷಣ ಸಾಧಾರಣ 31 ಪುಟ ಇದೆ. ದೊಡ್ಡ ಗ್ರಂಥ ಆಗಿಬಿಟ್ಟಿದೆ. ಈ ರಾಜ್ಯದ ಇತಿಹಾಸದಲ್ಲಿ ಯಾವ ರಾಜ್ಯಪಾಲರ ಭಾಷಣ ತಾವು ನೋಡಿದರು ಅದು 13 ಅಥವಾ 14 ಪೇಜಿನ ಮೇಲೆ ಇಲ್ಲ, ಹೆಚ್ಚು ಅಂದರೆ 17 ಪೇಜು. ಆದರೆ ಈ ಸಾರಿ ಇದು ನಿಮ್ಮ ಕೊನೆಯ ಹಂತ. ನಾನು ಅಪಾರ್ಥದಿಂದ ಹೇಳುತ್ತಿಲ್ಲ, ಆದರೆ ಗ್ರೇವ್ ಯಾರ್ಡ್ ಸಮೀಪ ಹೋದ ನಂತರ virtues ಹೇಳಬಾರದು. ನಿಮ್ಮ ಸಮಯ ಮುಗಿಯುವುದಕ್ಕೆ ಬಂದಿದೆ. ನವೆಂಬರ್ ಸಮೀಪ ಬರುತ್ತಾ ಇದೆ. ಮಧ್ಯಾವಧಿ ಚುನಾವಣೆ ಮೇ ನಲ್ಲಿ ಆಗುತ್ತದೆ. ಎನ್ನುವ ಒಂದು ಸುದ್ದಿ ಇದೆ. ಹಾಗಾಗಿ you are already nearing the graveyard. ಗ್ರೇವ್ ಯಾರ್ಡ್ ಸಮೀಪ

ಹೋದ ನಂತರ why are you talking about virtues? ನಿಮಗೆ ಏನು ಮಾರಲ್ ರೈಟ್ ಇದೆ to talk about virtues? ಇಂತಹ ಒಂದು ದೊಡ್ಡ ಗ್ರಂಥ 31 ಪೇಜಿನದು ನಾಡಿನ ಜನತೆಯ ಮುಂದೆ ಇಟ್ಟಿದ್ದಾರೆ. ರಾಜ್ಯಪಾಲರ ಭಾಷಣ 15-16, 18 ಪೇಜಿನಲ್ಲಿ ಮುಗಿಸುತ್ತಿದ್ದೀರಿ, ಈ ವರ್ಷ ಚುನಾವಣೆ ವರ್ಷ ಎಂದು ಹೇಳಿ ಬಹಳ ಮುಂದುವರಿಸಿದ್ದೀರಿ. ಲಾಟರಿ ಹಾಕುತ್ತೀರಿ, ಹತ್ತಿದ್ದರೆ ಹತ್ತುತ್ತದೆ ಇಲ್ಲ ಎಂದರೆ ಇಲ್ಲ, ತಾವು ಪುನಃ ಅಧಿಕಾರಕ್ಕೆ ಬರುವುದಿಲ್ಲ ಎಂದು, ಇವರಿಗೆ ಗೊತ್ತಿದೆ ಜನ ನಮಗೆ ಕ್ಷಮೆ ಮಾಡುವುದಿಲ್ಲ, ನಾವು ಸಾಕಷ್ಟು ತಪ್ಪು ಮಾಡಿದ್ದೇವೆ ಎಂದು ತಮಗೆ ಗೊತ್ತು. ಅದುನನಗೆ ಗೊತ್ತು. ಏಕೆಂದರೆ ಜನ ನಿಮ್ಮ ಸೇವೆ ಮಾಡಲಿಕ್ಕೆ ತಯಾರು ಇಲ್ಲ. ರಾಜ್ಯದ ರೈತ ಆಗಲಿ, ರಾಜ್ಯದ ಯುವಕ ಆಗಲಿ,ಶ್ರಮಿಕರಾಗಲಿ, ಹಿಂದುಳಿದ ಜನಾಂಗವಾಗಲಿ ಪ್ರತಿ ಒಂದು ವರ್ಗಕ್ಕೆ ತಾವು ಕಳೆದ ನಾಲ್ಕೂವರೆ ವರ್ಷದಲ್ಲಿ ಕೇವಲ ಪೊಳ್ಳು ಭರವಸೆ, ಪೊಳ್ಳು ಮಾತಿನಿಂದ ಮೋಸ ಮಾಡುತ್ತಾ ಬಂದಿದ್ದೀರಿ. ಯಾವ ಒಂದು ಕಾರ್ಯಕ್ರಮ ತಾವು ಪ್ರಾಮಾಣಿಕವಾಗಿ ಜಾರಿಗೆ ತಂದಿದ್ದೀರಿ ಎನ್ನುವುದನ್ನು ನನಗೆ ಹೇಳಿ. ಒಂದು ಕಾರ್ಯಕ್ರಮ. ಪ್ರತಿ ಒಂದು ಮುಖ್ಯಮಂತ್ರಿ ಜೊತೆ ಒಂದು ಹೊಸ ಕಾರ್ಯಕ್ರಮ. ವೀರೇಂದ್ರ ಪಾಟೀಲರು ಬಂದಾಗ ಒಂದು ಕಾರ್ಯಕ್ರಮ ಇದ್ದರೆ, ಬಂಗಾರಪ್ಪನವರು ಬಂದಾಗ ಬೇರೆ ಕಾರ್ಯಕ್ರಮ. ಬಂಗಾರಪ್ಪ ಹೋದ ನಂತರ ವೀರಪ್ಪಮೊಯಿಲಿಯವರದೇ ಇನ್ನೊಂದು ಕಾರ್ಯಕ್ರಮ ಈ ವರ್ಷ ಸಹ ರಾಜ್ಯಪಾಲರ ಭಾಷಣದಲ್ಲಿ ಕೆಲವು ಕಾರ್ಯಕ್ರಮಗಳ ಘೋಷಣೆ ಮಾಡಿದ್ದಾರೆ. Governor's address is not supposed to declare certain programmes.

ಆದರೆ ಕೆಲವು ಪ್ರೋಗ್ರಾಮ್ಸ್ ರಾಜ್ಯಪಾಲರ ಭಾಷಣದಲ್ಲಿ ಬಂದಿವೆ. ಇವತ್ತು ಕೇವಲ ಪೊಳ್ಳು ಮಾತು ಪೊಳ್ಳು ಘೋಷಣೆಯಿಂದ ಜನರಿಗೆ ಮರುಳು ಮಾಡುವುದಕ್ಕೆ ಸಾಧ್ಯವಿಲ್ಲ. ಕಾಂಗ್ರೆಸ್ ಆಡಳಿತ ನಾಡಿನ ಜನರಿಗೆ ಒಂದು ಶಾಪ ಆಯಿತು.

ಎಷ್ಟು ಬೇಗ ತಾವು ಅಧಿಕಾರ ಬಿಟ್ಟು ಹೋಗುತ್ತೀರೋ ಅಷ್ಟು ಒಳ್ಳೆಯದೆಂದು ಜನರು ಆ ಸಮಯಕ್ಕಾಗಿ ಕಾಯುತ್ತಿದ್ದು, ಆ ಸಮಯ ಬಂದಾಗ ನಿಮಗೆ ಸರಿಯಾದ ಪಾಠ ಕಲಿಸುವುದಕ್ಕೆ ಕಾಯುತ್ತಿದ್ದು, ಆ ಸಮಯ ಬಂದಾಗ ನಿಮಗೆ ಸರಿಯಾದ ಪಾಠ ಕಲಿಸುವುದಕ್ಕೆ ಸಿದ್ಧರಾಗಿದ್ದಾರೆ. ಇವೊತ್ತು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಲ್ಪ ಸಂಖ್ಯಾತರ, ಹಿಂದುಳಿದ ವರ್ಗದವರ ಮತ್ತು ಪರಿಶಿಷ್ಟರ ಬಗ್ಗೆ ಹೇಳಿರಬಹುದು. ಆದರೆ, ಕಡು ಬಡವರ, ತುಳಿಯಲ್ಪಟ್ಟ ವರ್ಗದವರ, ಪರಿಶಿಷ್ಟ ಪಂಗಡದವರ, ಹಿಂದುಳಿದವರ ಮತ್ತು ರೈತರ ಬಗ್ಗೆ ನೇರವಾದ ಯಾವುದೇ ಒಂದು ನೀತಿ ರಾಜ್ಯಪಾಲರ ಭಾಷಣದಲ್ಲಿ ನಮಗೆ ಕಂಡು ಬರುತ್ತಿಲ್ಲ. ಅಲ್ಪ ಸಂಖ್ಯಾತರ ಬಗ್ಗೆ ಹಮ್ಮಿಕ್ಕೊಂಡಿರುವ 18 ಅಂಶಗಳ ಕಾರ್ಯಕ್ರಮವನ್ನು ಕಳೆದ ನಾಲ್ಕು ವರ್ಷಗಳಿಂದಲೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳುತ್ತಲೇ ಇದ್ದಾರೆ. ಇವೊತ್ತು ಇವರು ಏನು ಹೇಳಬೇಕಾಗುತ್ತೆಂದರೆ, More than the goals, they should have said what are their achievements. ಇವರು ತಮ್ಮ ಅಧಿಕಾರ ಬಿಟ್ಟು ಮನೆಗೆ ಹೋಗುವ ಪರಿಸ್ಥಿತಿ ಬಂದಿದ್ದರೂ ಗೋಲ್(ಗುರಿ) ಬಗ್ಗೆ ಹೇಳುತ್ತಿದ್ದಾರೆ. How can you talk about the goals now? ನಿಮ್ಮ ಪಕ್ಷದ ಅಧಿಕಾರದ ಅವಧಿ ಇನ್ನು 5-6 ತಿಂಗಳಲ್ಲಿ ಮುಗಿಯುತ್ತಾ ಬರುತ್ತಿದ್ದು, ಈ ರೀತಿ ಮುಗಿಯುತ್ತಾ ಬರುತ್ತಿರುವಾಗ you have no right to talk about the goals. You have to speak about the achievements. What have you done in the last 4 years?

ಸಾಧನೆ ಏನೆಂದು ಕಂಡುಬರುತ್ತಿಲ್ಲ. ಪುನಃ ನಿಮ್ಮ ಗೋಲ್ಗಳು, ಹೊಸ ಕಾರ್ಯಕ್ರಮಗಳು. ಈಗಾಗಲೇ ನೀವು ಹಮ್ಮಿಕ್ಕೊಂಡ ಕಾರ್ಯಕ್ರಮಗಳಿಂದ ಏನು ಮಾಡಿದ್ದೀರೆಂಬ ಬಗ್ಗೆ ನಮಗೆ ಗೊತ್ತಾಗಬೇಕು. ಅದೂಕೂಡ ಕಂಡುಬರುತ್ತಿಲ್ಲ. ಕಳೆದ ನಾಲ್ಕೂವರೆ ವರ್ಷಗಳಿಂದ ನೀವು ಅಧಿಕಾರದಲ್ಲಿದ್ದೀರಿ, ಆಡಳಿತದ ಬಗ್ಗೆ ರಾಜ್ಯಪಾಲರು

ಸಾಕಷ್ಟು ಮಾತನಾಡಿದ್ದಾರೆ. ನಾಲ್ಕೂವರೆ ವರ್ಷಗಳ ಅಧಿಕಾರಾವಧಿಯ ಪೈಕಿ ಕಳೆದ ಎರಡು ವರ್ಷಗಳಲ್ಲಿ ನೀವು ಆಡಿದ ಜಗಳ, ಗಲಾಟೆಯೇ ಆಡಳಿತದ ಒಂದು ಅಂಗವಾಗಿದೆಯೇ ವಿನಹ ಬೇರಾವುದೂ ಇಲ್ಲ. ಮೂರು ತಿಂಗಳ ಹಿಂದೆ ಇವರ ಸಿಎಲ್ಪಿ ಮೀಟಿಂಗ್ನಲ್ಲಿ ನಡೆದ ಗಲಾಟೆಯಲ್ಲಿ ಮೈಕು, ಕುರ್ಚಿಗಳನ್ನು ಮುರಿದು ಹಾಳು ಮಾಡಿದ್ದಕ್ಕೆ ಆ ಹಣವನ್ನು ಈ ಸರ್ಕಾರದವರೇ ಭರಿಸಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅಥವಾ ಹೊಸ ಸರ್ಕಾರ ಬಂದಾಗ ಅವರ ಕಡೆಯಿಂದ ವಸೂಲು ಮಾಡುತ್ತಾರೋ ಏನೋ ಗೊತ್ತಿಲ್ಲ. ಇಷ್ಟೇ ನೀವು ಮಾಡಿದ್ದೇ ವಿನಹ ಮಾಡಿದ್ದುದು ಬೇರೇನೂ ಇಲ್ಲ. ಗ್ರಾಮೀಣ ಪ್ರದೇಶದಲ್ಲಿರುವ ಜನರು ಅದರಲ್ಲೂ ರೈತರು ಬಹಳ ಕಷ್ಟದಲ್ಲಿದ್ದಾರೆಂಬುದನ್ನು ಹಲವಾರು ಸಮಯದಲ್ಲಿ ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರ ಒಪ್ಪಿಕೊಂಡಿದೆ. ಇವೊತ್ತು ನಾಡಿನ ರೈತರು, ಕೂಲಿಕಾರರು ಬಹಳ ಕಷ್ಟದಲ್ಲಿದ್ದಾರೆ. ಈ ಸಮಯದಲ್ಲಿ ನೆರೆಹಾವಳಿ, ಭೂಕಂಪ ಸಂಭವಿಸಿದೆ. ಹೀಗಿರುವಾಗ ಇವೊತ್ತಿನ ರಾಜ್ಯಪಾಲರ ಭಾಷಣದಲ್ಲಿ ಇಂತಹ ಘಟನೆಗಳು ಸಂಭವಿಸಿದೆ ಎಂದು ಹೇಳಿದಿರೇ ವಿನಹ ಆ ಘಟನೆಗಳಿಂದ ನೊಂದಂಥವರಿಗೆ ಖಾಯಂ ಸ್ವರೂಪದ ಪರಿಹಾರವನ್ನು ಕಂಡು ಹಿಡಿದಿದ್ದೇವೆ ಅಥವಾ ಕಂಡುಹಿಡಿಯುತ್ತಿದ್ದೇವೆನ್ನುವುದರ ಬಗ್ಗೆ ಹೇಳಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಈ ಸರ್ಕಾರಕ್ಕೆ ಈ ವರ್ಗದ ಜನರ ಬಗ್ಗೆ ಯಾವುದೇ ಚಿಂತನೆ ಇಲ್ಲ. ಅಧಿಕಾರ ನಡೆಸುತ್ತಿದ್ದೀರೇ ವಿನಹ ಜನಪರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ರೈತರ ಪರವಾಗಿ ಹೋರಾಟ ಮಾಡಿ ಅವರ ಸಮಸ್ಯೆಗಳಿಗೆ ಸ್ಪಂಧಿಸಿ ಅವರ ಮೆಚ್ಚುಗೆಗಳಿಸಬೇಕೆನ್ನುವ ಭಾವನೆ ಇವೊತ್ತು ಆಡಳಿತ ನಡೆಸುತ್ತಿರುವ ಪಕ್ಷದಲ್ಲಿ ಕಾಣುತ್ತಿಲ್ಲ. ನಿಮ್ಮ ಪಕ್ಷದ ಕಚ್ಚಾಟ, ಗೊಂದಲಗಳಿಂದ ರಾಜ್ಯದ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಸರ್ಕಾರ ಆರ್ಥಿಕವಾಗಿ ದಿವಾಳಿಯ ಹಂತದಲ್ಲಿದೆ, ಇದನ್ನು ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದರು. ನಾನು ಆ ವಿಷಯಕ್ಕೆ ಬಂದಾಗ ಮಾತನಾಡುತ್ತೇನೆ. ಯಾವ ಪ್ರಕಾರ ನೀವು ಆರ್ಥಿಕ ದಿವಾಳಿತನ ತಂದಿರಿ ಮತ್ತು ಯಾವ ರೀತಿ ಮುಖ್ಯಮಂತ್ರಿಗಳು ಸದನದಲ್ಲಿ ಮತ್ತು ಸದನದ ಹೊರಗಡೆ ತಪ್ಪು ಮಾಹಿತಿ ಕೊಡುತ್ತಿದ್ದಾರೆಂಬುದರ ಬಗ್ಗೆ ನಿಮ್ಮ ಗಮನಕ್ಕೆ ತರುತ್ತೇನೆ. ಅದಕ್ಕೆ ಸಂಬಂಧಪಟ್ಟ ಪಟ್ಟಿಯೂ ನನ್ನ ಬಳಿ ಇದೆ. Government administration has collapsed. Finacial bankruptcy ಆರ್ಥಿಕ ದಿವಾಳಿತನ ಬಂದಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳೂ ಸ್ಥಗಿತಗೊಂಡಿವೆ, ಬಡ ಜನರ ಪರವಾಗಿ ಹಮ್ಮಿಕೊಂಡಂಥ ಕಾರ್ಯಕ್ರಮಗಳನ್ನು ನಿಲ್ಲಿಸಿದ್ದೀರಿ. ಇನ್ನು ನೀವು ಮಾಡಿದ ಕೆಲಸವಾದರೂ ಏನು? ಕೇವಲ ನಿಮ್ಮ ಪಕ್ಷದ ಗಲಾಟೆ, ಗೊಂದಲಗಳಲ್ಲೇ ಕಾಲ ಕಳೆದಿರಿ. ನಿಮ್ಮಲ್ಲಿ ಒಂದು ಒಳ್ಳೆಯ ಗುಣವಿದೆ. ಆ ಗುಣದ ಬಗ್ಗೆ ನಮ್ಮ ನಾಯಕರಾದ ರಾಮಕೃಷ್ಣ ಹೆಗಡೆಯವರು ಆಗಾಗ್ಗೆ ಹೇಳುತ್ತಿರುತ್ತಾರೆ. ಏನೆಂದರೆ, ಕಾಂಗ್ರೆಸ್ ಪಕ್ಷದ ಜನರು ಯಾವಾಗಲೂ ಜಗಳ ಮಾಡುತ್ತಿರುತ್ತಾರೆ. ಅಧಿಕಾರ ಪಡೆಯುವ ಸಮಯ ಬಂದಾಗ ಒಂದಾಗುತ್ತಾರೆ. ಆ ಒಂದೇ ಕೆಲಸವನ್ನು ನೀವು ಮಾಡುತ್ತಾ ಬಂದಿದ್ದೀರಿ.

ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಧಿಕಾರವನ್ನು ಬಿಟ್ಟು ಕೊಡುವ ಸಮಯ ಬಂದಾಗ ಏನು ಬೇಕಾದರೂ ಮಾಡುತ್ತೀರಿ. ಯಾವುದನ್ನು ಎಲ್ಲಿ ಏನೇನನ್ನು ಮಾಡುತ್ತೀರೋ ಅದನ್ನು ಹೇಳಲು ಬರುವುದಿಲ್ಲ. ಆದರೆ ಅಧಿಕಾರವನ್ನು ಬಿಟ್ಟುಕೊಡುವ ಪ್ರಶ್ನೆ ಬಂದಾಗ ಮಾತ್ರ ಒಂದಾಗುತ್ತೀರಿ. ಈ ನಿಮ್ಮ ಗುಣಕ್ಕೆ ನಾನು ಮೆಚ್ಚಬೇಕಾಗುತ್ತದೆ. ಅದು ಒಳ್ಳೆಯ ಗುಣವೆಂದು ನಾನು ಮೆಚ್ಚುತ್ತೇನೆ. ಈಗ ನಾನು ವಿರೋಧಪಕ್ಷದ ನಾಯಕನಾಗಿದ್ದೇನೆ, ನನಗೆ ನನ್ನ ಪಕ್ಷದಲ್ಲಿ ಗೌರವವಿರಬೇಕಾಗುತ್ತದೆ. ಹಾಗೆಯೇ ನಿಮ್ಮ ಪಕ್ಷದ ಸಭಾನಾಯಕರಿಗೆ ಈ ರಾಜ್ಯದ ಸಭೆಯಲ್ಲಿ ಯಾವ ಪ್ರಕಾರದ ಭಾಷೆಯನ್ನು, ಪದವನ್ನು ಉಪಯೋಗಿಸಿಕೊಂಡು ಭಾಷಣ ಮಾಡಿದ್ದೀರಿ, ಅದನ್ನು ನಾವು ಉಪಯೋಗಿಸುವುದಿಲ್ಲ, ಆ ರೀತಿಯಿಂದ ನಿಮಗೆ ಗೌರವ ಬಂದಿದೆ ಎಂದು ತಿಳಿದಿದ್ದೀರಾ? ಖಂಡಿತವಾಗಿ ಗೌರವ ಬಂದಿಲ್ಲ. ಆ ಪ್ರಕಾರವಾಗಿ ಪ್ರಜಾಪ್ರಭುತ್ವದಲ್ಲಿ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಮಾಡುತ್ತಾ ಹೋದರೆ ಯಾವ ಸರ್ಕಾರವು ಕೂಡ

ಕೆಲಸ ಮಾಡಲು ಸಾಧ್ಯವಿಲ್ಲ. ನಿಮ್ಮ ಆಡಳಿತ ಪಕ್ಷದ ಸದಸ್ಯರುಗಳು ವೆಲ್ನಲ್ಲಿ ಒಂದು ಟ್ರೂಪ್ ಮಾಡಿ ಈ ಸದನದಲ್ಲಿ ಏನು ಸ್ಟಾಲ್‌ನ್ನು ಮಾಡಿದ್ದರು, ಆ ರೀತಿಯ ವರ್ತನೆ ಯಾವಾಗಲೂ ಆಗಬಾರದು. It is a very bad precedent.

ಇದನ್ನು ನಾವು ಒಪ್ಪಿಕೊಳ್ಳಲು ಸಿದ್ಧರಾಗಿಲ್ಲ. ಆದರೆ ಆ ಪ್ರಕಾರದ ವರ್ತನೆಯನ್ನು ತಾವು ಮಾಡಿದ್ದೀರಿ. ಆದರೆ ನಾವೇನು ಮಾಡುವುದಕ್ಕಾಗುತ್ತದೆ. ಆದ್ದರಿಂದ ಇವತ್ತು ಸರ್ಕಾರದ ಸಾಧನೆ ಏನು ಎಂದರೆ ಅದು ಕೇವಲ ದೊಡ್ಡ ಶೂನ್ಯವೆಂದು ನಾವು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಯಾವಾಗಲೂ, ಪ್ರಾಮಾಣಿಕ, ಭ್ರಷ್ಟಾಚಾರದ ನಿರ್ಮೂಲನೆ, ಸ್ವಚ್ಛ ಸರ್ಕಾರ, ದಕ್ಷ ಸರ್ಕಾರ ಎನ್ನತಕ್ಕ ಮಾತನ್ನು ಹೇಳುತ್ತಿರುತ್ತಾರೆ. ಮಾನ್ಯ ವೀರಪ್ಪಮೊಯಿಲಿಯವರು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ ಹಲವಾರು ಕಡೆಗಳಲ್ಲಿ ಆಪರೇಷನ್ ಮಾಡಿದರು. ಅವರು ಅಧಿಕಾರಕ್ಕೆ ಬಂದನಂತರ ಮೊದಲು ರಾಜ್ಯದ ಮುಖ್ಯ ಕಾರ್ಯದರ್ಶಿಯವರನ್ನು ಬದಲಾವಣೆ ಮಾಡಿದರು. ಆಗ ಅವರು ಸರಿಯಾದ ದಾರಿಯಲ್ಲಿ ಹೋಗುತ್ತಾರೆಂದು ಭಾವಿಸಿದ್ದೆ. ಆದರೆ ಇವತ್ತು ಭ್ರಷ್ಟ ಜನರು ಯಾರು ಇದ್ದಾರೆ ಅವರಿಗೆ ವೀರಪ್ಪಮೊಯಿಲಿಯವರ ಕಾಲದಲ್ಲಿ ಸಿಕ್ಕಿರುವ ರಕ್ಷಣೆ ಬೇರೆ ಯಾವ ಕಾಲದಲ್ಲೂ ಸಿಕ್ಕಿರಲಿಲ್ಲ. ಆಶ್ರಯ ಯೋಜನೆಯಲಲ್ಲಿ ಸುಮಾರು 20 ಕೋಟಿ ರೂಪಾಯಿಗಳಷ್ಟು ಹಗರಣವಾಯಿತು. 20 ಕೋಟಿ ರೂಪಾಯಿ ಲೂಟಿ ಆಯಿತು. ಅದು ಏನಾಯಿತು? ಅದರ ಬಗ್ಗೆ ಸಿ.ಒ.ಡಿ. ವಿಚಾರಣೆ ಏನಾಯಿತು? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರಿ? ಯಾವ ಮುಖ್ಯಮಂತ್ರಿಗಳು ನಾನು ಪ್ರಾಮಾಣಿಕವಾದ ಸರ್ಕಾರವನ್ನು ನಡೆಸುತ್ತೇನೆ ಎಂದು ಹೇಳುತ್ತಿದ್ದರೋ ಯಾವ ಒತ್ತಡಕ್ಕೂ ಮಣಿಯುವುದಿಲ್ಲವೆಂದು ಹೇಳಿದ್ದರೋ, ಹಾಗಾದರೆ ಆ ಸಿ.ಒ.ಡಿ ವಿಚಾರಣೆ ಎಲ್ಲಿ? ಅಲ್ಲಿ ಇಲ್ಲಿ ಸಣ್ಣ ಫೈಲುಗಳನ್ನು ಹಿಡಿದುಕೊಂಡು ಸಣ್ಣ ಅಧಿಕಾರಿಗಳ ಮೇಲೂ ಸಹ ಕ್ರಮ ತೆಗೆದುಕೊಳ್ಳಲಿಲ್ಲ. ಅವರನ್ನು ಹಿಡಿದಿದ್ದೀರಾ? ಅವರಿಂದ 20 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದೀರಾ? ಆ ಹಣವನ್ನು ಯಾರು ದುರುಪಯೋಗ ಮಾಡಿದರು? ಅವರ ವಿರುದ್ಧ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ತಮಗೆ ಅಧಿಕಾರದ ಕಾಲಾವಧಧಿ ಮುಗಿಯುತ್ತಾ ಬಂದಿದೆ, ಇನ್ನು 4-5 ತಿಂಗಳುಗಳು ಮಾತ್ರ ಉಳಿದಿದೆ. ಇನ್ನು ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಇದು ಏನು ನಿಮ್ಮ ಸ್ವಚ್ಛ ಸರ್ಕಾರವೇ? ಇದೆ ಏನು ನಿಮ್ಮ ಭ್ರಷ್ಟಾಚಾರದ ನಿರ್ಮೂಲನೆ? ಅದರ ಜೊತೆಗೆ, ಬೆಂಗಳೂರಿನ ಸುತ್ತಮುತ್ತ ಜಮೀನಿನ ಹಗರಣವಾಗಿದೆ. ಯಾವ ಡಿವಿಜನಲ್ ಕಮೀಷನರ್‌ರವರು ಹೀಗೆ ಕಾಯಿದೆಯ ಉಲ್ಲಂಘನೆಯಾಗಿದೆ. ಅರ್ಬನ್ ಸೀಲಿಂಗ್ ಆಕ್ಟ್, ಲ್ಯಾಂಡ್ ರೆವಿನ್ಯೂ ಆಕ್ಟ್ ಲ್ಯಾಂಡ್, ರಿಫಾರ್ಮ್ಸ್ ಆಕ್ಟ್‌ನಿಂದ ಉಲ್ಲಂಘನೆಯಾಗಿದೆ ಎಂದು ಸರ್ಕಾರಕ್ಕೆ ವರದಿಯನ್ನು ಕೊಡುತ್ತಾರೋ ಅಂಥ ಅಧಿಕಾರಿಯನ್ನು ಬದಲಾವಣೆ ಮಾಡುತ್ತೀರಿ, ಯಾವ ಕಂದಾಯ ಮಂತ್ರಿಗಳು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ಹೋಗುತ್ತಾರೋ ಅವರನ್ನು ಮಂತ್ರಿ ಸ್ಥಾನದಿಂದ ಡಿಸ್ಮಿಸ್ ಮಾಡುತ್ತೀರಿ. ಇದಕ್ಕೆ ಏನು ಹೇಳಬೇಕು? ನಿಮ್ಮ ಸ್ವಚ್ಛ ಮತ್ತು ದಕ್ಷ ಸರ್ಕಾರ ಇದೇನು? ಯಾವ ಮುಖ್ಯ ಕಾರ್ಯದರ್ಶಿಯವರು ತಮಗೆ ಇಂತಿಂಥ ಭೂಮಿ ಬೆಂಗಳೂರಿನ ಸುತ್ತಮುತ್ತ ಹಗರಣವಾಗಿದೆ ಎಂದು ಮತ್ತು ಇಂತಿಂಥವರು ಇದರಲ್ಲಿ ಪಾಲುದಾರರಾಗಿದ್ದಾರೆಂದು ವರದಿಯನ್ನು ಕೊಟ್ಟಿದ್ದಾರೆ ಅದರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಆದರೆ ಅದರ ಬಗ್ಗೆ ಒಂದು ಸಬ್ಕಮಿಟಿಯನ್ನು ನೇಮಕ ಮಾಡುತ್ತೀರಿ. ಡಿವಿಜನಲ್ ಕಮೀಷನರ್‌ರವರು ವರದಿಯನ್ನು ಕೊಟ್ಟಮೇಲೆ ಅದರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದು? ತಾವು ಬಹಳ ಸ್ವಚ್ಛ, ದಕ್ಷ ಆಡಳಿತವನ್ನು ಕೊಡುವುದಾದರೆ ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಕಂದಾಯ ಮಂತ್ರಿಗಳನ್ನು ಏಕೆ ಡಿಸ್ಮಿಸ್ ಮಾಡಿದಿರಿ? ನನಗೆ ಇದರಲ್ಲಿ ವೈಯಕ್ತಿಕವಾದ ದ್ವೇಷ ಯಾರಮೇಲೂ ಇಲ್ಲ.

ತಾವೇ ಸ್ವಚ್ಛ, ಒಳ್ಳೆಯ ಆಡಳಿತವನ್ನು ಕೊಡುತ್ತೇನೆಂದು ಹೇಳಿದ್ದೀರಿ. ಯಾವ ಮುಖ್ಯ ಕಾರ್ಯದರ್ಶಿಯವರು ನಿಮಗೆ ವರದಿಯನ್ನು ಕೊಟ್ಟರು ಅದು ಏನಾಯಿತು? ಅದನ್ನು ಮತ್ತು ಡಿವಿಜನಲ್ ಕಮೀಷನರ್‌ರವರು ಕೊಟ್ಟಿರುವ ವರದಿಯನ್ನು ತಾವು ಸದನದ ಮುಂದೆ ಇಡಲು ತಯಾರಾಗಿದ್ದೀರಾ? ಆದರೆ ಅದರಲ್ಲಿ ತಮ್ಮ ಪಕ್ಷದ ಕೆಲವರು ಶಾಮೀಲಾಗಿದ್ದಾರೆಂದು ಅವರ ಹಿತಕ್ಕೆ ಬಾಧಕವಾದರೆ ಮುಖ್ಯಮಂತ್ರಿಗಳ ಹಿತಕ್ಕೆ ಬಾಧಕ ಬರಬಹುದು ತಮ್ಮ ಹಿತವನ್ನು ರಕ್ಷಣೆ ಮಾಡುವುದಕ್ಕಾಗಿ ಅವರನ್ನು ಪ್ರೊಟೆಕ್ಟ್ ಮಾಡಿ ಒಂದು ಕ್ಯಾಬಿನೇಟ್ ಸಬ್-ಕಮಿಟಿಯನ್ನು ಮಾಡಿ ಆ ವಿಷಯವನ್ನು ಮುಂದಕ್ಕೆ ಹಾಕಲು ಪ್ರಯತ್ನ ಮಾಡಿದ್ದೀರೋ ಹೊರತು ಇದರಲ್ಲಿ ಪ್ರಾಮಾಣಿಕವಾಗಿ ಇಂಥ ತಪ್ಪುಗಳಾಗಿದೆ, ಇಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಲಿಲ್ಲ. ನ್ಯಾಯಾಂಗ ತನಿಖೆಯನ್ನು ಮಾಡಿ ಎಂದು ಅವರುಗಳು ಹೇಳಿದ್ದಾರೆ. ಆದರೆ ಮುಖ್ಯಮಂತ್ರಿಗಳು ಅದನ್ನು ಮಾಡಲು ತಯಾರಾಗಿಲ್ಲ. ಇದಕ್ಕೆ ಕಾರಣವೇ ಇಲ್ಲ. ಇವತ್ತು ಸ್ವಚ್ಛ ಮತ್ತು ಒಳ್ಳೆಯ ಆಡಳಿತವಿದ್ದರೆ ತಮಗೆ ಆ ಪ್ರಶ್ನೆಯನ್ನು ಕೇಳುವ ಪ್ರಸಂಗವೇ ಬರುತ್ತಿರಲಿಲ್ಲ. ವ್ಯಕ್ತಿಗತವಾಗಿ ಯಾರಬಗ್ಗೆಯೂ ಸಹ ನನಗೆ ವೈಯಕ್ತಿಕವಾದ ದ್ವೇಷವಿಲ್ಲ. ಆದರೆ ಒಮ್ಮೆ ಅಧಿಕಾರದಲ್ಲಿದ್ದಾಗ ಅದು ನಿಮ್ಮ ಪಕ್ಷವಿರಲಿ, ವಿರೋಧ ಪಕ್ಷವಿರಲಿ ಯಾವುದೇ ತಪ್ಪು ಮಾಡಿದಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಶಕ್ತಿ ಸರ್ಕಾರದಲ್ಲಿರಬೇಕಾಗುತ್ತದೆ. ಆದರೆ ನನ್ನ ಅಧಿಕಾರ ಹೋಗುತ್ತದೆಂದು ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳದಿದ್ದರೆ ನಾನು ಅಧಿಕಾರವನ್ನು ಬಿಡಬೇಕಾಗುತ್ತದೆಂದು, ಅಂಥ ಭಯದಿಂದ ತಾವು ಇಂಥ ಜನರಿಗೆ ರಕ್ಷಣೆಯನ್ನು ಕೊಟ್ಟರೆ, ಜನರು ನಿಮ್ಮನ್ನು ನಂಬುತ್ತಾರೆಂದು ಭಾವಿಸುತ್ತೀರೋ?

ಈ ಆಶ್ರಯ ಯೋಜನೆಯಲ್ಲಿ ಏನಾಗಿದೆ. ಎಷ್ಟು ಮನೆಗಳನ್ನು ಕಟ್ಟಿದ್ದಾರೆ, ಏನೇನು ಮಾಡಿದ್ದಾರೆ, I will come to it afterwards.

ಪ್ರತಿಯೊಂದು ಹಂತದಲ್ಲೂ ಇವತ್ತು ಮೋಸ ನಡೆಯುತ್ತಿದೆಯೇ ವಿನಃ ಯಾವ ವಿಧದಲ್ಲೂ ಬಡವರಿಗೆ, ಕಡುಬಡವರಿಗೆ, ಹಿಂದುಳಿದ ಜನಾಂಗದವರಿಗೆ, ಪರಿಶಿಷ್ಟ ಜನಾಂಗಕ್ಕೆ ಸಹಾಯಕವಾಗುವಂತಹ ಕಾರ್ಯಕ್ರಮ ಈ ಸರ್ಕಾರದ ಮುಂದೆ ಇವತ್ತು ಇಲ್ಲ, ಯಾವತ್ತೂ ಇಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪಂಚಾಯತ್ ಚುನಾವಣೆಯ ಬಗ್ಗೆ ಮೆನ್‌ಷನ್ ಆಗಿದೆ. ತಾವು ಪಂಚಾಯತ್‌ರಾಜ್ ಚುನಾವಣೆಯನ್ನು ಮಾಡಿದ್ದೀರಿ. ಮಾನ್ಯ ಘೋರ್ಪಡೆಯವರ ಬಗ್ಗೆ ನನಗೆ ಗೌರವವಿದೆ. I have respect and regard.

ಅವರ ಕಮಿಟ್ಮೆಂಟ್ ಬಗ್ಗೆ ನನ್ನ ವಾದವಿಲ್ಲ. ಆದರೆ ಪ್ರಾಮಾಣಿಕವಾಗಿ ತಾವೇ ಹೇಳಿ. ನಿಮ್ಮ ಪಂಚಾಯತ್‌ರಾಜ್ ಚುನಾವಣೆಯಲ್ಲಿ ತಾವು ಏನು ಮಾಡಿದ್ದೀರಿ. ಅದರಿಂದ ನಿಜವಾಗಿ ಹಿಂದುಳಿದ ಜನರ ಕೈಗೆ ಅಧಿಕಾರ ಹೋಗಿದೆಯೇ? ಪ್ರಾಮಾಣಿಕವಾಗಿ ಮಾತನಾಡಿ ಅದೇ ಪಾರ್ಟಿ ಇವತ್ತು ಚುನಾವಣೆಗೆ ನಿಲ್ಲಬೇಕು. ಇವತ್ತು economic criteria ಎಂದು ಹೇಳಿ, ಬ್ರಾಹ್ಮಣರನ್ನು ಬ್ಯಾಕ್ವರ್ಡ್ ಮಾಡಿದ್ದೀರಿ. 8 ಸಾವಿರ ಏನು ಆದಾಯವಿದೆ ಮತ್ತು 10 ಸಾವಿರ ಆದಾಯದ ಮಿತಿ ಏನಾಗಿದೆ. I do not want reservation for Brahmins. ಅದರ ಬಗ್ಗೆ ನಾನು ಹೇಳುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಬ್ಯಾಕ್ವರ್ಡ್ ಆಗುವುದು ಬೇಡವೇ?

ಶ್ರೀ ಆರ್. ವಿ. ದೇಶಪಾಂಡೆ : ಅವಶ್ಯಕತೆ ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಒ.ಬಿ.ಸಿ. ಡೆಫಿನಿಷನ್ ಏನಿದೆ. ಅದು ಜನತಾಪಕ್ಷ ಮಾಡಿದ್ದುದು ಅದನ್ನು ನಾವು...

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಅದು ಎಜುಕೇಷನ್....

ಶ್ರೀ ಎಂ. ವೈ. ಘೋರ್ಪಡೆ : ಒ.ಬಿ.ಸಿ. ಡೆಫಿನಿಷನ್ ಫ್ಯಾಕ್ಟ್ ಬಗ್ಗೆ ಹೇಳುತ್ತಿದ್ದೇನೆ ಅಷ್ಟೇ. ನಾನೇನು ಟೀಕೆ ಮಾಡುತ್ತಾ ಇಲ್ಲ, ಇದರಲ್ಲ ಎ.ಬಿ.ಸಿ.ಡಿ.ಇ. ಎಂದು ಕ್ಲಾಸಿಫಿಕೇಷನ್ ಮಾಡಿ ಅದರಲ್ಲಿ (ಎ) ಬಿಟ್ಟರೆ ಬಾಕಿ ಕ್ಯಾಟಗರಿಗೆ 10 ಸಾವಿರ ರೂ. (ಇ)ಗೆ 8 ಸಾವಿರ ರೂ. ಎಂದು ಆ ಕಾಲಕ್ಕೆ ಮಾಡಿದ್ದಾರೆ. ಅಷ್ಟೇ ಅಲ್ಲ, ಈ ಡೆಫಿನಿಷನ್ ಆಧಾರದ ಮೇಲೆ ನೀವು ನೇಮಕ ಮಾಡುತ್ತಿದ್ದೀರಿ. ನಾಮಿನೇಷನ್ in the name of backward classes ಮಾಡುತ್ತಿದ್ದೀರಿ.

ಇದು ಬ್ಯಾಕ್ವರ್ಡ್ ಕ್ಲಾಸ್ಗೆ ಅಷ್ಟೇ ಅಲ್ಲ, ಇದು ಪ್ರಜಾಪ್ರಭುತ್ವಕ್ಕೂ ಕೂಡ ವಂಚನೆಯಾಗಿದೆ ಎಂದು ಆಗಲೂ ಹೇಳಿದೆ, ಈಗಲೂ ಹೇಳುತ್ತಾ ಇದ್ದೇನೆ. ನೀವು ನಾಮಿನೇಷನ್ ಏನು ಮಾಡುತ್ತಿದ್ದೀರಿ ಆ ನಾಮಿನೇಷನ್ ಮೇಲೆ ಬ್ಯಾಕ್ವರ್ಡ್ ಕ್ಲಾಸ್ನಲ್ಲಿ ಸಾಕಷ್ಟು ಜನ ಎಲ್ಲಿ ಆರಿಸಿ ಬಂದಿಲ್ಲ ಅಲ್ಲಿ ಇಬ್ಬರನ್ನು ನೇಮಕ ಮಾಡಿ ಆ ಮಂಡಲ್ಪಂಚಾಯತ್ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ, ಎಷ್ಟೋ ಕಡೆ ಯಶಸ್ಸು ಆಗಿದ್ದೀರಿ. ಆದರೆ ನಾವು ಅದನ್ನು ತೆಗೆದುಹಾಕಿ ಈ ರೀತಿ ಹಿಂಭಾಗಿಲಿನಿಂದ ನಾಮಿನೇಷನ್ ಮಾಡುವುದು ಬೇಡ ಅಂತ ಮಾಡಿದ್ದೇವೆ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಆದಕಾರಣ right royal way reservation ನಾವು ಕೌನ್ಸಿಲ್ನಲ್ಲಿ ಮಾತು ಕೊಟ್ಟಿದ್ದೇವೆ. ಆರ್ಟಿಕಲ್ 16(4)&15(4) ಡೆಫಿನಿಷನ್ನಲ್ಲಿ ಮೀಸಲಾತಿ ಬಗ್ಗೆ ಇದೆ. ಅದೇ ಪ್ರಕಾರ ಒ.ಬಿ.ಸಿ. ಮೀಸಲಾತಿ ಡೆಫಿನಿಷನ್ ಹಾಗೆ ಮಾಡುವುದು ಬೇಡ. ಎಲ್ಲಿಯವರೆಗೂ 68,78, OBC Order, ಇದೆ ಅದು ಇಲ್ಲಿ ಅನ್ವಯಿಸಬೇಕೆಂದು ನಾವು ಅದನ್ನು ಒಪ್ಪಿಕೊಂಡು ಮಾಡಿದ್ದೇವೆ. ಆದುದರಿಂದ ಇದಕ್ಕೆ ಇನ್ನು ಒಂದು ಕಾರಣವಿದೆ. ಪಂಚಾಯತ್ರಾಜ್ ವಿಕೇಂದ್ರೀಕರಣದ ಅಧಿಕಾರವನ್ನು ಜನರಿಗೆ ಕೊಡಬೇಕೆಂದು ಇದೆ. ಅದನ್ನು ಬದಲಾಯಿಸಿ ಯಾವುದೋ ಒಂದು Communal disturbance ಗೆ ಅವಕಾಶ ಮಾಡಿಕೊಡುವುದು ಬೇಡವೆಂಬ ದೃಷ್ಟಿಯಿಂದ ಮಾಡಿದ್ದೇವೆ. ಇದರಲ್ಲಿ ಸಾಕಷ್ಟು ಬಡಜನರು ಬರುವುದಕ್ಕೆ ಅವಕಾಶವಿದೆ. ಮತ್ತು ಎಲ್ಲಾ ಜಾತಿಯ ಬಡವರ್ಗದ ಜನರಿಗೂ ಬರುವುದಕ್ಕೆ ಅವಕಾಶವಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಬಡಜನರು ಎಂದರೆ ಕೇಂದ್ರ ಮಂತ್ರಿಗಳಾದ ಶ್ರೀಮತಿ ಬಸವರಾಜೇಶ್ವರಿಯವರ ಮಗನೇ? ಅವರು ಬಡಜನರೆಂದು ಸರ್ಟಿಫಿಕೇಟ್ ತೆಗೆದುಕೊಂಡು ಗೆದ್ದಿದ್ದಾರೆ. ಅದಕ್ಕೆ ತಾವು ಏನು ಹೇಳುತ್ತೀರಿ? ಬಡಜನರು ಎಂದು ಹೇಳಿ ಹಿಂದುಳಿದವರಿಗೆ ಅನ್ಯಾಯ ಮಾಡಿದ್ದೀರಿ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಎಂ. ವೈ. ಘೋರ್ಪಡೆ : ಶೇ. 92 ರಷ್ಟು ಜನರು ಒ.ಬಿ.ಸಿ. ಡೆಫಿನೇಶನೊಳಗೆ ಬರುತ್ತಾರೆ. ಅದಕ್ಕೆ ಆದಾಯ ಮಿತಿ ಇದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ತಾವು ಗಮನದಲ್ಲಿಟ್ಟುಕೊಳ್ಳಿ ಶೇ. 92 ರಷ್ಟು ಜನರು ಬರುತ್ತಾರೆ. Subject to income. ನಾವು ಅದನ್ನು ಬದಲಾಯಿಸಿ ಒ.ಬಿ.ಸಿ.ಯಲ್ಲಿ ಶೇ. 30 ರಷ್ಟು ಇಟ್ಟಿದ್ದರೆ ಆಗ ಇನ್ನುಳಿದ ಶೇ. 60 ಜನರು ನಮ್ಮದು ಬಿಟ್ಟು ಹೋಯಿತು ಎಂದು ಹೇಳುತ್ತಾರೆ. ಹಾಗೆ ಆಗಬಾರದು ಎನ್ನುವ ದೃಷ್ಟಿಯಿಂದ ಇಲ್ಲಿ ಈ ಡೆಫಿನಿಷನ್ ಪ್ರಕಾರ ಸಾಕಷ್ಟು ಪರಿವರ್ತನೆ ಗ್ರಾಮಮಟ್ಟದಲ್ಲಿ ಆಗುತ್ತದೆ ಎಂದು ನಂಬಿದ್ದೆವು. ನಾವು ಆಗಿರುವುದನ್ನು ಕಣ್ಣಾರೆ ಕಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದರಲ್ಲಿ ಯಾವ ಬದಲಾವಣೆಯಾಗಿಲ್ಲ ಎಂದು ಹೇಳಿದರೆ ಅವರು ನನ್ನ ಜೊತೆ ಬರಲಿ, ಹಳ್ಳಿಗೆ ಹೋದರೆ ಗ್ರಾಮ ಮಟ್ಟದಲ್ಲಿ ಎಷ್ಟು ಸಂತೋಷ ಪಟ್ಟಿದ್ದಾರೆ. ನಾವು ಯಾವ ಕಾಲದಲ್ಲೂ ಇಷ್ಟೊಂದು ಅಧಿಕಾರ, ಇಂತಹ ಅವಕಾಶ ನೋಡಿರಲಿಲ್ಲ. ನೋಡಿ ಅದು ಬಂದಿದೆ ಎಂದು ಎಲ್ಲರಿಗೂ ಕೂಡ ಅವರು ಆಶೀರ್ವಾದ ಮಾಡುತ್ತಿದ್ದಾರೆ. ಇಲ್ಲಿ ರಾಜ್ಯಮಟ್ಟದಲ್ಲಿ ರಾಜಕೀಯ ನಮಗೆ ಅನುಕೂಲವಾಗಿ

ಇಲ್ಲದೇ ಇದ್ದರೂ ಕೂಡ ಹಳ್ಳಿ ಮಟ್ಟದಲ್ಲಿ ಜನ ನಮಗೆ ಸಂಪೂರ್ಣವಾಗಿ ಆಶೀರ್ವಾದ ಮಾಡುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಮಂತ್ರಿಗಳಲ್ಲಿ ನಾನು ನೇರವಾಗಿ ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದುಳಿದ ವರ್ಗಗಳ ವರ್ಗೀಕರಣ ಮಾಡಿದ್ದು 68,78 ಎಂದು ಹೇಳಿದರು. ಅದು ಎರಡು ವರ್ಷಗಳಲ್ಲೂ ಇರಲಿಲ್ಲ. ಅದು 88 ಮಾಡಿದ್ದುದು ನಾನು ಆ ಸರ್ಕಾರದಲ್ಲಿ ಮಂತ್ರಿಯಾಗಿದ್ದೆ, ಕೆಲವು ಕಾಲ ಶಾಸಕನು ಆಗಿದ್ದೆ. ಆ ವರ್ಗೀಕರಣ ಮಾಡಿದ್ದರಿಂದ ನೀವೇ ಮಾಡಿದ ವರ್ಗೀಕರಣವನ್ನು ನಾವು ಅನುಸರಿಸಿದ್ದೇವೆ ಎನ್ನುವ ವಾದವನ್ನು ನಮ್ಮ ಮುಂದೆ ಇಡುತ್ತಿದ್ದೀರಿ. ನಾವು ಮಾಡಿದಂತಹ ವರ್ಗೀಕರಣ ಸರಿಯೇ ಅಥವಾ ತಪ್ಪೇ ಎನ್ನುವಂಥದ್ದನ್ನು ವಿವೇಚನೆ ಮಾಡಿ, ಕೇಂದ್ರೀಕೃತ ವ್ಯವಸ್ಥೆಯ ಸಂಕೇತ ನೀವು. ನಿಮಗೆ ಏನು ಅರ್ಥವಾಗುತ್ತದೆ ವಿಕೇಂದ್ರೀಕರಣ. ಮಹಾರಾಜ ಮನೆತನದವರಿಗೆ ಏನು ಅರ್ಥವಾಗುತ್ತದೆ ಸ್ವಾಮಿ?

ಶ್ರೀ ಎಂ.ವೈ. ಘೋರ್ಪಡೆ : ನೀವು ಈ ರೀತಿ ಮಾತನಾಡುವುದು ಸರಿಯಲ್ಲ. ನಾವು ಯಾವ ಮನೆತನದ ಪರವಾಗಿ ಇಲ್ಲಿ ಆರಿಸಿ ಬಂದಿಲ್ಲ. ಕರ್ನಾಟಕದ ಜನತೆ ಆರಿಸಿದ್ದಾರೆ. ಅವರಿಗೆ ಎಷ್ಟು ಹಕ್ಕಿದೆ ಅಷ್ಟೇ ನನಗೂ ಹಕ್ಕಿದೆ. ಆದುದರಿಂದ ಪದೇ ಪದೇ ಮನೆತನದೇ ವಿಷಯ ಇವರು ಎತ್ತಬಾರದು. ಸಭೆಯನ್ನು ತಪ್ಪು ದಾರಿಗೆ ಎಳೆದಂತೆ ಆಗುತ್ತದೆ, ವಂಚನೆ ಮಾಡಿದಂತೆ ಆಗುತ್ತದೆ. ಪುನಃ ನಾನು ಹೇಳುತ್ತಿದ್ದೇನೆ, ನಾನು ಯಾವ ಮನೆತನದ ವತಿಯಿಂದ ಇಲ್ಲಿಗೆ ಬಂದಿಲ್ಲ. ನೀವು ಹೇಗೆ ಇದ್ದೀರಿ, ನಿಮ್ಮನ್ನು ಯಾವ ರೀತಿ ಜನ ಆರಿಸಿದ್ದಾರೆ ಅದೇ ರೀತಿ ನನ್ನನ್ನು ಆರಿಸಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಕೋಪ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ನೀವು ಪದವನ್ನೇ ಅರ್ಥ ಮಾಡಿಕೊಳ್ಳಲಿಲ್ಲ. ನಾನು ಉಪಯೋಗಿಸುವ ಪದ ವ್ಯವಸ್ಥೆ ಬಗ್ಗೆ ಮತ ಅಲ್ಲ, ನಿಮ್ಮ ಕುಟುಂಬ ಅಲ್ಲ, ನಿಮ್ಮ ಮನೆತನ ಅಲ್ಲ. ನಾನು ಉಪಯೋಗಿಸದ ಪದ ವ್ಯವಸ್ಥೆ ಬಗ್ಗೆ I used the work 'system'.

ಅದನ್ನು ನಾನು ಹೇಳಿದ್ದುದು. ದಯಮಾಡಿ ಅರ್ಥ ಮಾಡಿಕೊಳ್ಳಿ. ನೀವು ಕೋಪ ಮಾಡಿಕೊಳ್ಳುವುದಕ್ಕೆ ಕಾರಣ ಏನು? ಕಾರಣ ಇಲ್ಲ.

ನಾನು ಕೇಳಬೇಕಾಗಿರತಕ್ಕಂಥಾದ್ದು ಇಷ್ಟೇ, ಹಿಂದುಳಿದ ವರ್ಗಗಳ ವರ್ಗೀಕರಣ ಮಾಡಿದಂಥ ಅಚಾತುರ್ಯವನ್ನು ನಮ್ಮ ಸರ್ಕಾರದಲ್ಲಿ ನಾವು ಮಾಡಿಬಿಟ್ಟಿದ್ದೇವೆ. ಮಾನ್ಯ ರಂಗನಾಥ್‌ರವರು ಆಗ ಅಲ್ಲಿ ಕುಳಿತುಕೊಂಡಿದ್ದರು. ಅದಕ್ಕೆ ಕಾರಣ ಇದೆ. ಏಕೆ ಎಂದರೆ ನಮ್ಮ ಸರ್ಕಾರದಲ್ಲಿ ಮುಖ್ಯಮಂತ್ರಿ ಆಗಿದ್ದವರು ಒಬ್ಬರು. ಬ್ರಾಹ್ಮಣರು. ಇನ್ನೊಬ್ಬರು ಲಿಂಗಾಯಿತರು. ಇವರು ಮುಂದುವರೆದ ವರ್ಗಕ್ಕೆ ಸೇರಿದಂತವರು. ಅವರು ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡುವುದಕ್ಕಾಗಿಯೇ ಇದನ್ನು ಮಾಡಿ ಬಿಟ್ಟಿದ್ದಾರೆ ಎಂದು ಒಂದು ಭಾವನೆಯನ್ನು ನೀವು ತಾಳಿಕೊಂಡಿರಬಹುದು. ಅಥವಾ ಸಾರ್ವಜನಿಕರಲ್ಲಿ

ಈ ಭಾವನೆ ಇರಬಹುದು. ಮಾನ್ಯ ಬಂಗಾರಪ್ಪನವರು ಯಾವ ಜಾತಿ ಇರಬಹುದು, ಯಾವ ವರ್ಗಕ್ಕೆ ಸೇರಿದವರು. ನಿಮ್ಮ ಹಾಲಿ ಮಂತ್ರಿಗಳಾದಂತಹ ವೀರಪ್ಪ ಮೊಯಿಲಿಯವರು ಯಾವ ವರ್ಗಕ್ಕೆ ಸೇರಿದಂತಹವರು. ಈ ಒಂದು ಮೇಲುಜಾತಿಯವರು ತಂದಂತಹ ಹಿಂದುಳಿದ ವರ್ಗದ ವರ್ಗೀಕರಣ ವ್ಯವಸ್ಥೆ ಸರಿಯಾಗಿಲ್ಲದೆ ಇದ್ದರೆ ಹಿಂದುಳಿದ ವರ್ಗಕ್ಕೆ ಸೇರಿದ ನಿಮ್ಮ ಇಬ್ಬರೂ ಮುಖ್ಯಮಂತ್ರಿಗಳು ಕಿತ್ತು ಒಗೆದು ಬದಲಾವಣೆಯನ್ನು ಏಕೆ ಮಾಡಲಿಲ್ಲ? ಅದಕ್ಕೆ ಉತ್ತರ ಕೊಡಿ ಆಮೇಲೆ ಮಾತನಾಡೋಣ.

ಶ್ರೀ ಕೆ.ಹೆಚ್. ರಂಗನಾಥ್ : ಸುಮ್ಮನೆ ನೀವು ಯಾವುದನ್ನೋ ಊಹೆ ಮಾಡಿಕೊಂಡು ಮಾತನಾಡಿದರೆ ಇಲ್ಲಿ ಯಾರು ಉತ್ತರ ಕೊಡುತ್ತಾರೆ?

ಶ್ರೀ ವೈ.ಕೆ. ರಾಮಯ್ಯ : ಪ್ರತಿಸಾರಿ ಹೇಳುತ್ತೀರಿ, ನೀವೇ ತಂದಿದ್ದು ನೀವೇ ತಂದಿದ್ದು ಎಂದು ಆಯಿತು ನಾವು ತಂದುಬಿಟ್ಟಿದ್ದೇವೆ, ಸರಿಯಾಗಿಲ್ಲ ಎನ್ನುವುದಾದರೆ ಅದನ್ನು ನೀವು ಕಿತ್ತು ಹಾಕಿಬಿಡಿ ಹಾಗಾದರೆ.

ಶ್ರೀ ಕೆ.ಹೆಚ್. ರಂಗನಾಥ್ : ನಾವು ಸ್ವಲ್ಪ ನಿಲ್ಲಿಸಿ ಮಾಡೋಣ ಎಂದು ಇದ್ದೆವು. ಇವರಿಗೆ ಅದೇ ಕಾರಣ. ಜನಗಳಿಗೆಲ್ಲಾ ಉತ್ತೇಜನ ಮಾಡಿ, ಹಳ್ಳಿಹಳ್ಳಿಗೆ ಹೋಗಿ ನೋಡಿ, ಪಂಚಾಯತ್ ಎಲೆಕ್ಷನ್ ಆಗಿಲ್ಲ ಎಂದು ಹರಿಕಥೆ ಮಾಡಿಬಿಟ್ಟಿರಿ. ನಾವು ಅದಕ್ಕೆ ಏನು ಕಷ್ಟ ಇದೆ ಎಂದು ಹೇಳಿ ನೋಡಿದಾಗ ನಮಗೆ ಉಚ್ಚ ನ್ಯಾಯಾಲಯದವರಿಂದ ಬೇರೆ ಒಂದು ತೀರ್ಮಾನ ಬಂತು. ಹೀಗಾಗಿ ಅವಸರದಲ್ಲಿ ಆಗಿದೆ. ಅವಸರದಲ್ಲಿ ಹಡೆದ ಕೂಸನ್ನು ಎತ್ತಿ ಮುದ್ದಾಡಬೇಕಾಗಿದೆ. ಅದನ್ನು ಬಿಟ್ಟು ಹಾಗೇ ಇದೆ, ಹೀಗೆ ಇದೆ ಎಂದು ಹೇಳಿದರೆ ಹೇಗೆ?

ಶ್ರೀ ವೈ.ಕೆ. ರಾಮಯ್ಯ : ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ, ನಾವು ಹಿಂದುಳಿದ ವರ್ಗಗಳನ್ನು ವರ್ಗೀಕರಣ ಮಾಡಿದಂತಹ ವ್ಯವಸ್ಥೆ ಸರಿ ಇಲ್ಲ ಎಂದು ಹೇಳುವ ನೀವು ಹಿಂದುಳಿದ ವರ್ಗದ ಇಬ್ಬರೂ ಮುಖ್ಯಮಂತ್ರಿಗಳು ಏಕೆ ಬದಲಾವಣೆ ಮಾಡಲಿಲ್ಲ?

ಶ್ರೀ ಕೆ. ಸೋಮಪ್ಪ ಸುವರ್ಣ : ನೀವು ಮುಂದುವರಿದವರು ಬಿಡಬೇಕಲ್ಲ. ಅವರಿಗೆ ಬಹುಮತ ಬರಬೇಕಲ್ಲ.

ಶ್ರೀ ವೈ.ಕೆ. ,ರಾಮಯ್ಯ : ಎಲ್ಲಾ ಪಕ್ಷ ಮುಖ್ಯಮಂತ್ರಿಗಳಿಗೆ ಓಟಿನ ಮೇಲೆ ಗಮನ ಇಡುವುದು, ವ್ಯವಸ್ಥೆ ಮೇಲೆ ಅಲ್ಲ.

4.20 ಪಿ.ಎಂ

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಪಂಚಾಯಾತ್ ರಾಜ್ ಸಚಿವರಲ್ಲಿ ಈ ಒಂದು ಹಿಂದುಳಿದ ಜನಾಂಗದ ಬಗ್ಗೆ ನಾನು ಏನು ಹೇಳುವುದು ಅಂದರೆ, ನಾನು ಯಾವುದೇ ಸಂದರ್ಭದಲ್ಲೂ ಈ ಜಾತಿ ರಾಜಕೀಯವನ್ನು ಮಾಡಲಿಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ನನಗೆ ಆಸಕ್ತಿ ಇಲ್ಲ. ತಾವು ಈಗ ಪಂಚಾಯಿತಿ ಚುನಾವಣೆಯೆನ್ನೇನೋ ಮಾಡಿದಿರಿ, ಅದರಲ್ಲಿ ಕಾನ್ಸಿಟ್ಯೂಷನ್ನಲ್ಲಾಗಲಿ, ಮತ್ತು ನಮ್ಮ ಮಸೂದೆಯಲ್ಲಾಗಲಿ, ಹಿಂದುಳಿದ ಜನಾಂಗಕ್ಕೆ ಪ್ರಾತಿನಿಧ್ಯ ಕೊಡತಕ್ಕ ಒಂದು ಸದಿಚ್ಛೆ ಏನಿತ್ತು ಆ ಒಂದು ಸದಿಚ್ಛೆ ಜಾರಿಗೆ ಬರಲಿಲ್ಲ. ಈಗ ನಿಮ್ಮ ಸರ್ಕಾರ ಒಂದು ಆಜ್ಞೆ ಮಾಡಿತು, ಅದು ಯಾವ ಉದ್ದೇಶಕ್ಕೋಸ್ಕರ ಮಾಡಿತು? ಎಜುಕೇಷನ್ ಅಂಡ್ ಜಾಬ್, ಚುನಾವಣೆ ದೃಷ್ಟಿಯಿಂದ ಮಾಡಿಲ್ಲ. ಸ್ವಾಮಿ, ತಾವು ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ ಎಂದು ಹೇಳಿ, ಅಧಿಕಾರವನ್ನು ಕೇಂದ್ರೀಕರಣ ಮಾಡಿ ಯಾವ ಒಂದು ವರ್ಗಕ್ಕೆ ಸರಿಯಾದ ಪ್ರಾತಿನಿಧ್ಯ ಸಿಗಬೇಕಾಗಿತ್ತೋ ಅದು ಸಿಕ್ಕಲಿಲ್ಲ. ನಿಮ್ಮ ಕಾಲದಲ್ಲಿ ಇವೊತ್ತು ಏನು ನಡೆಯುತ್ತಿದೆ? ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ಬಗ್ಗೆ ಒಂದು ಆಜ್ಞೆ ಮಾಡಿದಿರಿ, ಅದು ಸರಿಯೋ ತಪ್ಪೋ ಒಂದು ಆಜ್ಞೆ ಮಾಡಿದ್ದೀರಿ, ಮತ್ತೆ ಅದನ್ನು ನೀವು ಬದಲಾವಣೆ ಮಾಡುವ ಅವಶ್ಯಕತೆ ಏನಿತ್ತು? ಇವೊತ್ತಿನ ನಿಮ್ಮ ಫೆಬ್ರುವರಿ ಆಜ್ಞೆಯನ್ನು ತಾವು ನೋಡಿ, ಈ ಆಜ್ಞೆಯಿಂದ there will be chaos; everybody will try to play fraud.

ಜಿಲ್ಲಾಧಿಕಾರಿ ಮೇಲೆ ಹೆಚ್ಚಿನ ಒತ್ತಡ ತಂದು ಪ್ರತಿಯೊಬ್ಬರು ತನಗೆ ಎಲ್ಲಿ ಬೇಕೋ ಅಲ್ಲಿಯೇ ಆ ಜನರಿಗೆ ರಿಸರ್ವೇಷನ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ವಿನಹ ಬೇರೆ ಇಲ್ಲ. ಯಾವುದೇ ಒಂದು ನಿಯಮ, ಒಂದು ಕಾನೂನು

ಮಾಡಬೇಕಾದರೆ ಅದು ಒಂದು ಪದ್ಧತಿಯಲ್ಲಿದ್ದರೆ ಅದು ಸರಿಹೋಗುತ್ತದೆ. ಈಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಏನು ಮಾಡುತ್ತಾರೋ ಅದೇ ಕಾನೂನು ನಿಯಮಗಳನ್ನು ಕೋಲಾರ ಜಿಲ್ಲೆಯಲ್ಲಿಯೂ ಹಾಕಬೇಕಾಗುತ್ತದೆ. ಒಂದೊಂದು ಜಿಲ್ಲೆಗೆ ಒಂದೊಂದು ರೀತಿಯಲ್ಲಿ ಮಾಡಿದರೆ ಅದು ಹೇಗೆ ಆಗುತ್ತದೆ? ಇವೊತ್ತು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ಬಗ್ಗೆ ಹೇಳುವುದಾದರೆ ಆ ಆಜ್ಞೆ ನಿಮ್ಮ ತಲೆ ತಿನ್ನುತ್ತದೆ. ನಿಮಗೆ ಇದರಿಂದ ಎಷ್ಟು ಕಷ್ಟ ಬರುತ್ತದೆ ಎಂದು ಮುಂದೆ ನೀವೇ ಹೇಳುತ್ತೀರಿ. ಒಂದು ತಿಂಗಳು ಆದಮೇಲೆ ನೀವು ಹೇಳಿದುದ್ದು ಸರಿ ಎಂದು ನೀವೇ ನಮಗೆ ಹೇಳುತ್ತೀರಿ. ಈಗ ಸರ್ಕಾರ ಸರಿಯೋ ಅಥವಾ ತಪ್ಪೋ ಒಂದು ಆಜ್ಞೆಯನ್ನು ಮಾಡಿದೆ, ಸರ್ಕಾರ ಈ ಪ್ರಕಾರ ಆಜ್ಞೆ ಮಾಡಿದೆ ಎಂದು ನಾವು ಹೇಳುತ್ತೇವೆ. ಈ ಪ್ರಕಾರ ರಿಸರ್ವೇಷನ್ ಇದೆ ಎಂದು ನಾವು ಹೇಳುತ್ತೇವೆ. ಇವೊತ್ತು ತಾವು ಜಿಲ್ಲಾಧಿಕಾರಿಗಳ ಕೈಗೆ ಒಂದು ಡಿಸ್ಕಿಷನ್ ಕೊಟ್ಟು ಗೊಂದಲ ವಾತಾವರಣ ನಿರ್ಮಾಣ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೀರಿ. ನಾವು ನಿಮ್ಮ ಮೇಲೆ ನೀವು ನಮ್ಮ ಮೇಲೆ ಆರೋಪ ಮಾಡುವುದು ಆಗುತ್ತಾ ಇದೆ. ಇವೊತ್ತು ತಾವು ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಮಾಡುತ್ತೇವೆಂದು ಹೇಳಿದ್ದೀರಿ ಬಹಳ ಸಂತೋಷ. I know even you have threatened to resign on this issue. Your threat of resignation I think has compelled Government to hold the elections. Let me be very frank.

ಇಲ್ಲ ಅಂದರೆ ಈ ಸರ್ಕಾರ ಆಜ್ಞೆ ಮಾಡುತ್ತಾ ಇರಲಿಲ್ಲ. ಒಂದು ಸುಪ್ರೀಮ್ ಕೋರ್ಟ್ಗೆ ಭಯ ಮತ್ತು ನಿಮ್ಮ ಒಂದು ಥ್ರೆಟ್ This has made for this Government to hold the elections for Panchayat, otherwise, there was no interest.

ಏನೋ ಒಂದು ರೀತಿಯ ಭಯ, ಚುನಾವಣೆ ಆಗುತ್ತದೆ, ಈಗ ನೀವು ತಾಲ್ಲೂಕ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಮಾಡಬೇಕೆಂದು ಒಂದು ಡೇಟ್ ಕೂಡ ಕೊಟ್ಟಿದ್ದೀರಿ ಬಹಳ ಸಂತೋಷ. ನಾನು ನಿನ್ನೆಯ ಪತ್ರಿಕೆಯ ಮೂಲಕ ತಿಳಿದುಕೊಂಡ ವಿಚಾರ ಅಂದರೆ, ನಿಮ್ಮ ಪಕ್ಷದವರೆ, ಪುನಃ ಚುನಾವಣೆಯನ್ನು ಮುಂದೆ ಹಾಕಿ, ಚುನಾವಣೆ ಮಾಡಬೇಡಿ ಎಂದು ಹೇಳುವಂಥಾದ್ದು ಶಾಸಕಾಂಗ ಪಕ್ಷದಲ್ಲಿ ನಡೆದಿರುವಂಥ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಪಕ್ಷಾತೀತವಾದ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷಕ್ಕೆ ಒಂದು ದೊಡ್ಡ ಬಹುಮತ ಬಂದಿದೆ ಎಂದು ಹೇಳಿದಾಗ ನಿಮ್ಮ ಶಾಸಕಾಂಗ ಪಕ್ಷಕ್ಕೆ ಚುನಾವಣೆ ಮಾಡಲಿಕ್ಕೆ ಏಕೆ ಭಯ? ಈಗ ನಮಗೆ ಜಾಸ್ತಿ ಬಹುಮತ ಬಂದಿದೆ ಎಂದು ನಾವು ಹೇಳುತ್ತೇವೆ, ನೀವು ನಮಗೆ ಜಾಸ್ತಿ ಬಹುಮತ ಬಂದಿದೆ ಎಂದು ನೀವು ಹೇಳುತ್ತೀರಿ, ಈಗ ನೀವು ಹೇಳುವುದು ನಿಜ ಎಂದು ನಂಬುವುದಾದರೆ ತಾಲ್ಲೂಕು ಮತ್ತು ಜಿಲ್ಲಾಪಂಚಾಯತ್ ಚುನಾವಣೆಗಳನ್ನು ಮಾಡಲಿಕ್ಕೆ ನಿಮಗೆ ಏತಕ್ಕೆ ಭಯ? ಇವೊತ್ತಿನ ದಿವಸ ಶಾಸಕಾಂಗ ಪಕ್ಷದಲ್ಲಿ ಚುನಾವಣೆ ನಡೆಯಬಾರದು ಎಂದು ಏತಕ್ಕೆ ನಡೆಯಬೇಕು? ನಾನು ಪತ್ರಿಕೆ ಮುಖಾಂತರ ಇದನ್ನು ನೋಡಿ ಹೇಳುತ್ತಿದ್ದೇನೆ. ಅದು ತಪ್ಪು ಅಂದರೆ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

Sri M.Y. Ghorpade : I for one, I want to make it clear, that I will not be a party to the postponment of either the Chairman's elections or the elections to the Taluk Panchayat and Zilla panchayat. It has already been announced by the Election Commissioner. The Government should not interfere in that, I for one will not be a party to it.

ಶ್ರೀ ಆರ್.ವಿ. ದೇಶಪಾಂಡೆ : ನಾನು ನಿಮ್ಮ ಕಮಿಟ್ಮೆಂಟ್ ಬಗ್ಗೆ ಮಾತನಾಡುತ್ತಿಲ್ಲ. ಏನು ನಡೆಯುತ್ತಿದೆ ಅದನ್ನು ಹೇಳುತ್ತಿದ್ದೇನೆ. ಈ ಒಂದು ಪಂಚಾಯತ್ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ವಿಶ್ವಾಸ ಇಲ್ಲ, ಇವೊತ್ತು ಕೇವಲ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿ ಡಂಗೂರ ಭಾರಿಸುತ್ತಾರೆಯೇ ವಿನಹ ಆ ವಿಕೇಂದ್ರೀಕರಣದಲ್ಲಿ ವಿಶ್ವಾಸ ಇವೊತ್ತು ಆಡಳಿತ ಪಕ್ಷಕ್ಕೆ ಇಲ್ಲ.

ಆದರೆ ಒಂದು ಭಯ ಏನೆಂದರೆ, ನಾವು ವಿಕೇಂದ್ರೀಕರಣ ಮಾಡಿದ್ದರಿಂದ ಪಂಚಾಯಿತ್ ವ್ಯವಸ್ಥೆ ಬಂತು, ಪಂಚಾಯಿತ್ ಸದಸ್ಯರು ಆರಿಸಿ ಬಂದರು, ಜಿಲ್ಲಾ ಪರಿಷತ್ ಸದಸ್ಯರು ಆರಿಸಿ ಬಂದರು, ಇದರಿಂದ ನಮ್ಮ ಅಧಿಕಾರ ಕಡಿಮೆ ಆಗುತ್ತದೆಯೇ ಯಾವುದೂ ಕಡಿಮೆಯಾಗುವುದಿಲ್ಲ. ಅದುವರೆಗೆ ಏತಕ್ಕೆ ಭಯ ಇರಬೇಕು? ಯಾವ ಕೆಲಸವನ್ನು ಯಾರು ಮಾಡಬೇಕೋ ಅವರೇ ಮಾಡಬೇಕು? ಶಾಸಕರ ಮೇಲೂ ಕೆಲವು ಜವಾಬ್ದಾರಿಗಳಿವೆ, ಪಂಚಾಯಿತ್ ಸದಸ್ಯರ ಮೇಲೂ ಕೆಲವು ಜವಾಬ್ದಾರಿಗಳಿವೆ. ಆದರೆ ಇವರು ಇವತ್ತು ಚುನಾವಣೆ ಮಾಡುತ್ತಾರೆಂದು ವಿಶ್ವಾಸ ಇಲ್ಲ, ರಾಜ್ಯಪಾಲರ ಭಾಷಣ ಎಂದರೆ ಸೆರೆಮೋನಿಯಲ್ ಆಗಿದೆ, ರಿಪಿಟಿಷನ್ ಆಗಿದೆ. ಇವರು ಆಡಳಿತಕ್ಕೆ ಬಂದಮೇಲೆ ಇದು 5ನೇ ರಾಜ್ಯಪಾಲರ ಭಾಷಣ. ಕಳೆದ 4 ರಾಜ್ಯಪಾಲರ ಭಾಷಣದಲ್ಲಿ ನಾವು ಚೆನ್ನಪ್ಪ ರೆಡ್ಡಿ ವರದಿಯನ್ನು ಜಾರಿಗೆ ತರುತ್ತೇವೆ, ಜಾರಿಗೆ ತರುತ್ತೇವೆ ಎಂದು ಹೇಳುತ್ತಲೇ ಬಂದಿದ್ದಾರೆ. ಇದು ಏನು? Have you not become a laughing stock, tell me frankly. You have become laughing stock. ಕಳೆದ 4 ವರ್ಷಗಳಿಂದಲೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಚೆನ್ನಪ್ಪ ರೆಡ್ಡಿಯ ವರದಿಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೀರೋ ಹೊರತು ತರಲಿಲ್ಲ. ಇದರಲ್ಲಿ ನಿಮಗಿರತಕ್ಕ ಕಷ್ಟ ಏನು? ತೊಂದರೆ ಏನು? ನಿಮಗೆ ಯಾರು ಅಡ್ಡ ಬಂದಿದ್ದಾರೆ? ನಮ್ಮ ವಿರೋಧ ಪಕ್ಷದವರು ಅಡ್ಡ ಬಂದಿದ್ದಾರೇನು?

ಶ್ರೀ ಕೆ.ಹೆಚ್. ರಂಗನಾಥ್ : ನೀವು ಅಡ್ಡ ಬಂದಿಲ್ಲ. ಇವರು ಹೇಗೆ ಎಡವಿ ಬೀಳುತ್ತಾರೋ ನೋಡೋಣವೆಂದು ನೀವು ಕಾದಿದ್ದೀರಿ. ನಾವು ತಪ್ಪಿಸಿಕೊಂಡು ಜಾರಿಗೆ ತರೋಣವೆಂದು ಕಾದಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ಬಹಳ ಹಿರಿಯರು. ಬ್ಯಾಕ್ವರ್ಡ್ ಕ್ಲಾಸ್ ಕಮಿಷನ್ನನ ರಿಪೋರ್ಟ್ ಬಗ್ಗೆ ತಮ್ಮ ಕಮಿಟ್ಮೆಂಟ್ನಲ್ಲಿ ನಮ್ಮ ಸಂಪೂರ್ಣ ವಿಶ್ವಾಸ ಇದೆ. ತಾವು ಸತತವಾಗಿ ಕಳೆದ 4 ವರ್ಷದಿಂದಲೂ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದನ್ನು ಹೇಳಿಸಿ ಈಗ ಈ ಸ್ಟೇಜ್ಗೆ ಇದನ್ನು ತಂದಿರುವುದು ಸರಿಯೇ? ಈ ಸಾರಿ ಇದನ್ನು ಏತಕ್ಕೆ ಹೇಳಿದಿರಿ? ಇದನ್ನು ಬಿಟ್ಟು ಬಿಡಿ. ಈ ವರ್ಷ ಹೇಳತಕ್ಕ ಅವಶ್ಯಕತೆ ಏನಿತ್ತು? ಕಳೆದ 4 ವರ್ಷಗಳಿಂದ ಸತತವಾಗಿ ಇದನ್ನು ಹೇಳುತ್ತಿದ್ದೀರಿ. ಇದರಿಂದ ಒಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದು ಏನೆಂದರೆ ನಿಮಗೆ ಇದರಲ್ಲಿ ಕಮಿಟ್ಮೆಂಟ್ ಇಲ್ಲ. ನಿಮ್ಮಲ್ಲಿಯೇ ಇದರ ಬಗ್ಗೆ ವಿರೋಧವಿದೆ. ನಿಮ್ಮಲ್ಲಿರತಕ್ಕ ಒಂದು ವರ್ಗ ಇದನ್ನು ಜಾರಿಗೆ ತರಬಾರದೆಂದು ಹೇಳುತ್ತಿದೆ. ಆದರೆ ನಮ್ಮ ವಿರೋಧ ಪಕ್ಷದವರೇನೂ ಇದನ್ನು ವಿರೋಧ ಮಾಡಿಲ್ಲ, ನಿಮ್ಮ ಉಪ ಮುಖ್ಯ ಮಂತ್ರಿಗಳ ಸ್ಟೇಟ್ಮೆಂಟನ್ನು ನಾನು ನೋಡಿದ್ದೇನೆ. ನಾನು ವೈಯುಕ್ತಿಕವಾಗಿ ಹೆಸರನ್ನು ಹೇಳಿ ಮಾತನಾಡುವುದಿಲ್ಲ, ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಇದರ ಬಗ್ಗೆ ನಿಮ್ಮ ಸ್ಪಷ್ಟವಾದ ನೀತಿ ಏನು? ಇನ್ನು ನಿಮ್ಮ ಕಾಲಾವಧಿ ಕೇವಲ 4-5 ತಿಂಗಳಿಗೆ. ಯಾವ ಕೆಲಸವನ್ನು ನೀವು ನಾಲ್ಕು ನಾಲ್ಕೂವರೆ ವರ್ಷಗಳಲ್ಲಿ ಮಾಡಿಲ್ಲ ಈ ಕೆಲಸವನ್ನು ನೀವು ಕೇವಲ 4-5 ತಿಂಗಳಲ್ಲಿ ಮಾಡುವುದಕ್ಕೆ ಹೇಗೆ ಸಾಧ್ಯವಿದೆ? ಪುನಃ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡುತ್ತೀರಿ. ಅದು ಸೇರುವುದಿಲ್ಲ, ಅದು ತನ್ನ ಅಭಿಪ್ರಾಯವನ್ನು ಕೊಡುವುದಿಲ್ಲ, ನೀವು ಈ ವರದಿಯನ್ನು ಜಾರಿಗೆ

ತರುವುದಿಲ್ಲ. ಮಂಡಲ್ ಕಮಿಷನ್ ವರದಿಯನ್ನು ನೀವು ಏತಕ್ಕೆ ಜಾರಿಗೆ ತಂದಿಲ್ಲ? ಕಾರಣ ಏನು? ನಿಮಗೆ ಯಾರು ತೊಂದರೆ ಮಾಡುತ್ತಿದ್ದಾರೆ?

ಶ್ರೀ ವಾಟಾಳ್ ನಾಗರಾಜ್ : ಸಚಿವ ಸಂಪುಟದ ಉಪ ಸಮಿತಿಯ ಸದಸ್ಯರು ಯಾರು?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಖಂಡ್ರೆಯವರು ಮತ್ತು ಹುಚ್ಚಮಾಸ್ತಿಗೌಡರು.

ಶ್ರೀ ವೈ.ಕೆ. ರಾಮಯ್ಯ : ಸದಸ್ಯರು ಯಾರು ಎಂದು ಗೊತ್ತಾದರೆ ರಿಪೋರ್ಟ್ ಎಷ್ಟುಬೇಗ ಬರುತ್ತದೆಂದು ನಿರೀಕ್ಷೆ ಮಾಡಬಹುದು.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಪರಿಶಿಷ್ಟ ಜಾತಿ ಜನಾಂಗವಾಗಲಿ, ಹಿಂದುಳಿದ ಜನಾಂಗವಾಗಲಿ ನಿಮ್ಮ ಮೇಲಿನ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಆ ವರ್ಗದ ಜನರಿಗಾಗಿ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ನೀವು ಯಾವುದೇ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇವತ್ತು ಸುಪ್ರೀಂ ಕೋರ್ಟ್ ಒಂದು ಆದೇಶ ನೀಡಿ ಪರ್ಮನೆಂಟ್ ಬ್ಯಾಕ್ವರ್ಡ್ ಕ್ಲಾಸ್ ಕಮಿಷನ್ ಮಾಡಬೇಕೆಂದು ಹೇಳಿದೆ. ಹಲವಾರು ರಾಜ್ಯಗಳಲ್ಲಿ ಮಾಡಿರುವಾಗ ನೀವು ಮಾಡುವುದಕ್ಕೆ ಏನು ತೊಂದರೆ? ಇದನ್ನು ನೀವು ಮಾಡಬೇಕು. ಆದರೆ ಮಾಡುತ್ತಿಲ್ಲ. ತಾವು ಇಲ್ಲಿ ಬಂದು ಅಧಿಕಾರದಲ್ಲಿ ಕುಳಿತಿರುವುದಕ್ಕೆ ಅಲ್ಪಸಂಖ್ಯಾತ ಜನರನ್ನು ಮತ್ತು ಪರಿಶಿಷ್ಟ ಜಾತಿಯ ಜನರನ್ನು ನೀವು ನೆನೆಸಿಕೊಳ್ಳಬೇಕು. ಅವರು ನಿಮ್ಮಲ್ಲಿ ನಂಬಿಕೆ ಇಟ್ಟಿದ್ದಾರೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ನೀವು ಕೇವಲ ಕಚ್ಚಾಟ, ಜಗಳ ಮಾಡಿಕೊಂಡು ಆ ಜನರನ್ನು ಮರೆತು ಪುನಃ ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೆ ತರುತ್ತೇವೆ. 15 ಪಾಯಿಂಟ್ ಮೈನಾರಿಟೀಸ್ ಕಮಿಷನ್ ವರದಿಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೀರಿ.

ಇದರಲ್ಲಿ you have become laughing stock...

ಯಾವ ಪ್ರಕಾರ ಜನ ಇವರನ್ನು ನಂಬುತ್ತಾರೆ? ಇವತ್ತು ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಾವು ಟೀಕೆ ಟಿಪ್ಪಣಿ ಮಾಡಿದರೆ ಅದನ್ನು ಸಹಿಸಿಕೊಳ್ಳುತ್ತಾರೆ. ಆದರೆ ತಪ್ಪಿ ಏನಾದರೂ ಮಾನ್ಯ ನರಸಿಂಹರಾಯರ ಹೆಸರನ್ನು ತೆಗೆದುಕೊಂಡರೆ ಬಹಳ ಸಿಟ್ಟು ಬರುತ್ತದೆ. ಹೀಗಾಗಿ ಮಾನ್ಯ ನರಸಿಂಹರಾಯರ ಹೆಸರನ್ನು ನಾನು ತೆಗೆದುಕೊಳ್ಳುವುದಿಲ್ಲ. ಇನ್ನು ನಿರುದ್ಯೋಗದ ಸಮಸ್ಯೆ ಬಗ್ಗೆ ಹೇಳಿದ್ದೀರಿ. ಕೇಂದ್ರ ಸರ್ಕಾರದ ರೋಜ್ಗಾರ್, ಐಆರ್‌ಡಿಪಿ ಮುಂತಾದ ಹಲವಾರು ಕಾರ್ಯಕ್ರಮ ಜಾರಿಯಲ್ಲಿವೆ. ಅವುಗಳಿಂದ ರಾಜ್ಯದ ನಿರುದ್ಯೋಗ ಸಮಸ್ಯೆ ಪರಿಹರಿಸುತ್ತೇವೆಂದು ಹೇಳಿದ್ದೀರಿ. ಈಗ ನನಗೆ ಮುಖ್ಯಮಂತ್ರಿಯವರಿಂದ ಸ್ಪಷ್ಟೀಕರಣ ಬೇಕು. ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಿಮ್ಮಿಂದ ಈ ನಿರುದ್ಯೋಗ ಸಮಸ್ಯೆ ನಿವಾರಣೆ ಬಗ್ಗೆ ಆದಂತಹ ಪ್ರಯತ್ನಗಳು ಏನು? ಕೇವಲ ಕಾರ್ಯಕ್ರಮಗಳ ಘೋಷಣೆ. ಬಂಗಾರಪ್ಪನವರು "ವಿಶ್ವ" ಮಾಡಿದರು. ವಿಶ್ವ ಕಾರ್ಯಕ್ರಮ ಏನು? ನಿರುದ್ಯೋಗ ಸಮಸ್ಯೆ ದೂರ ಆಗಬೇಕು. ಪ್ರಧಾನಿಗಳು ಬಂದರು. "ವಿಶ್ವ" ಕಾರ್ಯಕ್ರಮ ಉದ್ಘಾಟನೆ ಮಾಡಿದರು. ವಿಶ್ವ ಯೋಜನೆಯಲ್ಲಿ ಉದ್ಯೋಗಾವಕಾಶವನ್ನು ಸರ್ಕಾರ ಸೃಷ್ಟಿಸಿದೆಯೇ? ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ ಒಬ್ಬರಿಗೂ ಇಲ್ಲ. ಸದಸ್ಯರುಗಳೇ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಅದರ ಬಗ್ಗೆ ಎಷ್ಟರ ಮಟ್ಟಿಗೆ ಕೆಲಸ ಆಗಿದೆ ಅಂತ ನಿಮ್ಮ ಮನಸ್ಸಿಗೆ ಪ್ರಶ್ನೆ ಹಾಕಿಕೊಂಡು ಉತ್ತರ ಕೊಡಿ. ಎಷ್ಟು ಜನರಿಗೆ ಇದರಿಂದ ಪ್ರಯೋಜನ ಆಗಿದೆ? ಬಂಗಾರಪ್ಪನವರು ಹೋದಮೇಲೆ, ವಿಶ್ವ ಕಾರ್ಯಕ್ರಮವೂ ಹೋಯಿತು. ಆದರೆ ಕಾರ್ಯಕ್ರಮ ಉದ್ಘಾಟನೆ ಮಾಡಿದ ಪ್ರಧಾನಮಂತ್ರಿಗಳು ಇನ್ನೂ ಅಧಿಕಾರದಲ್ಲಿ ಇದ್ದಾರೆ. ಮುಖ್ಯಮಂತ್ರಿಗಳು ಇದಕ್ಕಾದರೂ ಈ ಕಾರ್ಯಕ್ರಮಗಳನ್ನು ಮುಂದುವರಿಸಬೇಕಾಗಿತ್ತು. ಮುಖ್ಯಮಂತ್ರಿಗಳು

"ಉದ್ಯೋಗ ಜ್ಯೋತಿ" ಎಂದು ಹಲವಾರು ಕಾರ್ಯಕ್ರಮಗಳನ್ನು ಹೇಳಿದರು. ಎಷ್ಟು ಜನರ ಸಮಸ್ಯೆಯನ್ನು ತಾವು ಬಗೆಹರಿಸಿದ್ದೀರಿ? ಇವತ್ತು ಡಾಕ್ಟರ್ಸ್, ಎಂಜಿನಿಯರ್ಸ್ ಇದ್ದಾರೆ. ಇವತ್ತು ಎಸ್‌ಎಸ್‌ಎಲ್ಸಿ, ಪಿಯುಸಿ, ಬಿಎ, ಬಿಕಾಮ್ ವಿಚಾರ ಬಿಡಿ. ಯಾಂತ್ರಿಕ ಯುಗದಲ್ಲಿ ಕ್ವಾಲಿಫೈಡ್ ಎಂಜಿನಿಯರ್ಸ್, ಡಾಕ್ಟರ್ಸ್ ನಿರುದ್ಯೋಗಿಗಳಾಗಿದ್ದಾರೆ. ಕಂಪ್ಯೂಟರ್ ಎಂಜಿನಿಯರ್ಸ್, ಎಲೆಕ್ಟ್ರಿಕಲ್ ಎಂಜಿನಿಯರ್ಸ್, ಮೆಕ್ಯಾನಿಕಲ್ ಎಂಜಿನಿಯರ್ಸ್, ಪೋಸ್ಟ್ ಗ್ರ್ಯಾಜುಯೇಟ್ಸ್ ಇವತ್ತು ಈ ಸ್ಥಿತಿಯಲ್ಲಿದ್ದಾರೆ. ಕೇವಲ ನಿರುದ್ಯೋಗ ದೂರ ಮಾಡುತ್ತೇವೆ ಎಂದು ಹೇಳುವಾಗ ಅಂಕಿ ಅಂಶ ಏನು ಹೇಳುತ್ತದೆ ಎಂದು ನೋಡಿ. ನಾನು ಹಳೆಯ ವಿಚಾರಕ್ಕೆ ಹೋಗುವುದಿಲ್ಲ. ಈ ರಾಜ್ಯದಲ್ಲಿ ಪೋಸ್ಟ್‌ಗ್ರಾಜ್ಯುಯೇಟ್ಸ್, ಡಿಪ್ಲೊಮಾ ಹೋಲ್ಡರ್ಸ್ ಮತ್ತು ಬಿಲೋ ಮೆಟ್ರಿಕ್ಯುಲೇಷನ್ಸ್ ಅವರ ಸಂಖ್ಯೆ ಮಾರ್ಚಿ 91ರಲ್ಲಿ 13,27,760ಇತ್ತು. ಇವರ ಹಲವಾರು ಕಾರ್ಯಕ್ರಮದ ಪರಿಣಾಮ ಇದರಲ್ಲಿ ಬದಲಾವಣೆ ಆಗಿದೆ. ಹೀಗಾಗಿ ಈ ಸಂಖ್ಯೆ ಪುನಶ್ಚೇತನಗೊಂಡಿದೆ. ಇದು ಮಾರ್ಚಿ 92ಕ್ಕೆ 14,91,730 ಆಗಿದೆ. ಈ ವರ್ಷ ಅದು 17,70,000 ಆಗಿದೆ. ಇವರು ಅಧಿಕಾರಕ್ಕೆ ಬಂದ ನಂತರ ಸುಮಾರು 2,30,000ಕ್ಕಿಂತಲೂ ಹೆಚ್ಚು ಆಗಿದೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಯಾವ ಯಾವ ಕಾರ್ಯಕ್ರಮಗಳ ಬಂದವು, ಯಾವ ಲಾಭ ಆಗಿದೆ ಎಂದು ಹೇಳಬೇಕು. ಇವತ್ತು ರಾಜ್ಯಪಾಲರು ಬಂದು ಭಾಷಣವನ್ನು ಓದುತ್ತಾರೆ. ನಾವು ಅದನ್ನು ಕೇಳುತ್ತೇವೆ. ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಕರ್ತವ್ಯ ಮಾಡಿಕೊಂಡು ಹೋಗುತ್ತಾರೆ. ನಾವು ಕೇಳುತ್ತೇವೆ. ನಾವು ಕೇಳುತ್ತಾ ಇದ್ದೇವೆ. ಎಷ್ಟು ದಿನ ನಡೆಯಬಹುದು? ನಾನು ರಾಜ್ಯಪಾಲರ ಮೇಲೆ ಆಪಾದನೆ ಮಾಡುವುದಿಲ್ಲ. ರಾಜ್ಯಪಾಲರು ಏನು ಮಾಡುತ್ತಾರೆ? ಸರ್ಕಾರ ಬರೆದುಕೊಟ್ಟದ್ದನ್ನು ಓದುತ್ತಾರೆ. ಈ ಪ್ರಕಾರ ಎಲ್ಲಾ ಹಸಿಸುಳ್ಳು ಅವರ ಮುಖಾಂತರ ಚರ್ಚೆ ಮಾಡಿ ಅವರ ಸ್ಥಾನಕ್ಕೂ ಸಹ ಈ ಸರ್ಕಾರ ಅವಮಾನ ಮಾಡಿದೆ ಎಂದು ಹೇಳುತ್ತೇನೆ. ಸರ್ಕಾರದ ಅಭಿವೃದ್ಧಿ ಕೆಲಸಗಳಲ್ಲಿ ನನಗೆ ಅಭಿರುಚಿ. ಈ ಸರ್ಕಾರ ಬಂದಮೇಲೆ ಅಭಿವೃದ್ಧಿ ಕೆಲಸ ಮರೆತು ಹೋಗಿದೆ. ವೀರೇಂದ್ರ ಪಾಟೀಲರು ಇದ್ದಾಗ ಒಳ್ಳೆಯದು ಇತ್ತು. ಅವತ್ತು ಯೋಜನೆಗಳು ಬಹಳ ಕಡಿಮೆ ಇದ್ದವು. ಇವತ್ತು ಈ ಯೋಜನೆಗಳ ಹೆಸರು ಎಷ್ಟು ನೋಡಿ? ಬಂಗಾರಪ್ಪನವರ ಕಾಲದಲ್ಲಿ 'ವಿಶ್ವ', 'ಆಶ್ರಯ', 'ಅಕ್ಷಯ', ಶುಶ್ರೂಷ, ಆರಾಧನ, ಕೆರೆ ಕಲ್ಯಾಣ. ವೀರಪ್ಪ ಮೊಯಿಲಿಯವರು ಬಂದು ಈ ಎಲ್ಲಾ ಕಾರ್ಯಕ್ರಮಗಳನ್ನು ಬಿಟ್ಟರು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ತಾಳಿ ಭಾಗ್ಯ ಏನಾಯಿತು?

ಶ್ರೀ ಆರ್.ವಿ. ದೇಶಪಾಂಡೆ : ಇವರ 'ಉದ್ಯೋಗ ಯೋಜನೆ', 'ನೀಲಿ ಕ್ರಾಂತಿ', ನೆರಳಿನ ಭಾಗ್ಯ, ಆಶಾಕಿರಣ, ಹಲವಾರು ಇವರ ಕಾರ್ಯಕ್ರಮಗಳು. ಇನ್ನೂ 3-4 ಇವೆ.

ಶ್ರೀಮತಿ ಮೋಟಮ್ಮ : ವಿರೋಧಪಕ್ಷದ ನಾಯಕರು ಒಂದು ವಿಚಾರ ಕೇಳಬೇಕು. ನಾವು ಏನು ಯೋಜನೆಗಳನ್ನು ಹಾಕಿದ್ದೇವೆ ಅವು ನಿಮಗೆ ಇಷ್ಟ ಆಗದೇ ಇರಬಹುದು. ಆದರೆ ನಮ್ಮ ಯೋಜನೆಗಳು ಸರಿಯಿಲ್ಲ ಎಂದು ಯಾರೂ ಇದುವರೆಗೆ ಹೇಳಿಲ್ಲ. ನೀವು ಅಧಿಕಾರಕ್ಕೆ ಬಂದಾಗ 'ತಾಳಿ ಭಾಗ್ಯ' ಎಂದು ಪ್ರಾರಂಭ ಮಾಡಿದಿರಿ. ಈ ಕಾರ್ಯಕ್ರಮ ಕುರಿತು, ಅದನ್ನು ಟೀಕೆ ಮಾಡುವುದಕ್ಕೆ ಸುಧಾ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂತು. ಒಬ್ಬ ವಯಸ್ಸಾದ ಅಪ್ಪ ಸಾಯುವ ಸ್ಥಿತಿಯಲ್ಲಿ ಇರುತ್ತಾನೆ. ಅವನ ಬೇಜವಾಬ್ದಾರಿ ಮಗ ಆತನ ಪಕ್ಕ ಕುಳಿತು ಅಳುತ್ತಿರುತ್ತಾನೆ. ಇಷ್ಟು ದೊಡ್ಡವನಾಗಿ ನೀನು ಏಕೆ ಅಳುತ್ತೀಯಾ ಎಂದು ಅಪ್ಪ ಕೇಳುತ್ತಾನೆ. ಅದಕ್ಕೆ ಅವನು ನೀನು ಸತ್ತರೆ ನನ್ನ ಗತಿ ಏನು ಎಂದು ಕೇಳುತ್ತಾನೆ. ಅದಕ್ಕೆ ಅಪ್ಪ ಹೇಳುತ್ತಾನೆ, ಸರ್ಕಾರ ಇಲ್ಲವೇ ನಿನ್ನನ್ನು ನೋಡಿಕೊಳ್ಳುವುದಕ್ಕೆ ಎಂದು. ಅದಕ್ಕೆ

ಸರ್ಕಾರ ಎಂದರೆ ಏನು ಎಂದು ಆ ಮಗ ಕೇಳುತ್ತಾನೆ. ಆತ ದಡ್ಡ ಇದ್ದಿದ್ದರಿಂದ ಹಾಗೆ ಕೇಳುತ್ತಾನೆ. ಆಗ ಅಪ್ಪ ಹೇಳುತ್ತಾನೆ. ನಾನು ಸತ್ತರೆ ನೀನು ಯೋಚನೆ ಮಾಡಬೇಡ. ನಾನು ಸತ್ತರೆ ಸರ್ಕಾರ ನಿನಗೆ ಮದುವೆ ಮಾಡುತ್ತದೆ, ಬೇಕಾದರೆ ಸಾಲ ಕೊಡುತ್ತದೆ, ನಿನ್ನ ಮಕ್ಕಳಿಗೆ ಬಟ್ಟೆ ಕೊಡುತ್ತದೆ, ಪುಸ್ತಕ ಕೊಡುತ್ತದೆ ಎಂದು ಹೇಳುತ್ತಾನೆ ಎಂದರೆ ಬಹಳ ಚೆನ್ನಾಗಿ ಟೀಕೆ ಮಾಡಿದ್ದಾರೆ. ಹಾಗೆ ಟೀಕೆ ನಮ್ಮ ಯೋಜನೆಗಳ ಬಗ್ಗೆ ಬಂದಿದ್ದರೆ ನಾವು ವಿಚಾರ ಮಾಡುತ್ತಿದ್ದೆವು. ನಮ್ಮ ಯೋಜನೆಗಳನ್ನು ಜನ ಒಪ್ಪಿದ್ದಾರೆ. ಆಶ್ರಯ, ವಿಶ್ವ ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಜನರ ಬಾಯಿ, ಕೈ, ಕಿವಿ, ಹೋಗಿದೆ. ಕಂಪ್ಲೀಟ್ ಎಲ್ಲಾ ಹೋಗಿದೆ, ಹೇಳಲಾರರಷ್ಟು ಧ್ವನಿಯನ್ನು ಅವರು ಕಳೆದು ಕೊಂಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ನಿಮ್ಮ ಕಾರ್ಯಕ್ರಮಗಳನ್ನು ವಿರೋಧ ಮಾಡಿಲ್ಲ. ಹಿಂದೆ ವೀರೇಂದ್ರ ಪಾಟೀಲರು, ಬಂಗಾರಪ್ಪನವರು ಇದ್ದರು. ಈಗ ನೀವು ಇದ್ದೀರಿ. ಆದರೆ ಎಲ್ಲರೂ ಹಾಕಿಕೊಂಡದ್ದು ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳು. ನಿಮ್ಮ ಹಲವಾರು ಕಾರ್ಯಕ್ರಮಗಳು ಅವು. ನಮ್ಮದೂ ತಾಳಿ ಭಾಗ್ಯ ಇತ್ತು. ನಾವು ನಿಮಗೆ ಟೀಕೆ ಮಾಡಬಹುದು. ನೀವು ನಮಗೆ ಟೀಕೆ ಮಾಡಬಹುದು. ನಮ್ಮ 'ಸೀರೆ ಪಂಚೆ' ಕಾರ್ಯಕ್ರಮದ ಬಗ್ಗೆ ನಿಮಗೆ ಅಧಿಕಾರ ಇದೆ. ಆದರೆ ಈಗ ತಾವು ತಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ದೇಶಪಾಂಡೆಯವರೇ, ಜನತಾ ಸೀರೆಯನ್ನು ನೀರಿಗೆ ಹಾಕಿದ ತಕ್ಷಣ ಅದರ ಬಣ್ಣ ಎಲ್ಲಾ ಹೋಯಿತು. ಬಣ್ಣ ಬದಲಾವಣೆ ಆಯಿತು.

ಶ್ರೀ ಆರ್.ವಿ. ದೇಶಪಾಂಡೆ : ದಯಮಾಡಿ ಮಾತನಾಡಲು ಅವಕಾಶ ಕೊಡಿ. ನಾನು ಕಾರ್ಯಕ್ರಮ ವಿರೋಧಿ ಅಲ್ಲ. ಏನು ಅನುಷ್ಠಾನಕ್ಕೆ ತಂದಿದ್ದೀರಿ ಅದನ್ನು ಹೇಳಿ. 'ವಿಶ್ವ' ಕಾರ್ಯಕ್ರಮದಲ್ಲಿ ಏನಾಗಿದೆ ಎಂದು ತಾವೇ ಪ್ರಾಮಾಣಿಕವಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೆ ಎಷ್ಟು ಬೇಕು ನೋಡಿ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ : ಆಶ್ರಯ principally I am not against the programme.

ಶ್ರೀ ಎಂ. ವೀರಪ್ಪ ಮೊಯಿಲಿ : ತಪ್ಪು ಕ್ಷೇತ್ರದಲ್ಲಿ ಎಷ್ಟು ಮಾಡಿದ್ದೇವೆ ಎಂಬ ಪೂರ್ಣ ವಿವರ ಕೊಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಒಬ್ಬ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಗೆ ಚಾಕ್ ತಯಾರಿಕಾ ಯೂನಿಟ್ ಕೊಡಿಸುವ ಕಾರ್ಯಕ್ರಮ ನನ್ನಿಂದ ಮಾಡಿಸಿದರು. ನಾನು ಇನಾಗ್ಯುರೇಟ್ ಮಾಡಿದ್ದೇನೆ. ಅದರ ಹೊರತು ನನಗೆ ಇನ್ನೇನೂ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಯಾರು ಆಗತಕ್ಕದ್ದು ಹಪ್ಪಳವೋ ಸಂಡಿಗೆಯೋ?

ಶ್ರೀ ಆರ್.ವಿ. ದೇಶಪಾಂಡೆ : ಸಿಂಗಾಪುರದಲ್ಲಿ ಶೋರೂಮ್ ತೆಗೆಯುವುದಕ್ಕೆ ಹೋದಿರಿ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, "ವಿಶ್ವ" ಯೋಜನೆ ನಡೆಯುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರು ಹಳ್ಳಿಗಳಿಗೆ ಹೋಗಿ ನೋಡಿಲ್ಲ. ಅಲ್ಲಿ ಗುಡಿಗಾರಿಕೆ, ಚಾಪೆ ಹೆಣೆಯುವ ಕೆಲಸ ನಡೆಯುತ್ತಾ ಇದೆ. ಅವರು ಬಂದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಉದ್ಯೋಗ ಜ್ಯೋತಿ, ಕೆರೆ ಕಲ್ಯಾಣ, ನೀಲಿ ಕ್ರಾಂತಿ ಈ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೀರಿ ನಿಮ್ಮ 93-94ರ ಬಜೆಟ್‌ನಲ್ಲಿ, ದಯಮಾಡಿ ಕೇಳಿ. ಅದು ಅನುಷ್ಠಾನಕ್ಕೆ ಬಂದಿದೆಯಾ? ನಾನು ಕಾರ್ಯಕ್ರಮಗಳನ್ನು ಟೀಕೆ ಮಾಡುತ್ತಿಲ್ಲ. ಆದರೆ ನಿಮ್ಮ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬಂದಿಲ್ಲ. ಜನರಿಗೆ ಈ ಕಾರ್ಯಕ್ರಮಗಳು ಮುಟ್ಟಿಲ್ಲ. ಕೇವಲ ನಿಮ್ಮ ಬಜೆಟ್ ಪುಸ್ತಕದಲ್ಲಿ ಈ ಕಾರ್ಯಕ್ರಮಗಳು ಇವೆ. ತಾವೇ ಹೇಳಿ, ನಿಮ್ಮ ನಿಮ್ಮ ಕಾರ್ಯಕ್ಷೇತ್ರದಲ್ಲಿ ಎಲ್ಲೆಲ್ಲಿ ಜಾರಿಯಲ್ಲಿದೆ ಎಂದು ಹೇಳಿ. ಈ ಕಾರ್ಯಕ್ರಮದ ಬಗ್ಗೆ ನನಗಂತೂ ಪರಿಚಯ ಇಲ್ಲ. ಇದರ ನಂತರ ನಮ್ಮ ನಾಗೇಗೌಡ ಸಾಹೇಬರು ಈಗ ಒಂದು ಹೊಸ ಕಾರ್ಯಕ್ರಮ 'ಕ್ಷೀರ ಯೋಜನೆ' ಅಂತ ಪ್ರಾರಂಭ ಮಾಡಿದ್ದಾರೆ. ಹಾಲು ಉತ್ಪಾದನೆ ಹೆಚ್ಚಾಯಿತು. ನಮ್ಮ ನಾಗೇಗೌಡರ ತಲೆಯಲ್ಲಿ ಬಂತು ಕ್ಷೀರ ಯೋಜನೆಯನ್ನು ಜಾರಿಗೆ ತರಬೇಕು ಎಂದು. ಸದ್ಯ ಬಾಂಬೆಯಲ್ಲಿ ಮಾಡಿದಂತೆ ಮಾಡಲಿಲ್ಲ. ಬಾಂಬೆಯಲ್ಲಿ ಏನು ಮಾಡಿದರು ಎಂದರೆ ಹಾಲೆಲ್ಲವನ್ನೂ ಸಮುದ್ರಕ್ಕೆ ಬಿಟ್ಟುಬಿಟ್ಟರು. ಈ ಕೆಲಸವನ್ನು ಇವರು ಮಾಡುವುದಕ್ಕೆ ಹೋಗಲಿಲ್ಲ. ಇವರ ತಲೆಯೊಳಗೆ ಬಂತು, ಮುಖ್ಯಮಂತ್ರಿಗಳ ಹತ್ತಿರ ಹೋಗಿ ಕ್ಷೀರ ಯೋಜನೆಯನ್ನು ಏಕೆ ತರಬಾರದು ಎಂದು ಕೇಳಿದರು.

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿರತಕ್ಕದ್ದನ್ನು ತಿಳಿಸಿ ಎಂದು ತಾವು ಹೇಳಿದ್ದೀರಿ. ನಾವು ಕ್ಷೀರಯೋಜನೆಯನ್ನು ತಂದಿದ್ದುದು ನಿಜ. ಇದರ ಪ್ರಕಾರ ಪ್ರತಿದಿವಸ ಹತ್ತು ಲಕ್ಷ ಮಕ್ಕಳಿಗೆ ನಾವು ಹಾಲು ಕೊಡುತ್ತಿದ್ದೇವೆ. ಎಲ್ಲಿ ಕೊಟ್ಟಿಲ್ಲವೆಂದು ದಯವಿಟ್ಟು ತಿಳಿಸಿರಿ. ಯಾವ ಕ್ಷೇತ್ರದಲ್ಲಿ ಕೊಟ್ಟಿಲ್ಲವೆಂದು ಹೇಳಿ ಆಯಾಯ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳನ್ನು ಆ ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಯಾವ ಕ್ಷೇತ್ರದಲ್ಲಿ, ಯಾವ ಹಳ್ಳಿಯಲ್ಲಿ ಕೊಟ್ಟಿಲ್ಲವೆಂದು ಹೇಳಿ. ಸುಮಾರು ಏಳು ಕೋಟಿಯಷ್ಟು ಹಾಲನ್ನು ವಿತರಣೆ ಮಾಡಿದ್ದೇವೆ. ಈಗಾಗಲೇ ಎರಡು ಕೋಟಿ ರೂಪಾಯಿಗಳು ಸರ್ಕಾರದಿಂದ ಬಿಡುಗಡೆಯಾಗಿದೆ. ಎಲ್ಲಿ ಹಾಲನ್ನು ಕೊಡುವುದಕ್ಕೆ ಆಗಿಲ್ಲ, ಅಲ್ಲಿ ಹಾಲಿನ ಪುಡಿಯನ್ನು ಕೊಟ್ಟಿದ್ದೇವೆ. ಸುಮಾರು ಆರು ಸಾವಿರ ಸಹಕಾರ ಸಂಘಗಳ ಮೂಲಕ ಸಂಪೂರ್ಣವಾಗಿ ರೈತರ ಮನೆಯ ಹಾಲು ಆ ಶಾಲೆಗಳಿಗೆ ಹೋಗುತ್ತಿದೆ. ರೈತರ ಮಕ್ಕಳು ಅದನ್ನು ಕುಡಿಯುತ್ತಿದ್ದಾರೆ. ಇಂತಹ ಕಡೆ ಸರಿಯಾಗಿ ಕೊಟ್ಟಿಲ್ಲವೆಂದು ಹೇಳಿ, ಇಂತಹ ಕಡೆ ಸರಿಯಾಗಿ ಈ ಕಾರ್ಯಕ್ರಮ ನಡೆದಿಲ್ಲವೆಂದು ಹೇಳಿ. ಅದನ್ನು ಸರಿಪಡಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದು ಅತ್ಯಂತ ಯಶಸ್ವಿಯಾಗಿದೆ ಎಂದು ಎಲ್ಲ ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಸರಿಯಾಗಿಲ್ಲವೆಂದು ನೀವು ನಿದರ್ಶನ ಕೊಡಿ, ಅದನ್ನು ನಾವು ತಿದ್ದುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಹಾಲು ಬಿಸಿಯಾಗಿರುವುದನ್ನು ಕೊಡುತ್ತೀರೋ, ಅಥವಾ ತಣ್ಣಗಿರುವ ಹಾಲನ್ನು ಕೊಡುತ್ತೀರೋ? ಸಿಹಿ ಹಾಲು ಕೊಡುತ್ತೀರೋ, ಅಥವಾ ಸಪ್ಪೆ ಹಾಲು ಕೊಡುತ್ತೀರೋ? ಅದು ಸ್ಪಷ್ಟವಾಗಬೇಕು. ಅವತ್ತೇ ಕರೆದ ಹಾಲನ್ನು ಕೊಡುತ್ತೀರೋ, ಅಥವಾ ಮೂರು ದಿವಸ ಇಟ್ಟು ಕೊಡುತ್ತೀರೋ? ಇದು ಸ್ಪಷ್ಟವಾದರೆ ನಮಗೆ ಅನುಕೂಲವಾಗುತ್ತದೆ. ಅನೇಕ ಕಡೆ ಸೌದೆ ಇಲ್ಲದೆ,....

ಅಧ್ಯಕ್ಷರು : ತಾವು ಮಾತನಾಡುವಾಗ ಹೇಳಿ. ತಮ್ಮ ಒಂದು ಭಾಷಣದಲ್ಲಿ ಸವಿಸ್ತಾರವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಯೋಜನೆ ಬಗ್ಗೆ ಟೀಕೆ ಮಾಡುತ್ತಿಲ್ಲ, ಸ್ಪಷ್ಟವಾಗಿ ಯಾವ ರೀತಿ ಇದೆಯೆಂದು ತಿಳಿದುಕೊಳ್ಳಬೇಕು, ಅಷ್ಟೆ.

ಶ್ರೀ ಕೆ.ಎನ್. ನಾಗೇಗೌಡ : ಈಗ ನಾವು 5 ರೂಪಾಯಿ 75 ಪೈಸೆವರೆಗೆ ರೈತರಿಗೆ ಕೊಡತಕ್ಕದ್ದು. ಸರ್ಕಾರದಿಂದ ಒಂದು ಲೀಟರ್‌ಗೆ ಎಂಟೂವರೆ ರೂಪಾಯಿ ಕೊಡುತ್ತಿದ್ದೇವೆ. ಇದರ ಉದ್ದೇಶ ಏನೆಂದರೆ, ಕಾಯಿಸುವುದಕ್ಕೆ ಇಷ್ಟು, ಸಕ್ಕರೆಗೆ ಇಷ್ಟು, ಸರಬರಾಜಿಗೆ ಇಷ್ಟು ಎನ್ನತಕ್ಕದ್ದು. ಇದನ್ನು ಆಯಾಯ ಸೊಸೈಟಿಗಳಿಗೆ ವಹಿಸಿದ್ದೇವೆ. ಸಕ್ಕರೆ ಮತ್ತು ಕಾಯಿಸುವುದಕ್ಕೆ ಸೀಮೆಎಣ್ಣೆ ಸಿಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಪಬ್ಲಿಕ್ ಡಿಸ್ಟ್ರಿಬ್ಯೂಶನ್ ಸಿಸ್ಟಮ್ ಅಕ್ಟ್ ಒಳಗಡೆ ಇವುಗಳನ್ನು ನಾವು ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆಗೆ, ಸೀಮೆಣ್ಣೆಗೆ ಕೊಡುವುದಕ್ಕೆ ಆಗುವುದಿಲ್ಲ. ಇಂತಹ ಕಾರ್ಯಕ್ರಮಗಳಿಗೆ ಸರಬರಾಜು ಮಾಡುವುದಕ್ಕೆ ಕಾಯದೆಯೊಳಗೆ ಅವಕಾಶ ಇಲ್ಲವೆಂದು ತಿಳಿದು ಅವರಿಗೆ ನಾವು ಬಹಿರಂಗ ಮಾರುಕಟ್ಟೆಯಲ್ಲಿ ಸಕ್ಕರೆ, ಸೀಮೆಣ್ಣೆಯನ್ನು ಕೊಂಡುಕೊಂಡು ಮಾಡಬೇಕು ಎನ್ನುವ ಉದ್ದೇಶದಿಂದ ಲೀಟರ್‌ಗೆ ಎಂಟೂವರೆ ರೂಪಾಯಿ ಎಂದು ಸರ್ಕಾರದವರು ಆಯಾಯ ಸಹಕಾರ ಸಂಘಗಳಿಗೆ ಕೊಡುತ್ತಿದ್ದೇವೆ. ಈಗ ಒಂದನೆಯ ತರಗತಿವರೆಗೆ ಮಾತ್ರ ಕೊಟ್ಟಿದ್ದೇವೆ. ನಾಲ್ಕನೇ ತರಗತಿವರೆಗೆ ಮಾಡಬೇಕೆಂಬ ಆಲೋಚನೆಯನ್ನು ಇಟ್ಟಿದ್ದೇವೆ. ಒಂದನೇ ತರಗತಿವರೆಗೆ ಕೊಟ್ಟಿರುವುದನ್ನು 4ನೇ ತರಗತಿವರೆಗೆ ಮುಂದಿನ ಶೈಕ್ಷಣಿಕ ವರ್ಷದಿಂದ ವಿಸ್ತರಣೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯವರೆಗೆ ಅವರು ನಾಲಗೆಗಳನ್ನು ಚಪ್ಪರಿಸುತ್ತಾ ಇರಬೇಕು ಅಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಅಕ್ಷಯ ಯೋಜನೆಯಲ್ಲಿ ಒಂದೊಂದು ರೂಪಾಯಿ ಹಂಚಿದರು. ಶ್ರೀ ವೀರಪ್ಪ ಮೊಯಿಲಿಯವರು ಹಾಲು ಹಂಚುತ್ತಿದ್ದಾರೆ. ಈಗ ತಾವು ಹೇಳಿದಿರಿ, ಎಲ್ಲಾ ಜಿಲ್ಲಾಧಿಕಾರಿಗಳು ಹೇಳಿದ್ದಾರೆ, ಎಲ್ಲಾ ಜಿಲ್ಲೆಗಳಲ್ಲೂ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು. ತಾವು ದಯವಿಟ್ಟು ನನ್ನ ಜಿಲ್ಲೆಗೆ ಬನ್ನಿ, ಟೂರ್ ಮಾಡೋಣ. ನೋಡಿ ನೀವು ಸಂತೋಷಪಟ್ಟರೆ, ಬಹಳ ಚೆನ್ನಾಗಿ ನಡೆದಿದೆ ಎಂದರೆ, ನನ್ನ ಸ್ವಭಾವ ತಮಗೆ ಗೊತ್ತಿದೆ. ನಾನು ಬಹಿರಂಗವಾಗಿ ನಿಮ್ಮನ್ನು ಮೆಚ್ಚಿಕೊಳ್ಳುತ್ತೇನೆ.

ಆದರೆ ಇವತ್ತು ಮಿಲ್ಕ್‌ರೂಟ್ಸ್ ಇಲ್ಲ. ಹಾಗಾಗಿ ನಾವು ಹಾಲು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಈ ಯೋಜನೆಯನ್ನು ಟೀಕೆ ಮಾಡುತ್ತಿಲ್ಲ. ಇದರಿಂದ ಆಗುವ ತೊಂದರೆಗಳನ್ನು ಹೇಳುತ್ತಿದ್ದೇನೆ. ನಾನು ಮತ್ತೊಂದು ಸಲಹೆಯನ್ನು ಮಾಡಿದ್ದೆ. ಶಾಲೆಗಳಲ್ಲಿ ಒಂದು, ಎರಡು ಕೋಣೆಗಳು ಅಷ್ಟೇ ಇರುತ್ತವೆ. ಒಂದು ಕೋಣೆಯಲ್ಲೇ ಒಂದನೇ ಇಯತ್ತನೇಯಿಂದ ನಾಲ್ಕನೇ ಇಯತ್ತೆವರೆಗೆ ಹುಡುಗರು ಕಲಿಯುತ್ತಾರೆ. ನೀವು ಒಂದನೇ ಇಯತ್ತನವರೆಗಿನ ಹುಡುಗರಿಗೆ ಮಾತ್ರ ಹಾಲು ಕೊಡುತ್ತೀರಿ. ಇದನ್ನು ಎರಡು-ಮೂರು ಇಯತ್ತೆಯ ಹುಡುಗರು ನೋಡಿಕೊಂಡು ಕೂಡುತ್ತಾರೆ. ಅದು ಸರಿಯಲ್ಲ. ಆದ್ದರಿಂದ ಒಂದರಿಂದ ನಾಲ್ಕನೇ ಇಯತ್ತೆವರೆಗೆ ಇದನ್ನು ಮಾಡಿ ಎಂದು ನಾನು ಸಲಹೆಯನ್ನು ಕೊಟ್ಟಿದ್ದೆ. ನಾನು ನಿಮ್ಮ ಯೋಜನೆಗಳನ್ನು ಟೀಕೆ ಮಾಡುತ್ತಿಲ್ಲ. ಆದರೆ ಅದು ಸರಿಯಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ. ನಮ್ಮಲ್ಲಿ ಯೋಜನೆಗಳನ್ನು ಬಹಳವಾಗಿ ಮಾಡಿದ್ದಾರೆ. ನಮ್ಮಲ್ಲಿ ಬಹಳ ಒಳ್ಳೆಯ ಎಕನಾಮಿಸ್ಟ್ಸ್ ಇದ್ದಾರೆ. ಅವರು ಒಳ್ಳೆಯ ಯೋಜನೆಗಳನ್ನು ಮಾಡಿದ್ದಾರೆ. ಆದರೆ ದೇಶಕ್ಕೆ ಇದರಿಂದ ಲಾಭ ಆಗುತ್ತಿಲ್ಲ. ಇಷ್ಟಾದರೂ ಕೂಡ ಈ ದೇಶದಲ್ಲಿ ಬಡತನ ಇದೆ, ನಿರುದ್ಯೋಗ ಇದೆ, ಅನಕ್ಷರತೆ ಇದೆ, ಎಲ್ಲಾ ಇದೆ. ಇದು ಏಕೆ ಹೀಗಿದೆಯೆಂದರೆ ಕಮಿಟ್ಮೆಂಟ್ ಇಲ್ಲ, ಇಂಪ್ಲಿಮೆಂಟೇಶನ್ ಇಲ್ಲ. ಹಾಗಾಗಿ ನಾನು ಹೇಳುತ್ತಿದ್ದೇನೆ, ಯೋಜನೆಗಳು ಇದ್ದರೂ ಸಹಿತ ಸರಿಯಾಗಿ ಇಂಪ್ಲಿಮೆಂಟೇಶನ್ ಇವತ್ತು ಆಗುತ್ತಿಲ್ಲ. ತಾವು ಹೇಳಿದ್ದೀರಿ, ಮೂರು-ನಾಲ್ಕು ವಾರಗಳಿಂದ ಪೇಮೆಂಟ್ ಆಗಿಲ್ಲವೆಂದು.

ನಾನು ಧಾರವಾಡ, ಬೆಳಗಾಂ, ನಾರ್ತ್‌ಕೆನರಾಗೆ ಹೋಗಿದ್ದೇನೆ. ಐದು-ಆರು ವಾರಗಳ ಪೇಮೆಂಟ್ ರೈತರಿಗೆ ಆಗಬೇಕಾಗಿದೆ. ಹಾಲು ಕೊಟ್ಟು ರೈತರ ಕಷ್ಟದಲ್ಲಿ ಬಿದ್ದಿದ್ದಾನೆ. ಕೂಲಿಕಾರರು ಕಷ್ಟದಲ್ಲಿದ್ದಾರೆ. ಅವರಿಗೆ ಸರಿಯಾಗಿ ಪೇಮೆಂಟ್ ಆಗುತ್ತಿಲ್ಲ. ನಾನು ಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಎಷ್ಟು ಹಣ ಮುಂಗಡಪತ್ರದಲ್ಲಿ ಇಟ್ಟಿದ್ದಾರೆ, ಅದನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಅದರ ನಂತರ ಕಾರ್ಯಕ್ರಮವನ್ನು ಹಾಕಿಕೊಳ್ಳಿರಿ. ಮುಂಗಡಪತ್ರದಲ್ಲಿ ಹಣ ಇಟ್ಟಿರಬಹುದು. ಆದರೆ ಬಡ ರೈತ ತಮಗೆ ಏನು ಹಾಲು ಕೊಡುತ್ತಾನೆ, ಅವನಿಗೆ ಐದಾರು ವಾರದಿಂದ ಪೇಮೆಂಟ್ ಇಲ್ಲವೆಂದರೆ ಅವರು ಏನು ಮಾಡಬೇಕು? ಇದು ಕೇವಲ ನೀವು ಪ್ರಚಾರಕ್ಕಾಗಿ ಕೆಲವು ಯೋಜನೆಗಳನ್ನು ಮಾಡುವುದು ಬೇರೆ. ಆದರೆ ಅದು ನಿಜವಾಗಿಯೂ ಜಾರಿಗೆ ಬರಬೇಕು. ಬಡಮಕ್ಕಳಿಗೆ ಅದನ್ನು ಕೊಡಬೇಕೆಂಬ ಭಾವನೆ ಇದ್ದರೆ ಒಂದು ಸರಿಯಾದ ಕಾರ್ಯಕ್ರಮ ಸರ್ಕಾರದಿಂದ ಆಗಬೇಕಾಗಿದೆ. ಇನ್ನು ಆಶ್ರಯ ಯೋಜನೆಯಲ್ಲಿ 93ರ ತಮ್ಮ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಗಳು ಹೇಳಿದರು. 2 ಲಕ್ಷ 60 ಸಾವಿರ ಮನೆಗಳನ್ನು ಕೊಡಬೇಕಾಗಿತ್ತು. ಅದು ಕೇವಲ ಒಂದು ಸಾವಿರದ 575 ಮನೆಗಳನ್ನು ಅಷ್ಟೇ ಕಟ್ಟಿದ್ದಾರೆ ಎಂದು. ಹಾಗಾಗಿ ಜೂನ್ 93ರೊಳಗಾಗಿ ಟಾರ್ಗೆಟ್ಟನ್ನು ರಿವೈಸ್ಡ್ ಮಾಡಿದರು.

(ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಎಚ್. ಕೌಜಲಗಿಯವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಅದೇನೆಂದರೆ 2 ಲಕ್ಷ 35 ಸಾವಿರ ಮನೆಗಳನ್ನು ಕಟ್ಟಬೇಕಾಗಿತ್ತು, ಆದರೆ ಕೇವಲ 1,575 ಮನೆಗಳನ್ನು ಕಟ್ಟಿದ್ದೇವೆ. ಎಂದು ಹಾಗಾಗಿ ಇದನ್ನು ಪುನಃ ರಿವ್ಯೂ ಮಾಡಿ ನಾವು ಒಂದು ಲಕ್ಷ 6 ಸಾವಿರ ಮನೆಗಳನ್ನು ತತ್‌ಕ್ಷಣ ಕೊಡುತ್ತೇವೆ. ಮತ್ತು ಮಾರ್ಚ್ 94ರೊಳಗೆ ಮತ್ತೊಂದು ಲಕ್ಷ ಕೊಡುತ್ತೇವೆ. ಅಂತ ಅಂದರೆ 2 ಲಕ್ಷ 6 ಸಾವಿರ ಮನೆಗಳನ್ನು ಮಾರ್ಚ್ 94ರೊಳಗಾಗಿ ಸರ್ಕಾರ ಅವರ ಮುಂಗಡಪತ್ರದಲ್ಲಿ ಭಾಷಣ ಮಾಡಿದ ಪ್ರಕಾರ ಮಾಡಬೇಕಾಗಿತ್ತು. ಇದಕ್ಕೆ 160 ಕೋಟಿ ಪ್ರೊವಾಯ್ಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ನೀವು ರಾಜ್ಯಪಾಲರ ಭಾಷಣದಲ್ಲಿ ಕೇವಲ 85 ಸಾವಿರ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಆ ಮನೆಗಳನ್ನು ಕೂಡ ಸರಿಯಾಗಿ ಕಟ್ಟಿಲ್ಲ. ಕೆಲವು ಕಡೆ ಕೆಲಸ ಪ್ರಾರಂಭವಾಗಿಲ್ಲ. ಕೆಲವು ಕಡೆ ಕೆಲಸ ಪ್ರಾರಂಭವಾದರೆ ಪ್ಲಿಂತ್ ಲೆವಲ್ವರೆಗೆ ಬಂದಿದೆ. ಕೆಲವು ಕಡೆ ಇನ್ನೂ ಹೆಂಚು ಹಾಕಬೇಕಾಗಿದೆ. ಸರ್ಕಾರ 2 ಲಕ್ಷ 6 ಸಾವಿರ ಮನೆಗಳನ್ನು ಮಾರ್ಚ್ 94ರೊಳಗೆ ಕೊಡುತ್ತೇವೆ ಎಂದು ಮುಂಗಡಪತ್ರದಲ್ಲಿ ಘೋಷಣೆ ಮಾಡಿ, 160 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟು ಈಗ 1994ನೇ ಮಾರ್ಚ್‌ನೊಳಗೆ ಕೇವಲ 85 ಸಾವಿರ ಅಷ್ಟೇ ಕೊಡಬಹುದು ಎಂದು ಹೇಳುತ್ತಿದ್ದಾರೆ. ಇದೇ ಏನು ನಿಮ್ಮ ಬಡಜನರ ಪರವಾದ ಕಾರ್ಯಕ್ರಮ? ಇಂಥ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಎಂದು ತಾವು ಇಲ್ಲಿ ಕುಳಿತಿದ್ದೀರಿ ಏನು? ಇವತ್ತು ಈ ಆಶ್ರಯ ಯೋಜನೆಯಲ್ಲಿ ಭಾರಿ ಮೋಸ ಆಗಿದೆ. ಹಲವಾರು ಕಡೆ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಹೌಸಿಂಗ್ ಬೋರ್ಡ್ನವರು ಈ ಮನೆಗಳನ್ನು ಕಟ್ಟಬೇಕಾಗಿತ್ತು. ಹೌಸಿಂಗ್ ಬೋರ್ಡ್ನಿಂದ ಈ ಕೆಲಸ ಆಗಲಿಲ್ಲ, ಹಾಗಾಗಿ ಈ ಕೆಲಸದ ವರ್ಗಾವಣೆ ಜಿಲ್ಲಾಧಿಕಾರಿಗಳಿಗೆ ಆಯಿತು. ಈಗ ಜಿಲ್ಲಾಧಿಕಾರಿಗಳು ಬಿ.ಡಿ.ಓ. ಮುಖಾಂತರ ಮಾಡುತ್ತಿದ್ದಾರೆ. ಕೆಲವು ಕಡೆ ಕೆಲಸ ನಡೆಯುತ್ತಿದೆ, ಕೆಲವು ಕಡೆ ಇಲ್ಲ, ಸರಿಯಾದ ಮಾನಿಟರಿಂಗ್ ಇದರ ಬಗ್ಗೆ ಇಲ್ಲ, ಹಾಗಾಗಿ ಬಡಜನ ಇವತ್ತು ಕಂಗಾಲಾಗಿದ್ದಾರೆ.

4.50 ಪಿ.ಎಂ

ಎಷ್ಟೋ ಜನ ತಮ್ಮ ಕಿಸೆಯಿಂದ ಹಣ ಖರ್ಚುಮಾಡಿ, ಮನೆ ಪೂರ್ಣ ಮಾಡಿದ್ದಾರೆ. ಆದರೆ, ನಿಮ್ಮ ಹಣಕಾಸಿನ ಪರಿಸ್ಥಿತಿಯಿಂದ ಇವತ್ತು ಹಣವನ್ನು ತಾವು ಬಿಡುಗಡೆ ಮಾಡಿಲ್ಲ. ಆ ಜನರಿಗೆ ಹಣ ಸಿಕ್ಕುತ್ತಾ ಇಲ್ಲ. ಎಲ್ಲಿ ಮನೆ ಪೂರ್ಣವಾಗಿಲ್ಲ, ಅವರ ದುರವಸ್ಥೆ ಇಲ್ಲಿ ಹೇಳಲಿಕ್ಕೂ ಸಾಧ್ಯವಿಲ್ಲ. ಅಂತಹ ಪರಿಸ್ಥಿತಿ ಇಡೀ ರಾಜ್ಯದಲ್ಲಿ ನಿರ್ಮಾಣವಾಗಿದೆ. ಬಾಬಾಸಾಹೇಬ್ ಅಂಬೇಡ್ಕರ್ ಯೋಜನೆ ಎಂದು ಹೇಳಿದರು. ಆ ಯೋಜನೆಯಲ್ಲಿ ಇವರು 35 ಸಾವಿರ ಮನೆ ಕಟ್ಟುತ್ತೇವೆಂದು ಹೇಳಿದರು. ಆ ಯೋಜನೆ ಬಗ್ಗೆ ಇವತ್ತು ಮಾತನಾಡುವುದಿಲ್ಲ. ಕೇವಲ ಜನ ಕಟ್ಟಿದ್ದೇವೆಂದು ಹೇಳುತ್ತಾರೆಯೇ ವಿನಹ ಎಷ್ಟು ಮನೆ ಕಟ್ಟಿದ್ದೀರಿ? ಆಶ್ರಯ ಟಾರ್ಜೆಟ್ 2 ಲಕ್ಷ 6 ಸಾವಿರದಿಂದ, 85ಕ್ಕೆ ಬಂದಿದೆ. ಇವತ್ತು ಅಂಬೇಡ್ಕರ್ ಸ್ಕೀಮ್ನಲ್ಲಿ ಮನೆಗಳು 35 ಸಾವಿರದಿಂದ ಎಷ್ಟಕ್ಕೆ ಬಂದಿದೆ, ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿಲ್ಲ. ಹಾಗಾಗಿ, ನನಗೆ ಸರ್ಕಾರದಿಂದ ಭರವಸೆ ಬೇಕಾಗಿದೆ, ನೀವೇನು 2 ಲಕ್ಷ 6 ಸಾವಿರ ಮನೆ ಕಟ್ಟುತ್ತೇವೆಂದು ಹೇಳಿದ್ದಿರಿ, ಅದು 85 ಸಾವಿರಕ್ಕೆ ಏಕೆ ಕಡಿಮೆಯಾಯಿತು? ಅದಕ್ಕೆ ಕಾರಣಗಳೇನು? ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ ಹೇಳಿದ್ದಾರೆ. ನಮಗೆ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ, ನಮಗೇನೂ ಕಷ್ಟವಿಲ್ಲ ಅಂತ. ಆದರೆ, ಇವತ್ತು ಇಷ್ಟು ಹಣಕಾಸಿನ ಪರಿಸ್ಥಿತಿ ಕೆಟ್ಟಿದೆ, ಇವತ್ತು ಸ್ಕೂಲು ರಿಪೇರಿಗೆ ಹಣ ಇಲ್ಲ. ಯಾವ ಬಿಲ್ ಇವತ್ತು ಹಾನರ್ ಆಗುತ್ತಾ ಇಲ್ಲ. ಸಂಬಳದ ಬಿಲ್ ಬಿಟ್ಟರೆ, ಯಾವ ಬಿಲ್ ಕೂಡ ಇವತ್ತು ಹಾನರ್ ಆಗುತ್ತಾ ಇಲ್ಲ. ಇದರ ಪರಿಣಾಮ ಇವತ್ತು ಆಶ್ರಯ ಯೋಜನೆ ಮೇಲೆ ಆಗಿದೆ. ಇನ್ನು ನೀರಾವರಿ ವಿಚಾರದಲ್ಲಿ ನಮ್ಮ ವೈ.ಕೆ. ರಾಮಯ್ಯನವರು ವಿವರವಾಗಿ ಹೇಳುತ್ತಾರೆ. ಆದರೆ, ನಾನು ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗುತ್ತದೆ. 1993-94ರ ಮುಂಗಡ ಪತ್ರದಲ್ಲಿ ಇವರು ಹೇಳಿದರು. ಈ ವರ್ಷ 1 ಲಕ್ಷ 27 ಸಾವಿರ ಹೆಕ್ಟೇರ್ ನಾವು ಇರಿಗೇಷನ್ ಪೊಟೆನ್ಷಿಯಲ್ ಕ್ರಿಯೇಟ್ ಮಾಡುತ್ತೇವೆ ಎಂದು ಹೇಳಿದರು. ಆದರೆ, ಇವತ್ತು ಪರಿಸ್ಥಿತಿ ಏನಾಗಿದೆ. ಇವತ್ತು ನವೆಂಬರ್ ತನಕ, ಮೇಜರ್, ಮೀಡಿಯಂ ಅಂಡ್ ಮೈನರ್ ಇರಿಗೇಷನ್ನಲ್ಲಿ ಟೋಟಲ್ ಅಚೀವ್ಮೆಂಟ್ 28,600 ಹೆಕ್ಟೇರ್ ಇದೆ. ಯಾವ ಸರ್ಕಾರ ಮುಂಗಡಪತ್ರದಲ್ಲಿ ಎಂಟುನೂರು ಕೋಟಿಗೆ ಪ್ರಾವಿಷನ್ ಮಾಡಿ, 1 ಲಕ್ಷ 27 ಸಾವಿರ ಹೆಕ್ಟೇರ್ ನೀರಾವರಿ ಮಾಡಿತು ಎಂದು ಹೇಳಿದರೆ, ಆ ಸರ್ಕಾರದಿಂದ ಇವತ್ತು ನವೆಂಬರ್ವರೆಗೆ ಆಗಿರತಕ್ಕ ಕೆಲಸ ಕೇವಲ 28 ಸಾವಿರ ಹೆಕ್ಟೇರ್, ನಿನ್ನೆ ಮಾನ್ಯ ಉಪ ಮುಖ್ಯ ಮಂತ್ರಿಗಳೂ ಕೂಡ ಮೇಲ್ಮನೆಯಲ್ಲಿ ಹೇಳಿದ್ದಾರೆ. ಕೃಷ್ಣಾ ಯೋಜನೆಗೆ 683 ಕೋಟಿಯಲ್ಲಿ 406 ಕೋಟಿ ಹಣ ರಿಲೀಸ್ ಆಗಿದೆ. ಕಾವೇರಿ ಯೋಜನೆಗೆ 280 ಕೋಟಿ ಪೈಕಿ 134 ಕೋಟಿ ರಿಲೀಸ್ ಆಗಿದೆ ಎಂದು ಹೇಳಿದ್ದಾರೆ. ಮತ್ತು ಅವರು ಹೇಳಿದ್ದಾರೆ. ನಾವು 13 ಸಾವಿರ ಹೆಕ್ಟೇರ್ ಭೂಮಿ ಇರಿಗೇಷನ್ ಪೊಟೆನ್ಷಿಯಲ್ ಡಿಸೆಂಬರ್ 1993ರ ವರೆಗೆ ಕೃಷ್ಣಾ ಬೇಸಿನ್ನಲ್ಲಿ ಕ್ರಿಯೇಟ್ ಮಾಡಿದ್ದೇವೆಂದು ಹೇಳಿದ್ದಾರೆ. ನಿಮ್ಮ ಟಾರ್ಜೆಟ್ 30 ಸಾವಿರ ಹೆಕ್ಟೇರ್ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಕೇಳುತ್ತೇನೆ, ಯಾವ ಸರ್ಕಾರಕ್ಕೆ ಡಿಸೆಂಬರ್ ತನಕ ಕೇವಲ 13 ಸಾವಿರ ಹೆಕ್ಟೇರ್...

ಶ್ರೀ ಎನ್.ಜಿ. ನಾಯಕ್ : ನಮ್ಮ ಸರ್ಕಾರ ಏನೂ ಮಾಡಿಲ್ಲವೆಂದು ಹೇಳುತ್ತಾರೆ, ನಿಮ್ಮ ಸರ್ಕಾರ ಏನು ಮಾಡುತ್ತದೆಯೋ ನೋಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮುಂದೆ ಬರುವ ಸರ್ಕಾರವನ್ನು ಅವರು ನೋಡುತ್ತಾರಂತೆ. ಈಗಾಗಲೇ ಅವರು ತೀರ್ಮಾನ ಮಾಡಿದ್ದಾರೆ, ಅವರ ಸರ್ಕಾರ ಬರುವುದಿಲ್ಲವೆಂದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗಲೇ ನಮ್ಮ ಸರ್ಕಾರವನ್ನು ಅವರು ಸ್ವಾಗತ ಮಾಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಸಂತೋಷ, ನಮ್ಮ ಸರ್ಕಾರವನ್ನು ಸ್ವಾಗತ ಮಾಡುತ್ತಿದ್ದೀರಿ. ಖಂಡಿತವಾಗಿಯೂ ನಾವು ಅಲ್ಲಿಗೆ ಬರುತ್ತೇವೆ. 2 ಸಾವಿರ ಇಸವಿಗೆ ಮುಂಚೆ ಬಚಾವತ್ ಅವಾರ್ಡ್ ಪ್ರಕಾರ ಇವತ್ತು ಕೃಷ್ಣಾ ವಾಟರ್ ಉಪಯೋಗ ಮಾಡಿಕೊಳ್ಳಬೇಕಾಗಿತ್ತು. 746 ಟಿ.ಎಂ.ಸಿ. ಉಪಯೋಗ ಮಾಡಿಕೊಳ್ಳಬೇಕಾಗಿತ್ತು. ಈ ಪ್ರಕಾರ ಸರ್ಕಾರ ಕಾರ್ಯಕ್ರಮ ಹಾಕಿಕೊಂಡರೆ, ಯಾವ ಪ್ರಕಾರ ,ಗುರಿ ಮುಟ್ಟುವುದಕ್ಕೆ ಸಾಧ್ಯವಿದೆ?

ನೀರಾವರಿಗೆ ಪವರ್ ಪ್ರಾಜೆಕ್ಟ್ ಹೆಚ್ಚಿನ ಪ್ರಾಧಾನ್ಯತೆ ಕೊಡುತ್ತೇವೆಂದು ಯಾವ ಸರ್ಕಾರ ಹೇಳಿತ್ತೋ ಆ ಸರ್ಕಾರ ಇವತ್ತು 800 ಕೋಟಿ ರೂಪಾಯಿಗಳ ಪೈಕಿ ನೀರಾವರಿಗಾಗಿ ಮುಂಗಡ ಪತ್ರದಲ್ಲಿ ಕೇವಲ 400 ಕೋಟಿ ರೂಪಾಯಿಗಳು ಮಾತ್ರ ರಿಲೀಜ್ ಮಾಡಿದ್ದಾರೆ. ಒಂದೂವರೆ ತಿಂಗಳು ಉಳಿಯಿತು. ಒಂದೂವರೆ ತಿಂಗಳಿಲ್ಲಿ 400 ಕೋಟಿ ಬಿಡುಗಡೆ ಮಾಡಲು ಸಾಧ್ಯವಿಲ್ಲ. ಏತಕ್ಕೆ ಸಾಧ್ಯವಿಲ್ಲ ಎಂದು ನಾನು ಆಮೇಲೆ ಹೇಳುತ್ತೇನೆ. ಒಂದು ವೇಳೆ ಸಾಧ್ಯ ಇದ್ದರೂ ಕೂಡ ಪೊಟೆನ್ಷಿಯಲ್ ಕ್ರಿಯೇಟ್ ಮಾಡುವುದಕ್ಕೆ ಸಾಧ್ಯ ಆಗಬಹುದೇನು? ಯಾವ ಕೆಲಸಕ್ಕೆ ನೀವು 400 ಕೋಟಿ ರೂಪಾಯಿಗಳನ್ನೂ 10 ತಿಂಗಳಲ್ಲಿ ಖರ್ಚು ಮಾಡಿದ್ದೀರಿ 11 ತಿಂಗಳಲ್ಲಿ ಖರ್ಚು ಮಾಡಿದಿರಿ, ಬಾಕಿ ಉಳಿದ 400 ಕೋಟಿ ರೂ.ಗಳನ್ನು ಇನ್ನೂ 2 ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ಹೇಗೆ ಸಾಧ್ಯವಿದೆ? ನೀವು ಇರಿಗೇಷನ್ ಪೊಟೆನ್ಷಿಯಲ್ಲ್‌ನ್ನೂ ಕಾವೇರಿ ಬೇಸಿನ್ನಲ್ಲಿ ಕೃಷ್ಣಾ ಬೇಸಿನ್ನಲ್ಲಿ ಕ್ರಿಯೇಟ್ ಮಾಡುತ್ತೇವೆಂದು ಕೂಗು ಹಾಕಿದಿರೇ ವಿನಹಃ ಅದರ ಬಗ್ಗೆ ನಿಮಗೆ ಯಾವುದೇ ಕಮಿಟ್ಮೆಂಟ್ ಇಲ್ಲ, ಆ ವಿಚಾರದಿಂದ ಸರ್ಕಾರ ಇವತ್ತು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇವತ್ತು ಕೃಷ್ಣಾ ಬೇಸಿನ್ನಲ್ಲಿ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇವರು ಯಾರಿಗೆ ಹೇಳುತ್ತಿದ್ದಾರೆ ಎನ್ನುವುದು ಒಂದು ದೊಡ್ಡ ಸಮಸ್ಯೆ ಆಗಿದೆ. ಪಾಪ ವಿರೋಧಪಕ್ಷದ ನಾಯಕರು ಇವತ್ತು ರಾಜ್ಯಪಾಲರ ಭಾಷಣದ ಬಗ್ಗೆ ತಮ್ಮ ಭಾಷಣವನ್ನು ಆರಂಭಿಸಿದರು. ಇದು ಸಂತೆಗೆ ಯಾರೋ ವ್ಯಾಪಾರಕ್ಕೆ ಬಂದು ಅವರ ವ್ಯಾಪಾರ ಮುಗಿಸಿಕೊಂಡು ಹೋಗುತ್ತಾರಲ್ಲ ಹಾಗಾಗಿದೆ. ಈ ಸದನ. ಸಂತೆಗೆ ಬರುವುದು ಈರುಳ್ಳಿಯವನು ಈರುಳ್ಳಿ ತೆಗೆದುಕೊಂಡು ಹೋಗುವುಗುದು, ತೆಂಗಿನಕಾಯಿಯವನು ಅವನ ಪಾಡಿಗೆ ಅವನು ಹೋದ ಯಾವ ಯಾವ ವ್ಯಾಪಾರ ಬೇಕೋ ಅವರು ಮಾಡಿಕೊಂಡು ಹೋದಂಗೆ ಆಗಿದೆ. ಈ ಸಭೆಗೆ ಒಂದು ಗೌರವ ಘನತೆ ಇದೆ. ಪಾಪ ವಯೋವೃದ್ಧರು ಹಿರಿಯರು ಅವರೊಬ್ಬರನ್ನು ಇಲ್ಲಿ ಕೂರಿಸಿಬಿಟ್ಟಿದ್ದಾರೆ. ನ್ಯಾಯಾಂಗ ಇಲಾಖೆಯ 3-4 ಜನ ಅಧಿಕಾರಿಗಳನ್ನು ಬಿಟ್ಟರೆ ಒಬ್ಬೊಬ್ಬ ಮಂತ್ರಿ ದಿಕ್ಕೆಟ್ಟು ಎಲ್ಲೆಲ್ಲೋ ಕುಳಿತಿದ್ದಾರೆ. ರಾಜ್ಯದಲ್ಲಿ ಏನು ಬಂದಿದೆ ತಪ್ಪು ತಿಳಿದುಕೊಳ್ಳಬೇಡಿ, ಎಷ್ಟೊಂದು ಜನ ಮಂತ್ರಿಗಳು ಇದ್ದಾರೆ ಈಗ 17ನೇ ತಾರೀಖು ಆದ ಮೇಲೆ ಮಂತ್ರಿಮಂಡಲದ ಬದಲಾವಣೆ ಅಂತೆ ಇವರಲ್ಲಿ ಕೆಲವರನ್ನು ಕಿತ್ತಾಕಿ ಹೊಸಬರನ್ನು ಸೇರಿಸಿಕೊಳ್ಳುತ್ತಾರಂತೆ ಈಗ ಯಾರನ್ನು ಕಿತ್ತಾಕುತ್ತಾರೆ ಏನು ಪರಿಸ್ಥಿತಿ ನನಗಂತೂ ಬಹಳ ನೋವಿನ ಪ್ರಸಂಗ ಆಗಿದೆ.

ವಿರೋಧಪಕ್ಷದ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳು ಕುಳಿತಿರಬೇಕು. ಹಾಗೆ ಅವರು ಕುಳಿತುಕೊಳ್ಳದೇ ನನಗೆ ಅಲ್ಲಿ ಇಲ್ಲಿ ಕೆಲಸ ಇದೆ ಅಂತ ಹೋಗುತ್ತಾರಲ್ಲ ಏನು ಸ್ವಾಮಿ ಇದು ಈ ಸದನಕ್ಕೆ ಎಷ್ಟು ಗೌರವ ಇದೆ, ಎಷ್ಟು ಮರ್ಯಾದೆ ಇದೆ, ಈ ಸದನ ಬಿಟ್ಟು ಮುಖ್ಯಮಂತ್ರಿಗಳಿಗೆ ಇನ್ನೇನು ಕೆಲಸ ಇದೆ? ಎದ್ದು ಹೊರಗೆ ಹೊರಟುಬಿಡುತ್ತಾರೆ. ಅವರು ಇದ್ದಾಗ ವಿಶ್ವ ಕಾರ್ಯಕ್ರಮದ ಬಗ್ಗೆ ಮಾತನಾಡಿದರು ಅಷ್ಟಕ್ಕೆ ಉತ್ತರ ಕೊಟ್ಟರು ಸರಿ ಹೊರಗೆ ಹೊರಟು ಹೋದರೆ ಅವರ ಕೆಲಸ ಮುಗಿಯಿತು ಸಂತೆಯಲ್ಲಿ ವ್ಯಾಪಾರ ಮುಗಿಯಿತು ಅವರು ಹೊರಟರು.

ಇನ್ನು ರಂಗನಾಥ್‌ರವರು ಕುಳಿತಿದ್ದರು ಅವರು ಹೊರಟರು. ಘೋರ್ಪಡೆಯವರು ಇವರಿಗೆ ವಹಿಸಿಬಿಟ್ಟರು. ಅವರು ಹೊರಟರು ಇದು ಏನು ಇದು? ನಿಮಗೆ ಏನಾಗಿದೆ ಇಷ್ಟೊಂದು ಬೇಜವಾಬ್ದಾರಿ ಏತಕ್ಕೆ? ಇದಕ್ಕೊಂದು ಗೌರವ ಬೇಡವೇ? ಘನತೆ ಬೇಡವೇ ಈ ಸಭೆಗೆ? ಇವತ್ತು ರಾಜ್ಯಪಾಲರ ಭಾಷಣ ಪ್ರಾರಂಭವಾಗಿದೆ. ಪ್ರಾರಂಭವಾಗಿರುವಾಗ ಅವರು ಸುಮ್ಮನೆ ಹೇಳುತ್ತಾ ಇದ್ದಾರೆ, ಹೇಳುತ್ತಾ ಇದ್ದರೆ ಎಲ್ಲವೂ ಹೇಳುತ್ತಿದ್ದಾರೆ ಯಾರು ಕೇಳುವವರು? ಯಾರೂ ಕೇಳುವವರು ಇಲ್ಲ ಕೋಣನ ಮುಂದೆ ಕಿಂದರಿ ಭಾರಿಸಿದಂಗೆ ಆಗಿದೆ. ಎಲ್ಲಿ ಯಾರಿದ್ದಾರೆ ಹೇಳಿ. ಏನು ಬರೆದುಕೊಂಡಿದ್ದೀರಿ ನೀವು ನೀವು ಏನೂ ಬರೆದುಕೊಂಡಿಲ್ಲ. ಯಾವುದೋ ಸಂಸಾರದ ವಿಚಾರ ಮಾತನಾಡುತ್ತಾ ಕೂತಿದ್ದೀರಿ ಏನು ಬರೆದುಕೊಂಡಿದ್ದೀರಿ ಹೇಳಿ ಏನಿದು? ಈಗ ಅವರು ಮಾತನಾಡಿದ್ದು ಏನಿದೆ ಹೇಳಿ ನಿಮ್ಮ ಕಪತದಲ್ಲಿ, ಹೇಳಿ ಏನು ಬರೆದುಕೊಂಡಿದ್ದೀರಿ? ಯಾರ ಮುಂದೆ ಹೇಳಬೇಕು. ಅವವು ತಾವು ಅಧ್ಯಕ್ಷರೇ ಹೇಳಬೇಕು.

ಅಧ್ಯಕ್ಷರು : ಪುಟ್ಟಮಾಸ್ತಿಗೌಡರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಇದ್ದಾರೆ ನಾನು ಇಲ್ಲ ಅಂತ ಹೇಳಲಿಲ್ಲ. ಅವರು ಬಹಳ ದೇವರು ಕೂತಂಗೆ ಗಂಭೀರವಾಗಿ ಕೂತಿದ್ದಾರೆ. ಪಾಪ ದೇವರಾದರೂ ಕಲ್ಲು, ಆ ರೂಪದಲ್ಲಿ ಇವರು ಕೂತಿದ್ದಾರೆ. ಏನೂ ಶಬ್ದವೇ ಇಲ್ಲ. ಅವರ ಬಗ್ಗೆ ಬಹಳ ಗೌರವ ಇದೆ. ಎರಡು ಅಭಿಪ್ರಾಯ ಇಲ್ಲ. ಇವರ ಭಾಷಣ ಕೇಳುವವರು ಯಾರು? ಪಶು ಸಂಗೋಪನಾ ಸಚಿವರ ಕುರ್ಚಿ ಇರುವುದು ಅಲ್ಲಿ ಅವರು ಇರುವುದು ಒಂದು ಕಡೆ. ರಾಮಲಿಂಗರೆಡ್ಡಿಯವರು ಅವರು ಅಲ್ಲಿ ಅರಾಮವಾಗಿ ಕೂತಿದ್ದಾರೆ. ನಮ್ಮ ಗಣಿ ಮತ್ತು ಭೂ ವಿಜ್ಞಾನ ಸಚಿವರು ಅವರು ಒಂದು ಕಡೆ ಕೂತಿದ್ದಾರೆ. ಇದು ಏನು? ಎಲ್ಲಿಗೆ ಹೋಗುತ್ತಿದ್ದೇವೆ ನಾವು.

ಈ ಸದನವನ್ನು ಎಲ್ಲಿ ತೆಗೆದುಕೊಂಡು ಹೋಗುತ್ತಿದ್ದೀರಿ? ಈ ಸದನಕ್ಕೆ ಕಳೆಹೋಗಿ ಇದಕ್ಕೆ ಒಂದು ತರಹ ಪ್ರೇತದ ಕಳೆ ಬಂದ ಹಾಗೆ ಕಾಣುತ್ತಿದೆ. ಇದೆಲ್ಲ ಬರಬಾರದು. ಅನಂತಕೃಷ್ಣರವರು ಸ್ವಂತ ಮನೆಗೆ ಬಂದ ಹಾಗೆ ಬರುತ್ತಾರೆ ಹೋಗುತ್ತಾರೆ ಅವರು ಒಂದು ತರಹ ಅವರದ್ದೇ ಆದ ಧಾಟಿ ಇದೆ. ಇದೇನು ಇದು, ನಾನು ಸುಮಾರು 1967ರಿಂದ ಈ ಸದನದಲ್ಲಿದ್ದೇನೆ. ತಮಗೆ ನಾನು ಹೇಳುತ್ತೇನೆ. ನಾನು 11 ಗಂಟೆಗೆ ಬಂದರೆ ಅಧ್ಯಕ್ಷರೇ ತಾವು ಅಧ್ಯಕ್ಷರಾದವರು ಹೊರಗೆಹೋಗಿ ಎನ್ನುವವರೆಗೂ ನಾವು ಕುಳಿತಿರುತ್ತೇವೆ. ವಿರೋಧಪಕ್ಷದ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳು ಇರ ಬೇಕಾದುದು ಅವರ ಕರ್ತವ್ಯ ಆದರೆ ಅವರು ಹೊರಗೆ ಹೋಗಿದ್ದಾರೆ. ಇಷ್ಟಾದರೂ ಅವರ ಹಣೆಬರಹ ವಿರೋಧ ಪಕ್ಷದ ನಾಯಕರು ಮಾತನಾಡುತ್ತೇನೆಂದರೆ ನಾನೇನು ಮಾಡುವುದಕ್ಕಾಗುವುದಿಲ್ಲ ಅದು ಅವರ ದುರಂತ.

ಅಧ್ಯಕ್ಷರು : ದೇಶಪಾಂಡೆಯವರೇ ತಾವು ಶುರು ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ : ವಾಟಾಳ್ ನಾಗರಾಜ್‌ರವರು ಒಂದು ಸಲಹೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಗಳು ಪೊಲಿಟಿಕಲ್ ಸಬ್ ಕಮಿಟಿ ಮೀಟಿಂಗ್‌ನಲ್ಲಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ನಾನು ಹೇಳುತ್ತಿದ್ದೆ ಒಂದು ಲಕ್ಷ 27 ಸಾವಿರ ಹೆಕ್ಟೇರ್ ಇರಿಗೇಶನ್ ಪೊಟೆನ್ಷಿಯಲ್ ಕ್ರಿಯೇಟ್

ಮಾಡುತ್ತೇವೆಂದು ಹೇಳಿದ ಸರ್ಕಾರ ತಮ್ಮ 93-94ರ ಮುಂಗಡ ಪತ್ರದಲ್ಲಿ ಇವತ್ತು ಕೇವಲ 28 ಸಾವಿರ ಹೆಕ್ಟೇರ್ ಇರಿಗೇಷನ್ ಪೊಟೆನ್ಷಿಯಲ್ ಕ್ರಿಯೇಟ್ ಮಾಡಿದ್ದಾರೆ. ಕೇವಲ 400 ಕೋಟಿ ರೂಪಾಯಿ ಡಿಸೆಂಬರ್‌ತನಕ ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ್ದಾರೆ. ಹಾಗಾಗಿ ನಾನು ಹೇಳುತ್ತೇನೆ ತಮ್ಮ ಟಾರ್‌ಗೆಟ್ಟನ್ನು ತಾವು ಹೇಗೆ ರೀಚ್‌ನ್ನು ಮಾಡುವುದಕ್ಕೆ ಸಾಧ್ಯ? ಇವತ್ತು 400 ಕೋಟಿ ರೂಪಾಯಿಗಳನ್ನು ತಾವು ಬಿಡುಗಡೆ ಮಾಡುವುದಕ್ಕೆ ತಮಗೆ ಸಾಧ್ಯ ಇಲ್ಲ. ಒಂದು ವೇಳೆ ಸಾಧ್ಯವಾದರೂ ಸಹ ಕೆಲಸ ಆಗುವುದಕ್ಕೆ ಸಾಧ್ಯವಿದೆ ಏನು? ಅದೇ ಪ್ರಕಾರ ಕಾವೇರಿ ಬೇಸಿನ್ನಲ್ಲಿ ಕೇವಲ 134 ಕೋಟಿ ರೂಪಾಯಿಗಳು ಮಾತ್ರಬಿಡುಗಡೆ ಆಗಿದೆ. ಅಲ್ಲಿ ಕೂಡ ಕೆಲಸ ಇಲ್ಲ ಎಲ್ಲೆಲ್ಲಿ ನಾವು ಹೋಗುತ್ತೇವೆ ಅಲ್ಲಲ್ಲಿ ಸಣ್ಣ ಸಣ್ಣ ಕಂಟ್ರಾಕ್ಟರ್ಸ್ ಸ್ಟ್ರೈಕ್ ಮಾಡುತ್ತಿದ್ದಾರೆ. ನಮಗೆ ಹಣ ಪೇಮೆಂಟ್ ಆಗುತ್ತಿಲ್ಲವೆಂದು ಹಾಳುತ್ತಿದ್ದಾರೆ.

ಶ್ರೀ ವೈ ಕೆ ರಾಮಯ್ಯ : 134 ಕೋಟಿ ಖರ್ಚಾಗಿದ್ದೋ ಅಥವಾ ಬಿಡುಗಡೆ ಆಗಿದ್ದೋ ನೋಡಿ.

ಅವರು ಖರ್ಚಾಗಿದ್ದು ಅಂತ ಕೊಟ್ಟಿದ್ದಾರೆ. ಚಂದ್ರೇಗೌಡರ ಪ್ರಶ್ನೆಗೆ 134 ಕೋಟಿ ಖರ್ಚಾಗಿದೆ ಅಂತ ಉತ್ತರ ಕೊಟ್ಟಿದ್ದಾರೆ. ಅದರ ಅರ್ಥ ಬಿಲ್ಸ್ ಪ್ರಿಪರೇಷನ್ ಆಗುವವರೆಗೂ ಅಂತ ಇರಬಹುದು. ಬಿಡುಗಡೆ ಆಗಿರುವುದು ಎಷ್ಟು ಅಂತ ಸ್ವಲ್ಪ ಕೇಳಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಖರ್ಚು ಇನ್ನೂ ಜಾಸ್ತಿ ಆಗಿರಬಹುದು.

ಶ್ರೀ ಸಿ. ಬೈರೇಗೌಡ : ಎಲ್ಲಾ ಖರ್ಚಾಗುತ್ತದೆ. ಟ್ರಜರಿಗೆ ಚೆಕ್ ಹೋಗಿ ಹಣ ಅವರ ಕೈಗೆ ತಲಪಬೇಕು ಆವಾಗ ಖರ್ಚಾಗಿದ್ದು ಅಂತ ಹೇಳಬಹುದು. ಯಾವಾಗ ನೋಡಿದರೂ ಕೂಡ ಟ್ರಜರಿ ಬ್ಯಾನ್ ಟ್ರಜರಿ ಬ್ಯಾನ್ ಎನ್ನತಕ್ಕಂಥಾದ್ದು ಬೋರ್ಡ್ ಹಾಕಿಬಿಟ್ಟಿದ್ದಾರೆ. ಎಲ್ಲಿಯವರೆಗೂ ಹೋಗಿದ್ದಾರೆ ಅಂದ್ರೆ ಮಾನ್ಯ ಕೃಷಿ ಸಚಿವರು ಇಲ್ಲೇ ಇದ್ದಾರೆ ಅವರ ಗಮನಕ್ಕೂ ಕೂಡ ಇದನ್ನು ಒಂದು ಸಾರಿ ತಂದೆ. ಇವರು ರೈತರನ್ನು ಉದ್ದಾರ ಮಾಡುತ್ತೇವೆಂದು ಬಹಳ ಹೇಳುವವರು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಹೆಚ್ಚಿಗೆ ಬೆಳೆ ಬೆಳೆದಂತಹವರಿಗೆ ಬಹುಮಾನ ಕೊಡತಕ್ಕಂಥ ಒಂದು ಯೋಜನೆಯನ್ನು ಅವರು ಕಾರ್ಯಗತ ಮಾಡುತ್ತಾ ಇದ್ದಾರೆ ಆದರೆ 5 ನಯಾಪೈಸೆ ಇಲ್ಲಿಯವರೆಗೂ ಕೊಡುವಷ್ಟು ಯೋಗ್ಯತೆ ಇಲ್ಲ ಈ ಸರ್ಕಾರಕ್ಕೆ 5 ಪೈಸೆಕೊಟ್ಟಿಲ್ಲ ಇದುವರೆಗೂ ಕೂಡ ಅವರು ನಮಗೆ ಕೊಡುತ್ತಾರೆ, ನಮಗೆ ಕೊಡುತ್ತಾರೆ ಅಂತ ಬೆಳೆದಂತಹ ರೈತರು ಪಾಪ ಕೂತಿದ್ದಾರೆ, 5 ಪೈಸೆ ಕೊಡುವುದಕ್ಕೆ ಆಗಿಲ್ಲ ಇವತ್ತಿನದಿವಸ ಒಂದೊಂದು ತಾಲ್ಲೂಕಿನಲ್ಲಿ 70-80 ಸಾವಿರ ಒಂದು ಲಕ್ಷ ರೂಪಾಯಿಯವರೆಗೂ ಕೂಡ ಕೊಡಬೇಕಾಗಿದೆ. ಬಹುಮಾನ ಕೊಡುತ್ತೇವೆಂದು ಹೇಳಿದ್ದಾರೆ ಅದನ್ನ ಕೊಡುವುದಕ್ಕೆ ಗತಿ ಇಲ್ಲ ನಿಮ್ಮ ಸರ್ಕಾರಕ್ಕೆ.

ಶ್ರೀ ಆರ್. ವಿ. ದೇಶಪಾಂಡೆ : ಈ ಸರ್ಕಾರ ಪ್ರತಿಯೊಂದು ಹಂತದಲ್ಲೂ ಪವರ್‌ಸೆಕ್ಟಾರ್‌ನಲ್ಲಿ ಮತ್ತು ಇರಿಗೇಷನ್ ಸೆಕ್ಟಾರ್‌ನಲ್ಲಿ ನಾವು ಪ್ರೆಯಾರಿಟಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಮುಂಗಡ ಪತ್ರದಲ್ಲಿ ಯಾವಾಗಲೂ ಇದ್ದಲ್ಲಿ ಪ್ರಾವಿಜನ್ ನಮ್ಮ ರಾಜ್ಯದಲ್ಲಿ ಆಗಿಲ್ಲ ಅಷ್ಟು ಪ್ರಾವಿಜನ್ ಮಾಡಿದ್ದೇವೆ ಅಂತ ಇಂತಹ ಪೊಳ್ಳು ದೊಡ್ಡ ಮಾತುಗಳು ಮಾತ್ರ ಸರ್ಕಾರದಿಂದ ನಮಗೆ ಕೇಳುವುದಕ್ಕೆ ಬರುತ್ತಿದೆ ವಿನಹಃ ಅವರು ಏನು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಆ ಕಾರ್ಯಕ್ರಮ ಅನುಷ್ಠಾನದಲ್ಲಿ ತಂದಿದ್ದಾರೆಯೇ ಅಂದ್ರೆ ಈ ಸರ್ಕಾರದಿಂದ ಅಂಥ ಯಾವ ಕಾರ್ಯಕ್ರಮವೂ ಆಗಿಲ್ಲ, ಬಜೆಟ್‌ನಲ್ಲಿ ಪ್ರಾವಿಜನ್ ಏನೋ ಮಾಡಿದ್ದಾರೆ ಆದರೆ

ಹಣ ಬಿಡುಗಡೆ ಮಾಡುವ ವಿಧಾಇಜ್ಞ ಬಗ್ಗೆ ಈಗ ಬೈರೇಗೌಡರು ಹೇಳಿದರು ಮುಂದೆ ನಾವು ಅದಕ್ಕೆ ಬರುತ್ತೇನೆ. ಫೈನಾನ್ಷಿಯಲ್ ಪೊಜಿಷನ್ನಿಂದಾಗಿ ಇವತ್ತು ಪವರ್ ಸೆಕ್ಟಾರ್ನಲ್ಲಿ ಎಲ್ಲಾ ಕೆಲಸ ನಿಂತಿದ್ದಾವೆ. ಅದು ಶರಾವತಿ ಟೇಲ್‌ರೇಸ್ ಇರಬಹುದು. ಕಾವೇರಿ ಸೆಕೆಂಡ್‌ಸ್ಟೇಜ್ ಇರಬಹುದು.

ಇವೊತ್ತು ನಾವು ಪವರ್ ಸೆಕ್ಟಾರ್‌ಗೆ ಪ್ರೈಯಾರಿಟಿ ಕೊಟ್ಟಿದ್ದೇವೆ ಎಂದು ಹೇಳಿ, ಕಾಳಿಪ್ರಾಜೆಕ್ಟ್‌ನಲ್ಲಿ ಕಳೆದ ಏಳು ತಿಂಗಳುಗಳಿಂದ ಕೆಲಸ ನಡೆಯುತ್ತಾ ಇಲ್ಲ. ಎಲ್ಲಾ ವರ್ಕ್ಸ್ ಕೂಡ ಸ್ಟ್ಯಾಂಡ್‌ಸ್ಟಿಲ್. ಯಾವ ಒಂದು ಕಂಟ್ರಾಕ್ಟರ್ನ ಅಗ್ರಿಮೆಂಟ್ ರಿನ್ಯೂ ಆಗಿಲ್ಲ. ಮೊನ್ನೆ ಕೈಗಾ ಪ್ರಾಜೆಕ್ಟ್ ಚೀಫ್ ಇಂಜಿನೀಯರ್ರವರನ್ನು ಭೇಟಿಯಾದಾಗ ಒಂದು ಮಾತು ಹೇಳಿದರು. ಕೈಗಾ 1993-94ರಲ್ಲಿ ಕಮಿಷನ್ ಆಗಬೇಕು. ಅದರಲ್ಲಿ ಒಂದು ಕೂಲಿಂಗ್ ಸ್ಟೇಷನ್ ಇದೆ. ಅದಕ್ಕೆ ನೀರು ಕದರಾ ಡ್ಯಾಂನಿಂದ ಬರಬೇಕು. ಕದರಾ ಡ್ಯಾಂನ ಕೆಲಸವು 1992ನೇ ಇಸವಿಯಲ್ಲಿ ಮುಗಿಯಬೇಕಾಗಿತ್ತು ಅದು ಇನ್ನೂ ಮುಗಿದಿಲ್ಲ. ಅದಕ್ಕೆ ಇನ್ನೂ ನಾಲ್ಕು ವರ್ಷಗಳು ಬೇಕಾದೀತು. ಎಲ್ಲಿಯ ತನಕ ಕದ್ರಾಡ್ಯಾಂನ ಕೆಲಸವು ಮುಗಿಯುವುದಿಲ್ಲವೊ ಅಲ್ಲಿಯತನಕ ನ್ಯೂಕ್ಲಿಯರ್ ಪ್ಲಾಂಟ್ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹೀಗಾಗಿ ಅಲ್ಲಿ ದಿವಸಕ್ಕೆ ಒಂದು ಕೋಟಿ ರೂಪಾಯಿಗಳಷ್ಟು ನಷ್ಟವು ಸಂಭವಿಸುತ್ತಾ ಇದೆ ಎಂದು ಹೇಳಿದರು. ಇದಕ್ಕೆ ಯಾರು ಜವಾಬ್ದಾರರು? ಇದಕ್ಕೆ ನಿಮ್ಮ ಸರ್ಕಾರವೇ ಜವಾಬ್ದಾರರಲ್ಲವೇ? ಕಳೆದ ಏಳು ತಿಂಗಳುಗಳಿಂದ ನೀವು ಯಾವುದೇ ಒಂದು ಕ್ರಮವನ್ನು ಆ ಬಗ್ಗೆ ತೆಗೆದುಕೊಂಡಿಲ್ಲ, ಯಾವ ಒಂದು ಕೆಲಸವೂ ನಡೆಯುತ್ತಾ ಇಲ್ಲ, ಆದರೆ ನಾವು ಪವರ್ ಪ್ರಾಜೆಕ್ಟ್ ಗಳಿಗೆ ಪ್ರೈಯಾರಿಟಿ ಕೊಡುತ್ತೇವೆ. ಮುಗಡ ಪತ್ರದಲ್ಲಿ ಸಾಕಷ್ಟು ಹಣವನ್ನು ಕೊಡುತ್ತಿದ್ದೇವೆ. ಅಂತ ಕೇವಲ ಪೊಳ್ಳು ಭರವಸೆಗಳನ್ನು ನೀಡಿದರೆ ಕೆಲಸ ಆಗಲು ಸಾಧ್ಯವಿಲ್ಲ. ನಿಮ್ಮ ಸರಕಾರದಲ್ಲಿ ಯಾವ ತರಹದ ಕಮಿಟ್ಮೆಂಟ್‌ಗಳೂ ಇಲ್ಲ. ರಾಜ್ಯದಲ್ಲಿ ಕೈಗಾರಿಕೆಗಳನ್ನು ಬೆಳೆಸುತ್ತೇವೆ, ಕರ್ನಾಟಕಕ್ಕೆ ಈ ಸೆಂಚುರಿಯ ಕೊನೆಯೊಳಗಾಗಿ ಒಂದನೇ ಕ್ರಮಾಂಕಕ್ಕೆ ಕೈಗಾರಿಕೆಯ ವಿಚಾರದಲ್ಲಿ ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳುತ್ತೀರಲ್ಲ ಅದು ಹೇಗೆ ಸಾಧ್ಯವಾಗುತ್ತದೆ? ಪವರ್ಜನರೇಷನ್ನ ವಿಚಾರದಲ್ಲಿ 1990-91ನೇ ಇಸವಿಯಲ್ಲಿ 2,984 ಮ್ಯಾಗಾವಾಟ್ಸ್‌ನಷ್ಟು ಇದ್ದರೆ, 1991-92ರಲ್ಲಿ ಇವರು ಅದಕ್ಕೆ ಸೇರಿಸಿದ್ದು ಕೇವಲ 29 ಮ್ಯಾಗಾವಾಟ್ಸ್. ಒಂದು ವರ್ಷದಲ್ಲಿ ಕೇವಲ 29 ಮ್ಯಾಗಾವಾಟ್ಸ್ ಹೆಚ್ಚಿಗೆ ಮಾಡಲು ಸಾಧ್ಯವಾಯಿತು. ಹಾಗೆಯೇ 1992-93ರಲ್ಲಿ ಇವರು ಹೆಚ್ಚಿಗೆ ಮಾಡಿದ್ದುದು 76 ಮ್ಯಾಗಾವಾಟ್ಸ್ ಮಾತ್ರ. ಹಾಗಾದರೆ ಪವರ್ಸಮಸ್ಯೆಯನ್ನು ಯಾವ ಪ್ರಕಾರವಾಗಿ ಬಗೆಹರಿಸಲು ಸಾಧ್ಯವಿದೆ? ಮಾನ್ಯ ಮುಖ್ಯಮಂತ್ರಿಯವರು ಗ್ಯಾಸ್‌ಗ್ರಿಡ್ ಬಗ್ಗೆ ಮಾತನಾಡುತ್ತಾರೆ. ಸದರ್ನ್‌ಗ್ಯಾಸ್ ಗ್ಯಾಸ್‌ಗ್ರಿಡ್ ಬಗ್ಗೆ ಮಾತನಾಡುತ್ತಾರೆ. ತ್ರಿವೇಂಡ್ರಮ್‌ಗೆ ಹೋಗಿದ್ದೆ, ಅಲ್ಲಿ ಎಲ್ಲಾ ಮುಖ್ಯಮಂತ್ರಿಗಳ ಸಭೆಯಾಯಿತು, ಕೇಂದ್ರ ಸರಕಾರದಿಂದ ನಮಗೆ ಪತ್ರ ಬಂದಿದೆ, ಗ್ಯಾಸ್‌ಗ್ರೀಡ್ ಬಗ್ಗೆ ಪತ್ರ ಬಂದಿದೆ ಎಂದು ಹೇಳುತ್ತಿದ್ದಾರೆ, ಆದರೆ ಇದು ಹೇಗೆ ಸಾಧ್ಯವಿದೆ? ಯಾವ ಒಂದು ಗ್ಯಾಸ್‌ಗ್ರಿಡ್ ಕೇಂದ್ರ ಸರಕಾರದ ಮುಂಗಡಪತ್ರದಲ್ಲಿ ಪ್ರೊವಿಷನ್ ಇಲ್ಲ, ಅದು ಬರಲು ಹೇಗೆ ಸಾಧ್ಯವಾಗುತ್ತದೆ? ಹೀಗಾದರೆ ಆ ಗ್ಯಾಸ್‌ಗ್ರಿಡ್ ಬಗ್ಗೆ ಫೀಸಿಬಲಿಟಿ ಸ್ಟಡಿ ಮಾಡಬೇಕು. ಅದರ ಬಗ್ಗೆ ಟೆಕ್ನಿಕಲ್ ರಿಪೋರ್ಟ್‌ನ್ನು ತೆಗೆದುಕೊಳ್ಳಬೇಕೆಂದು ಅಲ್ಲಿ ನಿರ್ಣಯವಾಗಿದೆ. ಆದರೆ ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ನಮಗೆ ಗ್ಯಾಸ್‌ಗ್ರಿಡ್ ಬರುತ್ತದೆ ಎಂದು ಹೇಳಿದ್ದಾರೆ. ಅಂದರೆ ಸರಕಾರ ಕೇವಲ ಪೊಳ್ಳು ಘೋಷಣೆ ಮತ್ತು ಪೊಳ್ಳು ಮಾತುಗಳನ್ನು ಹೇಳುತ್ತಾ ಬಂದಿದೆಯೇ ವಿನಹ ಕಾರ್ಯರೂಪದಲ್ಲಿ ಕೈಗಾರಿಕೆಯಾಗಲಿ ಕೃಷಿಯಾಗಲಿ, ನೀರಾವರಿಯಾಗಲಿ, ಯಾವ ಪ್ರಾಜೆಕ್ಟ್ ಆಗಲೀ, ಯಾವುದೂ ಕಣ್ಣಿಗೆ

ಕಾಣಿಸುತ್ತಾ ಇಲ್ಲ. ಹಾಗಾಗಿ ಸರಕಾರವು ಎಲ್ಲಾ ಹಂತದಲ್ಲಿಯೂ ವಿಫಲವಾಗಿದೆ ಎಂದು ಹೇಳಬೇಕಾಗುತ್ತದೆ.

ಇವೊತ್ತು ಕೆಇಬಿ ಮತ್ತು ಕೆಪಿಸಿಯಲ್ಲಿ ಪರಿಸ್ಥಿತಿಯು ಏನಾಗಿದೆ ಅಂದರೆ ಅಲ್ಲಿಯ ಸಿಬ್ಬಂದಿಗೆ ಸಂಬಳ ಕೊಡಲು ಅವರಿಂದ ಆಗುತ್ತಾ ಇಲ್ಲ. ಕಾಳಿ ಸೆಕೆಂಡ್ಸ್ಟೇಜ್ಗೆ ಲ್ಯಾಂಡ್ ಅಕ್ವಿಸಿಶನ್ ಅವಾರ್ಡ್ ಆಗಿದೆ. ಅದಕ್ಕೆ 11 ಕೋಟಿ ರೂಪಾಯಿಗಳಷ್ಟು ಅವಾರ್ಡ್ ಆಗಿದ್ದರೂ ಕೂಡ ಅದಕ್ಕೆ ಹಣ ಬಿಡುಗಡೆ ಮಾಡಲು ಸರಕಾರದಲ್ಲಿ ಇವೊತ್ತು ಹಣ ಇಲ್ಲ. ಅದಕ್ಕೆ ಕೇವಲ ಎರಡೂವರೆ-ಮೂರುಕೋಟಿಗಳಷ್ಟು ಮಾತ್ರ ಹಣ ಬಿಡುಗಡೆಯಾಗಿದೆ. ಪುನರ್ವಸತಿ ಕೆಲಸ ಒಟ್ಟಾರೆ ಸ್ಟ್ಯಾಂಡ್ ಸ್ಟಿಲ್ ಆಗಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಪುನರ್ವಸತಿ ಸಭೆಗಳು 2-3ಆಗಿರಬಹುದು. ಆದರೆ ಪುನರ್ವಸತಿಯೂ ಇಲ್ಲ, ಪವರ್ಜನರೇಷನ್ ಕೂಡ ಇಲ್ಲ, ಸಂಬಳ ಕೊಡಲು ಹಣ ಇಲ್ಲ, ಕಂಟ್ರಾಕ್ಟರ್‌ನ್ನು ಕಂಟ್ರಾಕ್ಟ್ ರಿನ್ಯೂ ಮಾಡುವುದಿಲ್ಲ. ಆದ್ದರಿಂದ ಸರಕಾರವು ಇವೊತ್ತು ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ತಮ್ಮ ಮುಖಾಂತರ ಮತ್ತು ಈ ಸದನದ ಮೂಲಕ ನಾಡಿನ ಜನರ ಗಮನಕ್ಕೆ ತರುತ್ತಾ ಇದ್ದೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಆರ್ಥಿಕ ಪರಿಸ್ಥಿತಿಯ ಬಗ್ಗೆ ಬಹಳ ಹೇಳುತ್ತಾ ಇರುತ್ತಾರೆ. ಬಹಳ ಒಳ್ಳೆಯ ಸದೃಢ ಆರ್ಥಿಕ ಪರಿಸ್ಥಿತಿ ನಮ್ಮದು ಇದೆ, ಒಳ್ಳೆಯ ಆರೋಗ್ಯಕರವಾಗಿದೆ ಎಂದು ಹೇಳುತ್ತಿರುತ್ತಾರೆ. ಆದರೆ ನಿಜಪರಿಸ್ಥಿತಿಯು ಏನಾಗಿದೆ? ನಮ್ಮ ಸ್ನೇಹಿತರು ಹೇಳಿದ ಹಾಗೆ ಕೇವಲ ಸಂಬಳ ಬಿಟ್ಟು ಬೇರೆ ಕೆಲಸ ಆಗುತ್ತಾ ಇಲ್ಲ. ಆಶ್ರಯ ಯೋಜನೆಯಲ್ಲಿ ಪೇಮೆಂಟ್ ಇಲ್ಲ, ನೆರಳಿನ ಭಾಗ್ಯದಲ್ಲಿ ಪೇಮೆಂಟ್ ಇಲ್ಲ, ಮಲೆನಾಡು ಯೋಜನೆಯಲ್ಲಿ ಪೇಮೆಂಟ್ ಇಲ್ಲ, ಹೆಚ್ಚಿಡಿಬಿಯಲ್ಲಿ ಪೇಮೆಂಟ್ ಇಲ್ಲ, ಎಂಎಲ್ಎ ಗ್ರ್ಯಾಂಟ್‌ನಲ್ಲಿ ಕೂಡ ಪೇಮೆಂಟ್ ಇಲ್ಲ, ತಮಗೆ ಬಹಳ ದೊಡ್ಡ ಮನಸ್ಸು ಇದ್ದು ತಾವುಗಳು ಕಾರ್ಯಕ್ರಮಗಳನ್ನು ಬಹಳ ಮಂಜೂರು ಮಾಡಿರಬಹುದು. ಆದರೆ ಹಣ ಇಲ್ಲ, ಎಲ್‌ಒಸಿ ಇಲ್ಲ. ಈ ವಿಚಾರ ಹೇಳುವಲ್ಲಿ ನನಗೆ ರಾಜಕೀಯ ಮಾಡಲು ಹೋಗುವುದಿಲ್ಲ ಮತ್ತು ನನಗೆ ಆ ಇಚ್ಛೆಯೂ ಇಲ್ಲ. ಇವೆಲ್ಲವೂ ಅಭಿವೃದ್ಧಿ ಕಾರ್ಯಕ್ರಮಗಳಿದ್ದು ಇವೆಲ್ಲವುಗಳೂ ಆಗಬೇಕೆಂದು ಮಾತ್ರ ಟೀಕೆ ಮಾಡುತ್ತಿದ್ದೇನೆ. ಆದ್ದರಿಂದ ಒಂದು ಕನ್ಸ್ಟ್ರಕ್ಟೀವ್ ಕ್ರಿಟಿಸೈಸ್ ಮಾಡುತ್ತಿದ್ದೇನೆಯೇ ವಿನಹ ಇದರಲ್ಲಿ ರಾಜಕೀಯ ಮಾಡುವ ಇಚ್ಛೆಯು ನನಗಿಲ್ಲ. ಜಿಲ್ಲಾ ಪರಿಷತ್‌ಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು? 1, 857 ಕೋಟಿ ರೂಪಾಯಿಗಳನ್ನು ರಾಜ್ಯದ ಎಲ್ಲಾ ಜಿಲ್ಲಾಪರಿಷತ್ತಗಳಿಗೆ ಬಿಡುಗಡೆ ಮಾಡಬೇಕಾಗಿತ್ತು. ಇದಕ್ಕೆ ಡಿಸೆಂಬರ್ ತನಕ ಬಿಡುಗಡೆಯಾದ ಹಣವು, 1,193 ಕೋಟಿಗಳು ಮಾತ್ರ. ಎಂದು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟಿದ್ದಾರೆ. ಇನ್ನು ಕೇವಲ ಮೂರು ತಿಂಗಳುಗಳು ಮಾತ್ರ ಉಳಿಯಿತು. ಹಾಗಾಗಿ ಒಂಭತ್ತು ತಿಂಗಳುಗಳಲ್ಲಿ ಯಾವ ಸರಕಾರವು 1,193 ಕೋಟಿಗಳನ್ನು ಬಿಡುಗಡೆ ಮಾಡಿದೆ, ಅಂದರೆ 60 ಪರ್ಸೆಂಟ್ನಷ್ಟು ಮಾತ್ರ ಹಣ ಬಿಡುಗಡೆಯಾಗಿದೆ. ಉಳಿದ ಹಣವನ್ನು ಬಿಡುಗಡೆ ಮಾಡಲು ಇವೊತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿದೆಯೇ? ಒಂದು ವೇಳೆ ನೀವು ಹಣ ಬಿಡುಗಡೆ ಮಾಡಿದರೂ ಕೆಲಸಗಳೂ ಆಗಲು ಸಾಧ್ಯವೇ? ಇವೊತ್ತು ಎಲ್ಲಾ ಕಡೆಗಳಲ್ಲಿ ಕಂಟ್ರಾಕ್ಟರ್‌ಗಳು ನಿಮ್ಮ ಹೆಸರಿನಲ್ಲಿ ಕೂಗುತ್ತಾ ಇದ್ದಾರೆ. ಯಾವ ಕಂಟ್ರಾಕ್ಟರೇ ಆಗಲೀ ಹಣ ಇಲ್ಲದೆ ಎಷ್ಟು ಅಂತ ಕೆಲಸ ಮಾಡಿಸುತ್ತಾನೆ? ಯಾರ ಮೇಲಿನ ವಿಶ್ವಾಸದಿಂದ ಎಷ್ಟು ಮೊತ್ತದ ಕೆಲಸ ಮಾಡಿಸಬಹುದು? ಮೊನ್ನೆ ಸ್ಟೇಟ್ಪ್ಲಾನ್ ಸೈಜ್ ಕಡಿಮೆ ಮಾಡುವುದಿಲ್ಲವೆಂದು ಹೇಳಿದ್ದೀರಿ. ತುಂಬಾ ಒಳ್ಳೆಯ ಕೆಲಸ ಅದು. ಯಾರಿಗೂ ಸ್ಟೇಟ್‌ಪ್ಲಾನ್ ಸೈಜ್ ಕಡಿಮೆ ಮಾಡುವ ಉದ್ದೇಶ ಇರುವುದಿಲ್ಲ ಅದನ್ನು ಇನ್ನೂ ಹೆಚ್ಚು ಮಾಡಿ. ಹೆಡ್‌ಲೈನ್‌ನಲ್ಲಿ ಆಗುವುದಿಲ್ಲ ಎಂದು ಬಂತು. ಆದರೆ ನಿಜವಾದ ಪರಿಸ್ಥಿತಿಯು ಹಾಗಿಲ್ಲ, ಇವರು They will be compelled to cut their Plan size.

ಏಕೆಂದರೆ ಸೇಲಸ್ಟ್ಯಾಕ್ಸನಲ್ಲಿ ನಿಮ್ಮ ಟಾರ್ಗೆಟ್ ಎಷ್ಟು ಇದೆ? ಅದರಲ್ಲಿ 2,800 ಕೋಟಿಗಳಷ್ಟು ತಾವು ಮಾಡಬೇಕು. The total collection in commercial Tax to Rs. 2800 crores.

ಇವೊತ್ತು ತಮ್ಮ ಟಾರ್ಗೆಟ್ ಪ್ರಕಾರ You have not even reached Rs. 1800 crores. 1800 ಕೋಟಿಗಳಿಗೂ ಕೂಡ ನೀವು ರೀಚ್ ಆಗಿಲ್ಲ. ಹಾಗಾದರೆ ಏನು ಮಾಡುತ್ತೀರಿ? ಒಂದು ವಿಚಾರ ಇದೆ, ಅದು ಅಡ್ವಾನ್ಸ್ ತೆಗೆದುಕೊಳ್ಳುವುದು. ಮುಂದಿನ ವರ್ಷ ಬರಬೇಕಾದುದನ್ನು ಅಡ್ವಾನ್ಸ್ ಆಗಿ ತೆಗೆದುಕೊಳ್ಳುವುದು. ಅದು ಪೂರ್ಣ ಆಗಲು ಸಾಧ್ಯವಿಲ್ಲ. ಎಕ್ಸೈಸ್ನಲ್ಲಿ 725 ಕೋಟಿ ರೂಪಾಯಿಗಳು ಇವರ ಟಾರ್ಗೆಟ್ ಇದೆ. ಆದರೆ ಅದರಲ್ಲಿ ಇವರು 300 ಕೋಟಿಗಳನ್ನು ಕೂಡ ಕ್ರಾಸ್ ಮಾಡಲಿಲ್ಲ. ಹೀಗಿದ್ದರೆ ಹೇಗೆ. ಮೊಬಲೈಸ್ ಮಾಡಲು ಸಾಧ್ಯ? ನಮ್ಮ ಏಕಾಂತಯ್ಯನವರು ಮೊಲಾಸಸ್ ಡಿ-ಕಂಟ್ರೋಲ್ ಬಗ್ಗೆ ಪ್ರಸ್ತಾಪ ಮಾಡಿದರು. ಮೊಲಸಿಸ್ ಡಿ-ಕಂಟ್ರೋಲ್ ಆಗಿ ನಿಮಗೆ ಕಷ್ಟವಾಗಿಲ್ಲ. ನೀವು ನಿಮ್ಮ ಅರಾಕ್ ಆಕ್ಷನ್ಸ್ ಆದಾಗ ಆ ಅರಾಕ್ ಕಂಟ್ರಾಕ್ಟರ್ಸ್ಗೆ ಒಂದು ಪರ್ಟಿಕ್ಯುಲರ್ ದರಕ್ಕೆ ಮಾರಾಟ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಸಮಯದಲ್ಲಿ ಡಿ-ಕಂಟ್ರೋಲ್ ಆಗಿದ್ದಿಲ್ಲ. ಆಗ ಪತ್ರಿಕೆಗಳಲ್ಲಿ ಡಿ-ಕಂಟ್ರೋಲ್ ಮಾಡುತ್ತಾರೆಂದು ಮಾತ್ರ ಬಂದಿತ್ತು. ಅದನ್ನು ನೀವು ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಜೂನ್ 10ನೇ. ತಾರೀಖಿಗೆ ಡಿ-ಕಂಟ್ರೋಲ್ ಆಯಿತು. ಆಗ ನಿಮ್ಮ ಆಕ್ಷನ್ ನಡೆದಿತ್ತು. ಆಗಲೇ ನೀವು ಗಮನಕ್ಕೆ ತೆಗೆದುಕೊಳ್ಳಬೇಕಾಗಿದ್ದರೂ ತೆಗೆದುಕೊಂಡಿಲ್ಲ. ಆದ್ದರಿಂದ ಯಾವ ಆದಾಯವು ನಿಮಗೆ ಬರಬೇಕಾಗಿತ್ತೋ ಆ ಆದಾಯ ನಿಮಗೆ ಬರುತ್ತಾ ಇಲ್ಲ. ಹಾಗಾಗಿ ಎಕ್ಸೈಸ್ ಮತ್ತು ಕಮರ್ಷಿಯಲ್ ರೆವಿನ್ಯೂಗಳು ಕಡಿಮೆಯಾಗುತ್ತಾ ಇದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ಮುಖ್ಯಮಂತ್ರಿಯವರು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಲಾಸ್ಟ್ ಈಯರ್ ಕಂಪೇರ್ ಮಾಡಿ ಈ ವರ್ಷದ್ದು ಕೊಟ್ಟಿದ್ದಾರಲ್ಲ, ಅದರ ಮೇಲೆ ಗೊತ್ತಾಗುತ್ತದೆಯಲ್ಲ ಹೆಚ್ಚು ಕಡಿಮೆಯಾಗಿರುವುದು ಇನ್ ಟೋಟಲಿಟಿಯನ್ನು ನಾನು ತೆಗೆದುಕೊಳ್ಳುತ್ತಾ ಇಲ್ಲ. ಇವೊತ್ತು 3500 ಕೋಟಿಗಳ ನಮ್ಮ ಪ್ಲಾನ್ ಇರಬಹುದು. ಆದರೆ ಹೋದ ವರ್ಷಕ್ಕೆ ಆಚೆಗಿನ ವರ್ಷಕ್ಕೆ ಕಂಪೇರ್ ಮಾಡಿದರೆ ನಮ್ಮ ಕಲೆಕ್ಷನ್ ಜಾಸ್ತಿ ಇದೆಯೋ ಅಥವಾ ಕಡಿಮೆ ಇದೆಯೋ?

ಶ್ರೀ ಆರ್.ವಿ. ದೇಶಪಾಂಡೆ : 1992-93ನೇ ಇಸವಿಗೆ ಟಾರ್ಗೆಟ್ ಇದ್ದುದು ಎರಡು ಸಾವಿರ ಚಿಲ್ಲರೆ ಕೋಟಿಗಳು. ಈ ವರ್ಷದಲ್ಲಿ ಅದು ಮೂರು ಸಾವಿರ ಚಿಲ್ಲರೆ ಕೋಟಿಗಳು. ನೀವು ಎರಡು ಸಾವಿರ ಕೋಟಿಗಳು ಇದ್ದಾಗ ಹಣ ಬಿಡುಗಡೆ ಮಾಡಿದ್ದೀರಿ. ಅದನ್ನು ಕಂಪೇರ್ ಮಾಡಿ ಮುಖ್ಯಮಂತ್ರಿಯವರು ಹೇಳುತ್ತಾ ಇದ್ದಾರೆ. ಅವರು ಮೂರು ಸಾವಿರ ಕೋಟಿ ರೂ.ಗಳಿಗೆ ಕಂಪೇರ್ ಮಾಡಿ ಹೇಳುತ್ತಿದ್ದಾರೆ.

ಅವರು ಬಹಳ ಜಾಣತನದಿಂದ ಹೇಳುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನೀರಾವರಿಗೆ ಹೋದ ಸಲ 100 ಕೋಟಿ ಖರ್ಚು ಮಾಡಿದ್ದರೆ ಈ ಸಲ 150 ಕೋಟಿ ಖರ್ಚು ಮಾಡಿದ್ದೇವೋ ಅಥವಾ ಇಲ್ಲವೋ ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : 1000-800 ಕೋಟಿ ಖರ್ಚು ಮಾಡುತ್ತೇವೆಂದು ನೀರಾವರಿ ಸಚಿವರು ಹೇಳಿದರಲ್ಲ. ಪ್ರತಿ ವರ್ಷ ಕೃಷ್ಣ ಬೇಸಿನ್ನಲ್ಲಿ ಎಷ್ಟು ಹಣ ನೀಡಿದ್ದೀರಿ ಇನ್ನೂ ಕೆಲಸ ಮುಗಿಸಿಲ್ಲ. ಮುಗಿಸುತ್ತೇವೆಂದು ಹೇಳಿದಿರಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದಕ್ಕೂ ಶಹಬಾಸ್ಗಿರಿ ಕೊಡುವುದಿಲ್ಲ ಅಂದರೆ ಏನು? ನೂರು ಇದ್ದುದನ್ನು 150 ಮಾಡಿದ್ದೇವೆ ಅಂದರೂ ಇಲ್ಲ. 300 ಮಾಡುತ್ತೇವೆಂದು 150 ಮಾಡಿದಿರಿ ಎಂಬ ವಾದ ಹೇಳುತ್ತೀರಿ.

ಶ್ರೀ ಆರ್. ವಿ. ದೇಶಪಾಂಡೆ : ಕಳೆದ ಬಾರಿ ನಾನು ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಹೇಳಿದ್ದೆ. ಮುಖ್ಯ ಮಂತ್ರಿಗಳೇ ಇದು ನಿಮ್ಮ ಆ್ಯಂಬಿಷಸ್ ಕಾರ್ಯಕ್ರಮವಿದೆ ಇದೆ, ಇದು ಡ್ರೀಮ್ ಇದೆ, ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ಪ್ರಾಕ್ಟಿಕಲ್ಲಾಗಿ ನೀವು ಪ್ಲಾನ್ ಮಾಡಿಲ್ಲ.You have raised the Plan size by 60%. No other State Government has done it. What is the basis on which you have done it?

ರಿಸೋರ್ಸಸ್ ಮೊಬಿಲೈಸೇಷನ್ ಮಾಡಬೇಕಲ್ಲ. ಇವತ್ತು ನಿಮ್ಮ ರಿಸೋರ್ಸಸ್ ಮೊಬಿಲೈಸೇಷನ್ ಆಗುವುದಿಲ್ಲವೆಂದು ನಾನು ಕಳೆದ ವರ್ಷದ ಬಜೆಟ್ ಭಾಷಣದ ಬಗ್ಗೆ ಮಾತನಾಡುವಾಗ ಹೇಳಿದ್ದೆ. ಹಣಕಾಸಿನ ಪರಸ್ಥಿತಿ ಸರಿಯಿಲ್ಲವೆಂದು ಒಪ್ಪಲಿಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ತಯಾರಿಲ್ಲ. 8ನೇ ತಾರೀಖಿನಂದು ಮಾನ್ಯ ಸಿಂಧ್ಯರವರ ಪ್ರಶ್ನೆಗೆ ಉತ್ತರ ಕೊಡುವಾಗ ಇರಿಗೇಶನ್ನಲ್ಲಿ 14 ಕೋಟಿ ಪೆಂಡಿಂಗ್ ಬಿಲ್ಸ್ ಇದೆ, ಪಬ್ಲಿಕ್ ವರ್ಕ್ಸ್‌ನ್ನಲ್ಲಿ 5 ಕೋಟಿ ಇದೆ ಒಟ್ಟು 18-19 ಕೋಟಿ ಪೆಂಡಿಂಗ್ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಕಳೆದೇ 3 ತಿಂಗಳಲ್ಲಿ ಬಿಡುಗಡೆಯಾದ ಹಣವೆಷ್ಟು ಎಂದು ಕೇಳಿದ್ದಕ್ಕೆ 18 ಕೋಟಿ ಎಂದು ಹೇಳಿದ್ದರು. ಇದೇ ಮಾನ್ಯ ಸದಸ್ಯರು ಡಿಸೆಂಬರ್‌ನಲ್ಲಿ ಕೇಳಿದ ಪ್ರಶ್ನೆಗೆ 124 ಕೋಟಿ ಪೆಂಡಿಂಗ್ ಬಿಲ್ಸ್ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದರು. ಅಂದರೆ ಡಿಸೆಂಬರ್ 31ಕ್ಕೆ 124 ಕೋಟಿ ಪೆಂಡಿಂಗ್ ಬಿಲ್ಸ್ ಇತ್ತು. ಜನವರಿಯಲ್ಲಿ ಉತ್ತರ ಕೊಡುವಾಗ ಹೇಳಿದಿರಿ ಪೆಂಡಿಂಗ್ ಬಿಲ್ಸ್ ಕೇವಲ 18 ಕೋಟಿ ಎಂದು. ಬಿಡುಗಡೆ ಮಾಡಿದ ಹಣ 3 ತಿಂಗಳಲ್ಲಿ 18 ಕೋಟಿ, ಹಾಗಾದರೆ 121 ಕೋಟಿ ಪೇಮೆಂಟ್ ಅನ್ನು ಎಲ್ಲಿಂದ ಮಾಡಿದಿರಿ? 121 ಕೋಟಿ ಪೇಮೆಂಟಾಗಬೇಕಾದರೆ ಕಳೆದ 3 ತಿಂಗಳಲ್ಲಿ 135 ಕೋಟಿ ರಿಲೀಸಾಗಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ವಿಚಾರದಲ್ಲಿ ಈ ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆಂದು ಹೇಳುತ್ತಿದ್ದೇವೆ. ನೀವು ಉತ್ತರ ಕೊಡಿ. ಇರಿಗೇಷನ್ ಇಲಾಖೆಯಲ್ಲಿ ಡಿಸೆಂಬರ್ ಕೊನೆಯಲ್ಲಿ 124 ಕೋಟಿ ಬಿಲ್ ಇತ್ತು. ಮಾನ್ಯ ಸಿಂಧ್ಯ ರವರ ಪ್ರಶ್ನೆಗೆ ಉತ್ತರ ಸರಿ ಇತ್ತು. ಮಾನ್ಯ ಮುಖ್ಯಮಂತ್ರಿಗಳ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಪ್ಲಾನ್ ಸೈಜ್ ಏನು ಇದೆ ಇದನ್ನು ಇಂಪ್ಲಿಮೆಂಟ್ ಮಾಡಬೇಕೆಂಬ ಇಚ್ಛೆ ಅವರಿಗಿರಬಹುದು. ಆದರೆ ಆ ಪ್ರಕಾರ ಕಾರ್ಯಕ್ರಮ ಸರಕಾರದಿಂದಾಗಿಲ್ಲ. ಇವತ್ತು ರಿಸೋರ್ಸಸ್ ಮೊಬಿಲೈಸೇಷನ್ ಆಗುತ್ತಿಲ್ಲ. ಹಲವಾರು ಲೂಪ್ ಹೋಲ್ಸ್‌ಗಳು ಇವೆ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 2800 ಮಾಡುವುದೇನೂ ಕಷ್ಟ ಇಲ್ಲ. ನಿಮ್ಮ ಸರಕಾರದ ವ್ಯವಸ್ಥೆ ಬಿಟ್ಟು ಪ್ರೈವೇಟ್ ಏಜೆನ್ಸಿ ಇಟ್ಟುಕೊಳ್ಳಿ. ಕೆಳಗಿನಿಂದ ಮೇಲಿನವರೆಗೆ ಎಷ್ಟು ಲೂಪ್ ಹೋಲ್ಸ್ ಇದೆ ಅದನ್ನು ಸರಿ ಮಾಡಿ. ಅದು ಇವತ್ತು ಹೊಸದಾಗಿ ಬಂದಿದೆ ಎಂದು ನಾನು ಹೇಳುವುದಿಲ್ಲ. ನಮ್ಮ ಕಾಲದಲ್ಲಿ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇವತ್ತು ಸರಕಾರ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಕೇವಲ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿ ಘೋಷಣೆ ಮಾಡಿದರೆ ತಾವು ಯಾವುದೂ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಘೋಷಣೆಗಳನ್ನು ಮಾಡಿದಾಗ ಅದನ್ನು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಬೇಕು. ಆ ರೀತಿಯ ಪ್ರಯತ್ನ ನಮಗೆ ಸರಕಾರದಿಂದ ಕಂಡು ಬರುತ್ತಿಲ್ಲ. ಹಾಗಾಗಿ ಸರಕಾರದ ಇಷ್ಟೊಂದು ರಿಸೋರ್ಸಸ್ crunch ಇದೆ. ಎಷ್ಟೋ ಬಾರಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು ಅದನ್ನು ನಂಬಲಿಕ್ಕೆ ಸಾಧ್ಯವಿಲ್ಲವೆಂದು ಮುಖ್ಯ ಮಂತ್ರಿಗಳಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿಮ್ಮ ಕಷ್ಟ ಸುಖವೇನು ಇದೆ ಹೇಳಿ ಆಗ ನಾವು ನಿಮಗೆ ಕೆಲವು ಸಲಹೆಗಳು ಇದ್ದರೆ ಕೊಡಬಹುದು. ಆದರೆ ಕೊನೆ

ಹಂತದಲ್ಲಿ ಪ್ಲಾನ್ ಸೈಜ್ ಇಂಪ್ಲಿಮೆಂಟ್ ಮಾಡಲಿಕ್ಕಾಗುವುದಿಲ್ಲವೆಂದರೆ ಏನೂ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಇಲಾಖೆಗಳಿಗೂ 65-70 ಪರ್ಸೆಂಟ್ ಮೇಲೆ ಎಕ್ಸ್‌ಪೆಂಡಿಚರ್ ಆಗಬಾರದು ಎಂದು ಸೂಚನೆ ಹೋಗಿದೆ.

5.20 ಪಿ.ಎಂ.

ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳಿದರೂ ಇದರಲ್ಲಿ ಸತ್ಯ ಸಂಗತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಡೀಸಲ್ ಪೆಟ್ರೋಲ್ ಬಗ್ಗೆ ಮಾತನಾಡುವಾಗ, ರೇಟನ್ನು ಕೇಂದ್ರ ಸರ್ಕಾರದವರು ಮಾಡಿದರು. ಏತಕ್ಕೆ ಅದರ ಸಲುವಾಗಿ ಇಲ್ಲಿ ಟೀಕೆ ಮಾಡುತ್ತೀರಿ ಎಂದು ಹೇಳಿದರು. ನಿಮಗೆ ಇದರಿಂದ ಎಷ್ಟು ಖರ್ಚಾಯಿತು? ನಿಮ್ಮ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಎಷ್ಟು ಹೆಚ್ಚಾಯಿತು ? ಅದರ ಬಗ್ಗೆ ನೀವು ಚಿಂತನೆ ಮಾಡಿದ್ದೀರೇನು? You should have protested. ರಾಜ್ಯ ಸರ್ಕಾರಗಳನ್ನು ಕೇಂದ್ರಸರ್ಕಾರ ಯಾವಾಗಲೂ ಕಾನ್ಫಿಡೆನ್ಸ್‌ಗೆ ತೆಗೆದುಕೊಂಡಿಲ್ಲ. ಮನಸ್ಸು ಬಂದಹಾಗೆ ಇವತ್ತು ಕೇಂದ್ರ ಸರ್ಕಾರ ಇಡೀ ವಿಶ್ವದಲ್ಲಿ ಡೀಸಲ್ ಪೆಟ್ರೋಲ್ ಬೆಲೆಗಳು ಕಡಿಮೆಯಾದಾಗ ಇವತ್ತು ಹೆಚ್ಚು ಮಾಡಿ ಸಾಮಾನ್ಯ ಜನರ ಮೇಲೆ ಅಷ್ಟೇ ಅಲ್ಲ, ಸರ್ಕಾರದ ಮೇಲೆ ಎಷ್ಟು ಭಾರ ಹಾಕಿದ್ದಾರೆ? ಇವತ್ತುಫೈನಾನ್ಸ್ ಡಿಸಿಪ್ಲಿನ್ ಇಲ್ಲ. ಮಾನ್ಯ ಮುಖ್ಯಮಂತ್ರಿಗಳ ಇನ್ಟೆನ್ಷನ್ ಏನು? ಇವತ್ತು ಬಜೆಟ್ ಎಂದು ಹೇಳಿ ಅದರ ಒಂದು ಪಾವಿತ್ರ್ಯತೆ ಇರುತ್ತದೆ, ಆ ಪಾವಿತ್ರ್ಯತೆಯನ್ನು ಮುಖ್ಯಮಂತ್ರಿಗಳ ಇಟ್ಟಿಲ್ಲ. ಯಾವಾಗಲೂ ಒಂದು ಬಜೆಟ್ ಪ್ರೆಸೆಂಟ್ ಆದಾಗ ಯಾವುದೇ ಒಂದು ಇನ್ಕಂ ಎಕ್ಸ್‌ಪೆಂಡಿಚರ್ ನೀವು ಯಾವಾಗ ಹೇಳುತ್ತೀರಿ, ಆಗ ಹಣ ಎಲ್ಲಿಂದ ಬರುತ್ತದೆ? ಆ ಹಣವನ್ನು ನಾವು ಯಾವ ಪ್ರಕಾರ ಖರ್ಚು ಮಾಡುತ್ತೇವೆ ಎಂದು ಹೇಳಿ ತಾವು ಇದಕ್ಕೆ ಮನ್ನಣೆಯನ್ನು ತೆಗೆದುಕೊಳ್ಳುತ್ತೀರಿ. ಇವತ್ತು ಎಲ್ಲಿಗೆ ಮುಖ್ಯಮಂತ್ರಿ ಹೋಗಲಿ ಅಲ್ಲಿ ಎರಡು ಕೋಟಿ ಕೊಡುತ್ತೇನೆ, ಐದು ಕೋಟಿ ರೂಪಾಯಿ ಕೊಡುತ್ತೇನೆ, ಹುಡ್ಕೋಗೆ ಹೋಗಿ ಅಲ್ಲಿ ಮೂರು ಕೋಟಿ ರೂಪಾಯಿ ಕೊಡುತ್ತೇನೆ, ಅಂದರೆ ಇದು ಏನು ನಿಮ್ಮ ಲೆಕ್ಕ? ನಿಮ್ಮ ಮನಸ್ಸಿನಲ್ಲಿ ಕೊಡಬೇಕೆಂದಿದ್ದರೆ ಕೊಡಿ I am not against for giving. ನೀವು ಕೊಡಬೇಕಾದರೆ ಸರಿಯಾದ ಪ್ರಾವಿಷನ್ ಮಾಡಿಕೊಡಿ. ಮುಖ್ಯಮಂತ್ರಿಗಳು ಏನು ಭರವಸೆಯನ್ನು ಕೊಟ್ಟಿದ್ದಾರಲ್ಲ, ಅದೇ ಒಂದು ದೊಡ್ಡ ಗಿನ್ನಿಸ್ ಪುಸ್ತಕದಲ್ಲಿ ದಾಖಲಾಗಬಹುದು. ಅಷ್ಟು ಭರವಸೆಯನ್ನೂ ಯಾವ ಮುಖ್ಯಮಂತ್ರಿಗಳೂ ಕೊಟ್ಟಿಲ್ಲ. ಭರವಸೆಯನ್ನು ಕೊಡುತ್ತಲೇ ಇದ್ದಾರೆ. ಇನ್ಟೆನ್ಷನ್ ಒಳ್ಳೆಯದು ಇರಬಹುದು. ಸಹಾಯ ಮಾಡುವ ಭಾವನೆ ಇರಬಹುದು. ಅದರ ಬಗ್ಗೆ ನನಗೆ ವಿವಾದ ಇಲ್ಲ. ಆದರೆ ಹಣವನ್ನು ಎಲ್ಲಿಂದ ತರುತ್ತೀರಿ? ಏನು ಗಿಡವನ್ನೇನಾದರೂ ಹಾಕಿದ್ದೀರಾ? ಇದ್ದರೆ ಹೇಳಿ. ನಾವು ಗಿಡವನ್ನು ಹಾಕಿದ್ದೇವೆ, ನಮಗೆ ಮನಸ್ಸಿಗೆ ಬಂದ ಹಾಗೆ ಪ್ಲಕ್ ಮಾಡಿಕೊಂಡು ಬರುತ್ತೇವೆ ಎಂದು ಹೇಳಿ.

ಏನೊಂದು ಫೈನಾನ್ಸ್ ಡಿಸಿಪ್ಲಿನ್ ಇರುತ್ತದೆ, ಆ ಒಂದು ಫೈನಾನ್ಷಿಯಲ್ ಡಿಸಿಪ್ಲಿನ್ ಈ ಸರ್ಕಾರದಲ್ಲಿ ನಮಗೆ ಕಂಡುಬರುತ್ತಿಲ್ಲ. ಬಜೆಟ್‌ದು ಮುಂಗಡಪತ್ರದಲ್ಲಿ ಪಾವಿತ್ರ್ಯತೆ ಇರುತ್ತದೆ. ಆ ಪಾವಿತ್ರ್ಯತೆ ನಮಗೆ ಕಾಣುತ್ತಿಲ್ಲ. ಹಾಗಾಗಿ ಇವತ್ತು ಎಲ್ಲಾ ಹಂತದಲ್ಲಿ ವಿಫಲವಾಗಿದೆ. ನಮಗೊಂದು ಸಂತೋಷ, ನಮ್ಮ ಜಿಲ್ಲಾ ಮಂತ್ರಿಗಳು ಬಹಳ ಸ್ಪಷ್ಟವಾಗಿ ಮೊನ್ನೆ ಕಾರವಾರದಲ್ಲಿ ಹೇಳಿದ್ದಾರೆ. ಅಭಿವೃದ್ಧಿ ಕೆಲಸ ಕುಂಠಿತವಾಗಿದೆ ಎಂದು. ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಬಹಳ ಚೆನ್ನಾಗಿ ಅಭಿವೃದ್ಧಿ ಕೆಲಸ ನಡೆಯುತ್ತಿವೆ, ಇಡೀ ರಾಜ್ಯದಲ್ಲಿ ಒಳ್ಳೆಯ ಪ್ರೋಗ್ರೆಸ್ ಇದೆ ಎಂದು ಮಾನ್ಯ ರಾಜ್ಯಪಾಲರ ಮುಖಾಂತರ ಇಡೀ ನಾಡಿಗೆ ಹೇಳಿಸಿದ್ದೀರಿ.

Sri. M. Mallikharjuna Kharge : You are unfair to us. ಏಕೆಂದರೆ 70 ಕೋಟಿಯಲ್ಲಿ ಉತ್ತರ ಕರ್ನಾಟಕದಲ್ಲಿ 50 ಕೋಟಿ ಇಲ್ಲಿಯವರೆಗೆ ಅಂದರೆ ಡಿಸೆಂಬರ್ ಎಂಡ್ವರೆಗೆ ರಿಲೀಸ್ ಆಗಿದೆ. ನಮ್ಮಲ್ಲಿರುವ ಫಿಗರ್‌ನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ನಾನು ಮಾತನಾಡುತ್ತಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ಪ್ರಾಮಾಣಿಕವಾಗಿ ಹೇಳಿದ್ದಾರೆ, ನಾನು ಅದನ್ನು ಮೆಚ್ಚುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಟ್ಟು ಈಗ ಏನು ಎರಡು ತಿಂಗಳಲ್ಲಿ ಖರ್ಚಾಗಿದೆ, ಇನ್ನು ಬಾಕಿಯ ಮೂರು ತಿಂಗಳಲ್ಲಿ ಖರ್ಚಾಗಿಯೇ ಆಗುತ್ತದೆ. ಹೌದು, ಅದು ಹಂಡ್ರೆಡ್ ಪರ್ಸೆಂಟ್ ಅಚೀವ್ಮೆಂಟ್.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಜಿಲ್ಲಾ ಮಂತ್ರಿಗಳು. ಸರ್ಕಾರದಿಂದ ಹಣ ಬಿಡುಗಡೆಯಾಗಿದೆ ಎಂದು ಹೇಳಿದರು. ಆದರೆ ನಮ್ಮ ಜಿಲ್ಲೆಯಲ್ಲಿ ಪ್ರಗತಿ ನಡೆಯುತ್ತಿಲ್ಲ. ಬೇಕಾದರೆ ನನ್ನ ಹತ್ತಿರ ಸ್ಟೇಟೀಮೆಂಟ್ಸ್ ಇವೆ, ಕಳುಹಿಸಿಕೊಡುತ್ತೇನೆ. ಸಂಯುಕ್ತ ಕರ್ನಾಟಕದ್ದು ಇದೆ, ಪ್ರಜಾವಾಣಿ ಇದೆ, ಹಲವಾರು ಸ್ಟೇಟ್ಮೆಂಟ್‌ಗಳು ಇವೆ. ಮುಖ್ಯಮಂತ್ರಿಗಳು ಪ್ರಾಮಾಣಿಕವಾಗಿಲ್ಲ ಎಂದು ಹೇಳಿದರು. ನಮ್ಮ ಜಿಲ್ಲಾ ಮಂತ್ರಿಗಳು ಪ್ರಾಮಾಣಿಕರಾಗಿದ್ದಾರೆ. ನನಗೆ ಸಂತೋಷ. He has admitted that work is not going on satisfactorily ಪುನಃ ಇಲ್ಲಿ ಯಾರದೇ ಸರ್ಟಿಫಿಕೇಟ್ ಬೇಡ.

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ವಿರೋಧಿ ಪಕ್ಷದ ನಾಯಕರು, ನಾನು ಈ ಜಿಲ್ಲಾ ಅಭಿವೃದ್ಧಿ ಕಾರ್ಯಗಳ ಪರಿಶೀಲನೆಯಲ್ಲಿ ಮತ್ತು ಅನಂತರ ಹೇಳಿದ ಮಾತುಗಳನ್ನು ತಪ್ಪು ಅರ್ಥ ಬರುವಂತೆ ಹೇಳುತ್ತಿದ್ದಾರೆ. ನಾನು ಹೇಳಿದಂಥದ್ದು ಅನೇಕ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ, ಇದರ ಅರ್ಥ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ ಅಥವಾ ಸರ್ಕಾರದಿಂದ ಯಾವುದೇ ಲೋಪವಾಗಿದೆ ಎಂದು ಹೇಳಿರಲಿಲ್ಲ. ಅಧಿಕಾರಿಗಳು ಸರಿಯಾದಂಥ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಅದನ್ನು ನಾವು ಸರಿಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ ಎಂದು ಹೇಳಿದ್ದೇನೆ. ಅದರಲ್ಲಿ ತಪ್ಪೇನು ಇದೆ?

ಶ್ರೀ ಆರ್. ವಿ. ದೇಶಪಾಂಡೆ : "ಅಭಿವೃದ್ಧಿ ಕಾರ್ಯ, ಸಚಿವರ ಅತೃಪ್ತಿ," ಅಂತ ಪತ್ರಿಕೆಗಳಲ್ಲಿ ಬಂದಿದೆ ಈಗ ಅವರೇನೊ ಹೇಳಲಿ. ನಾನು ಹೇಳುತ್ತಿದ್ದೇನೆ, ನಾನು ಡಿಬೆಟ್‌ಗೆ ಹೋಗುತ್ತಿಲ್ಲ. ನನಗೆ ಏನು ಬೇಕಾಗಿದೆ ಎಂದರೆ ಅವರ ಪ್ರಾಮಾಣಿಕತೆಯನ್ನು ನಾನು ಮೆಚ್ಚಿದ್ದೇನೆ. ಹಣ ಬಿಡುಗಡೆಯಾಗಿದ ಎಂದು ಸಚಿವರಾಗಿ ಅವರು ಹೇಳಬೇಕು. ಆದರೆ ಹಣ ಬಿಡುಗಡೆಯಾಗಿಲ್ಲ ಎಂದು ನನಗೆ ಗೊತ್ತು, ಅವರಿಗೂ ಗೊತ್ತಿದೆ. ಏಕೆಂದರೆ ಇವತ್ತು ಬಿಡಿಒಗಳು ಕೆಲಸಮಾಡುವುದಕ್ಕೆ ಕಳೆದ ಮೂರು ನಾಲ್ಕು ತಿಂಗಳಿಂದ ಯಾವ ಬಿಲ್ ಪೇಮೆಂಟ್ ಆಗುತ್ತಿಲ್ಲ.

ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಈ ಉದಾಹರಣೆ ಏಕೆ ತೆಗೆದುಕೊಂಡೆ ಅಂದರೆ, ರಾಜ್ಯಪಾಲರ ಭಾಷಣದಲ್ಲಿ ಬಹಳ ಚೆನ್ನಾಗಿ ಅಭಿವೃದ್ಧಿ ನಡೆಯುತ್ತಿದೆ ಎಂದು ಹೇಳಿದ್ದೀರಿ. ಹಾಗಾಗಿ ನಾನು ಹೇಳುತ್ತಿದ್ದೇನೆ, ಅಭಿವೃದ್ಧಿ ಚೆನ್ನಾಗಿ ನಡೆಯುತ್ತಿಲ್ಲ ಎಂದು ಅಷ್ಟೇ ಹೇಳುತ್ತಿದ್ದೇನೆಯೇ ವಿನಹ ಅದರ ಮುಂದೆ ಹೋಗುವ ಇಚ್ಛೆ ನನಗೆ ಇಲ್ಲ. ಇವತ್ತು ಇಷ್ಟೊಂದು ಹಣಕಾಸಿನ ಪರಿಸ್ಥಿತಿ ಕೆಟ್ಟಿದೆ. ಇವತ್ತು ಓಲ್ಡ್ ಏಜ್ ಪೆನ್ಷನ್ ಅಂಗವಿಕಲರಿಗೆ ಸಿಗುವ ಪೆನ್ಷನ್, ವಿಧವಾ ಮಾಸಾಶನ ನಾಲ್ಕೈದು ತಿಂಗಳಿಂದ ಪೇಮೆಂಟ್ ಆಗುತ್ತಾ ಇಲ್ಲ. ರಿವ್ಯೂ ಮಾಡಿ ನೋಡಿ. ನಿಮ್ಮ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದ್ದರೆ ಸಮಾಜದಲ್ಲಿರತಕ್ಕ ಅತಿ ಕಡು ಬಡವರಿಗೆ ಸಹಾಯ ಮಾಡುವ ಯೋಜನೆ ಏನು ಹಾಕಿಕೊಂಡಿದ್ದೇವೆ ಅದು ಏಕೆ ಆ ಹಣ ಇವರಿಗೊ ಹೋಗುತ್ತಿಲ್ಲ? ಏನು ಕಾರಣ? ಮುಖ್ಯ ಮಂತ್ರಿಗಳು ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರಲ್ಲ ಅದು..

ಶ್ರೀ ಕಾಗೋಡು ತಿಮ್ಮಪ್ಪ : ಅಂಗವಿಕಲರಿಗೆ ಬರುತ್ತಿರತಕ್ಕ ಪೆನ್ಷನ್ ಬರುತ್ತಾ ಇಲ್ಲ. ನಾಲ್ಕೈದು ತಿಂಗಳಾಯಿತು ಎಂದು ಹೇಳಿದಿರಿ. ನಿಮ್ಮ ತಾಲ್ಲೂಕಿನಲ್ಲಿಯೂ

ಇದ್ದಾರೆ, ನಮ್ಮ ತಾಲ್ಲೂಕಿನಲ್ಲಿಯೂ ಇದ್ದಾರೆ. ಅವರಿಗೆ ಪೆನ್ಷನ್ ನಿಂತಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಯಾವುದು ಬಂದಿದೆ ಎಂದರೆ ಮೊನ್ನೆ ಜನಸಂಪರ್ಕ ಸಭೆಯಲ್ಲಿ ಹೋದಾಗ ತೋರಿಸಿದ್ದಾರೆ. ಕೆಲವರು ರಿನ್ಯೂ ಮಾಡಿಸಿಕೊಳ್ಳಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ನೀವು ಬಹಳ ಜಾಣರು. ನಾನು ಮುಗಿಸುತ್ತೇನೆ. ದಯಮಾಡಿ ಸಹಕರಿಸಿ. ಮುಂದೆ ಪ್ರಸ್ತಾಪ ಮಾಡುವುದಿಲ್ಲ. ನಿಮ್ಮ ನಿಮ್ಮ ಕ್ಷೇತ್ರಕ್ಕೆ ಹೋದಾಗ ಕೇಳಿ. ಬಡ ಜನ ಹೋದಾಗ ಬರುತ್ತಾರೆ, ನಮ್ಮ ಹಣ ಬಂದಿಲ್ಲ ಎಂದು ಹೇಳುತ್ತಾರೆ. ನಾವು ಹೋಗುತ್ತೇವೆಲ್ಲ ಆಗ ಅಲ್ಲಿ ಲೈನ್ ಹಚ್ಚಿದ್ದು ನೋಡಿದರೆ ನಮ್ಮ ಕಣ್ಣಲ್ಲಿ ನೀರು ಬರುತ್ತದೆ. ಇವತ್ತು ಶಾಸಕರಿಗೆ ಪ್ರತಿ ಒಂದು ಕ್ಷೇತ್ರಕ್ಕೆ 20 ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಹಾರ್ನಳ್ಳಿ ರಾಮಸ್ವಾಮಿಯವರೇ ಹೀಗೆ ಹೇಳಿದ್ದಾರೆ. ಮಾನ್ಯ ರಂಗನಾಥರವರು ಇಲ್ಲಿ ಇಲ್ಲ. ಅಭಿವೃದ್ಧಿ ಕೆಲಸಕ್ಕೆ 20 ಲಕ್ಷ ರೂಪಾಯಿ. ಯಾವಾಗ ಬರುವುದು ಆ 20 ಲಕ್ಷ? ನಾನು ಏನು ಹೇಳುತ್ತೇನೆ ಎಂದರೆ ನಿಮ್ಮ ಇಂಟೆನ್ಷನ್ ಬಗ್ಗೆ ಹೇಳುತ್ತಿಲ್ಲ. ಹಣ ಇಲ್ಲ. 40 ಕೋಟಿ ರೂಪಾಯಿ ಪ್ರಾವಿಜನ್ ಮಾಡಿದ್ದೀರಿ. ಏನು 40 ಕೋಟಿ ಪ್ರಾವಿಜನ್? ಮತ್ತೊಮ್ಮೆ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದರು. 720 ಕೋಟಿ ರೂಪಾಯಿಯ ಕಾರ್ಯಕ್ರಮ ಎಂದು. ಬಡತನ ನಿರ್ಮೂಲನಾ ಕಾರ್ಯಕ್ರಮ 720 ಕೋಟಿ ರೂಪಾಯಿ ಎಂದು. ಎಲ್ಲಿದೆ 720 ಕೋಟಿ ರೂಪಾಯಿ? ಒಮ್ಮೆ ಮುಂಗಡ ಪತ್ರ ಪ್ರೆಸೆಂಟೇಷನ್ ಆದ ನಂತರ Where are you going to find that money?

ಏನು ನಿಮ್ಮ ಕಡೆ ಫೈನಾನ್ಸಿಡಿಸಿಪ್ಲಿನ್ ಇದೆ. ಸುಮ್ಮನೇ ಡಿಪಾರ್ಟ್ಮೆಂಟಲ್ ಹಣ ಅಲ್ಲಿಂದ ಇಲ್ಲಿಂದ ಅಲ್ಲಿಗೆ ಅಜಸ್ಟ್ಮೆಂಟ್ ಮಾಡಿ 720 ಕೋಟಿ ರೂಪಾಯಿ ಬಡತನ ನಿರ್ಮೂಲನಾ ಕಾರ್ಯಕ್ರಮ. ಯಾರಿಗೆ ನೀವು ಮೋಸ ಮಾಡುತ್ತಿದ್ದೀರಿ? ಜನ ತಿಳಿದುಕೊಂಡಿದ್ದಾರೆ. ಹಾಗಾಗಿ ಇಂತಹ ಪೊಳ್ಳು ಮಾತು, ಪೊಳ್ಳು ಘೋಷಣೆ ಹೇಳುವುದಕ್ಕಿಂತ ಎಷ್ಟು ಸಾಧ್ಯವೋ ಅಷ್ಟು ಹೇಳಿ, ದಯಮಾಡಿ ಹೇಳಿ ಜನ ಮೆಚ್ಚುತ್ತಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಔದಾರ್ಯರಹಿತ ಟೀಕೆ.

ಶ್ರೀ ಸಿ. ಬೈರೇಗೌಡ : ಏನು ಹೇಳಬೇಕೋ ಎಂದು ಅವರಿಗೇ ತೋಚುತ್ತಿಲ್ಲ. ಒಳಗಡೆನೇ ಗೊಣಗುಟ್ಟುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ಏಕೋ ಹೆದರಿಬಿಟ್ಟಿದ್ದಾರೆಂದು ಕಾಣುತ್ತಿದೆ. ದುಃಸ್ವಪ್ನ ಬಿದ್ದ ಹಾಗೆ ಕಾಣುತ್ತದೆ. ನಾನು ಎರಡು ಮೂರು ದಿವಸದಿಂದ ನೋಡುತ್ತಿದ್ದೇನೆ. ಬೆಚ್ಚಿ ಬಿದ್ದು ಹೋಗಿದ್ದಾರೆ.ಈ ಸದನದಲ್ಲಿ ಲವಲವಿಕೆ ಇಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ವಿರೋಧ ಪಕ್ಷದವರಿಂದ ನಾನು ಏನು ನಿರೀಕ್ಷಣೆ ಮಾಡುತ್ತಿದ್ದೇನೆ ಎಂದರೆ ದೋಷಗಳು ಏನಿವೆ ಅದನ್ನೆಲ್ಲಾ ಹೇಳಬೇಕಾದ್ದೇ ಹೇಳಿ. ನಮಗೆ ಎಚ್ಚರಿಸಬೇಕಾದ್ದೇ ನಾನು ಒಪ್ಪುತ್ತೇನೆ. ಆದರ ಜೊತೆಗೆ ರಚನಾತ್ಮಕವಾಗಿ ಏನು ಮಾಡಿದರೆ ಸರಿ ಹೋಗುತ್ತದೆ ಎಂದು ಹೇಳಿದರೆ ಬಹಳ ಸಂತೋಷ.

ಶ್ರೀ ಆರ್.ವಿ. ದೇಶಪಾಂಡೆ : ಪೊಳ್ಳು ಘೋಷಣೆ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ : ಇವರು ಸುಳ್ಳು ಹೇಳುವುದನ್ನು ನಿಲ್ಲಿಸಿದರೆ ಸಾಕು, ರಚನಾತ್ಮಕವಾದ ಕೆಲಸ ಎಂದರೆ ಸುಳ್ಳು ಹೇಳುವುದನ್ನು ನಿಲ್ಲಿಸಿದರೆ, ಅದೇ ಒಂದು ರಚನಾತ್ಮಕವಾದ ಸಲಹೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಬೈರೇಗೌಡರು ಟೀಕೆ ಮಾಡಬಾರದು. ನಾನು ಹೇಳುವುದು ಏನೆಂದರೆ ಕೋರ್ಟ್ ಲಾಂಗ್ವೇಜ್ನಲ್ಲಿ ಸುಳ್ಳು ಹೇಳುತ್ತಾರೆಂದರೆ ಹೇಳಬೇಡಿ, ಗೌರವವಾಗಿ ಹೇಳಬೇಕಾಗಿದ್ದರೆ ನಿಜವಾಗಿ ಹೇಳುತ್ತಿಲ್ಲ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ತೀರ್ಮಾನ ಆಗಿದೆ. ಹಿಂದೆ ಇದ್ದ ಅಧ್ಯಕ್ಷರು ಸುಳ್ಳು ಎನ್ನುವ ಪದವನ್ನು ಧಾರಾಳವಾಗಿ ಉಪಯೋಗಿಸಬಹುದೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗಾರಾಜ್ : ಏಕೆಂದರೆ, ಇಲ್ಲಿ ಬಹಳಷ್ಟು ಸಾರಿ ನೀವು ಸುಳ್ಳು ಹೇಳುತ್ತೀರೆಂದು ನಾವು ಹೇಳಬೇಕಾಗುತ್ತದೆ. ಆದುದರಿಂದ, ಅದು 'ಸತ್ಯಕ್ಕೆ ದೂರವಾದುದು' ಎಂದು ಹೇಳಿದರೆ ಅದು ಎಷ್ಟು ದೂರ ಅಂತ ಅದನ್ನು ಅಳತೆ ಮಾಡುವವರು ಯಾರು? ಅದನ್ನೇ ನೇರವಾಗಿ ಹೇಳೋಣ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಆ ಶಬ್ದ ಬಹಳ ಕಠಿಣ.

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀಮಾನ್ ಎಸ್. ಎಂ. ಕೃಷ್ಣರವರು ಸಭಾಧ್ಯಕ್ಷರಾಗಿದ್ದಂತ ಕಾಲದಲ್ಲಿ ಈ ಸದನಕ್ಕೆ ಕೊಟ್ಟ ಒಂದು ಕೊಡುಗೆ ಏನೆಂದರೆ 'ಸುಳ್ಳು' ಎಂಬುದು ಅಸಾಂಸದೀಕ (ಅನ್ಪಾರ್ಲಿಮೆಂಟರಿ) ವಲ್ಲವೆಂದು. ಅದನ್ನು ಅವರು ಹೇಳುತ್ತಿದ್ದಾರೆ. ಆದುದರಿಂದ, ನೀವು ಗಾಬರಿಯಾಗಬೇಕಾಗಿಲ್ಲ. 'ಸುಳ್ಳು' ಎನ್ನುವುದನ್ನು 'ಸುಳ್ಳು' ಎಂದೇ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಾತನಾಡುವಾಗ ಪ್ರತಿಬಾರಿಯೂ 'ನಾನು ನಿಜ ಹೇಳಬೇಕೆಂದರೆ, ನಾನು ನಿಜ ಹೇಳಬೇಕೆಂದರೆ' ಎಂದು ಹೇಳುತ್ತಿದ್ದರು. ಅದಕ್ಕೆ ನಾವು ಹೇಳಿದೆವು. 'ಸ್ವಾಮಿ, ಒಂದು ಸಲವಾದರೂ ಸುಳ್ಳು ಹೇಳಿ, ಬರೀ ನಿಜ ಹೇಳಿ ನಮಗ್ಯಾಕೆ ತೊಂದರೆ ಕೊಡುತ್ತೀರಿ, ಒಂದು ದಿನವಾದರೂ ಸುಳ್ಳು ಹೇಳಿ' ಎಂದು ಹೇಳುತ್ತಿದ್ದೆವು.

ಶ್ರೀ ಸಿ. ಬೈರೇಗೌಡ ; ಈಗ ನಾನು ಮತ್ತು ನನ್ನ ಸ್ನೇಹಿತರಾದಂಥ ವೈ.ಕೆ. ರಾಮಯ್ಯನವರು ಸೇರಿಕೊಂಡು ಒಂದು ಪುಸ್ತಕವನ್ನು ಸಂಪಾದಿಸಬೇಕೆಂದಿದ್ದೇವೆ. ಆ ಪುಸ್ತಕದ ಹೆಸರೇನೆಂದರೆ, 'ನಿಮ್ಮ ಸರ್ಕಾರದ ಮುಖಂಡರು ಮತ್ತು ಸುಳ್ಳು' 'ಮೊಯಿಲಿ ಮತ್ತು ಅವರ ಸುಳ್ಳುಗಳು' ಎನ್ನತಕ್ಕಂಥದ್ದು ಪುಸ್ತಕದ ಶೀರ್ಷಿಕೆ ಕೊಟ್ಟು ಪುಸ್ತಕವನ್ನು ಮುದ್ರಿಸಬೇಕೆಂತಲೂ ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಷ್ಟು ಲಘುವಾಗಿ ಮುಖ್ಯಮಂತ್ರಿಗಳ ಬಗ್ಗೆ ಹೇಳತಕ್ಕಂಥಾದ್ದು ಸರಿಯಲ್ಲ, ಮುಖ್ಯಮಂತ್ರಿಗಳು ಯಾರೇ ಆಗಿರಬಹುದು, ಆ ಸ್ಥಾನಕ್ಕೆ ನಾವು ಗೌರವ ಕೊಡಬೇಕಾಗುತ್ತದೆ, ಅವರು ಈ ಸದನದ ಮುಖಂಡರೂ ಸಹ ಆಗಿದ್ದಾರೆ. 'ಮೊಯಿಲಿ ಮತ್ತು ಅವರ ಸುಳ್ಳುಗಳು' ಎಂಬ ಪುಸ್ತಕವನ್ನು ಬರೆಯುತ್ತೇವೆ ಎನ್ನುವುದು ಇವೆಲ್ಲಾ ಏನು? ನೀವು ಅಂಕಿ-ಅಂಶಗಳನ್ನು ಕೊಟ್ಟು ಸರ್ಕಾರವನ್ನು ಟೀಕೆ ಮಾಡಿ. ಈ ರೀತಿ ಮಾಡಿದರೆ ಯಾರೂ ಕೇಳುವುದಿಲ್ಲ. ಆದರೆ, ಪದೇ ಪದೇ ಎದ್ದು ನಿಂತು ಅವರ ಬಗ್ಗೆ ಪುಸ್ತಕ ಬರೆಯುತ್ತೇವೆ, ಅಂತ ಹೇಳಿದರೆ ಇವೆಲ್ಲಾ ಏನು? ಅವರ ಪುಸ್ತಕ ಮತ್ತು ನಿಮ್ಮ ಚರಿತ್ರೆ ಬಗ್ಗೆ ಜನರಿಗೆ ಗೊತ್ತಿದೆ. ಏಕೆ ಸುಮ್ಮನೆ ಪದೇ ಪದೇ ಹೇಳುತ್ತೀರಿ?

ಶ್ರೀ ಸಿ. ಬೈರೇಗೌಡ : ಖರ್ಗೆಯವರೆ, ನೀವು ಏಕೆ ಇಷ್ಟೊಂದು ಸಿಟ್ಟಾದಿರೆಂದು ನನಗೆ ಗೊತ್ತಾಗಿಲ್ಲ. ಡಾಕ್ಟರೇಟ್ ಕೊಡಬೇಕೆಂದೇನಾದರೂ ನಾನು ಹೇಳಿದೆನೆ? ನಾನು ಹಾಗೆ ಹೇಳಿಲಿಲ್ಲ. ಡಾಕ್ಟರೇಟ್ ಕೊಡಬೇಕೆಂಬ ಪದವನ್ನೇ ನಾನು ಬಳಸಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಬಕಾರಿ ಇಲಾಖೆ ಮೇಲೆ ತಾವು ಮಾತನಾಡಿ ಅನೇಕ ಸಲ ಕೊಟ್ಟಂಥ ಸಲಹೆಗಳನ್ನು ಸರ್ಕಾರ ಒಪ್ಪಿಕೊಂಡಿರುವುದು ಸುಳ್ಳೆ? ಅದಕ್ಕೆ ನೀವು ಚಪ್ಪಾಳೆ ತಟ್ಟಿದಿರಿ, ನೀವೇ ಮಾಡಿದ್ದು 'ಬೇಷ್' ಎಂದೆಲ್ಲಾ ಹೇಳಿದ್ದೀರಿ. ಈಗ ಸುಳ್ಳೆಂದು ಹೇಳುತ್ತಿದ್ದೀರಿ, ಇವೆಲ್ಲಾ ಏನು?

ಶ್ರೀ ಸಿ. ಬೈರೇಗೌಡ : ಅದನ್ನೇ ಸ್ವಲ್ಪ ತಾವು ದಯವಿಟ್ಟು ತಿಳಿದುಕೊಳ್ಳಿ. ನೀವು ಯಾವುದು ಒಳ್ಳೆಯದನ್ನು ಮಾಡಿದ್ದೀರಿ, ಮಾಡುವುದಕ್ಕೆ ಒಪ್ಪಿಕೊಂಡಿದ್ದೀರಿ ಅದನ್ನು ನಾನು ಸ್ವಾಗತಿಸಿದ್ದೇನೆ. ನೀವು ಅಷ್ಟು ಔದಾರ್ಯ ತೋರಿಸಿರುವುದಕ್ಕೆ ತಮಗೆ ಧನ್ಯವಾದಗಳು.

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅತಿವೃಷ್ಟಿ ಮತ್ತು ಭೂಕಂಪದ ಬಗ್ಗೆ.....

ಶ್ರೀ ಸಿ. ಬೈರೇಗೌಡ : ನಾನು ಅಬಕಾರಿ ಇಲಾಖೆ ಬಗ್ಗೆ ಮಾತನಾಡುತ್ತಾ ಏನು ಅಂಕಿ-ಅಂಶಗಳನ್ನು ಕೊಟ್ಟೆ, ಆ ಲೆಕ್ಕದ ಪ್ರಕಾರ ಉತ್ತರಿಸುವಾಗ ಅವರು ಹೇಳಲಿಲ್ಲ ಅವರಿಗೆ ಯಾವುದು ಅನುಕೂಲವಾಗಿತ್ತೋ ಅದನ್ನು ಹೇಳಿದರು. ಏನೆಂದರೆ, ಉಳಿದಿರತಕ್ಕಂಥಾದ್ದು ಒಟ್ಟು 375 ಕೋಟಿ ರೂಪಾಯಿಗಳು ಜಾಸ್ತಿ ಬಂತೆಂದು ಅಷ್ಟೇ ಹೇಳಿದ್ದುದು. ನಾನು ಕೊಟ್ಟಿರತಕ್ಕಂಥ ಅಂಕಿ-ಅಂಶಗಳಲ್ಲಿ ಒಂದೂ ಕೂಡ ಸರಿಯಾಗಿಲ್ಲವೆಂದು ನೀವಾಗಲಿ ನಿಮ್ಮ ಮುಖ್ಯಮಂತ್ರಿಗಳಾಗಲಿ ಸಾಬೀತುಪಡಿಸಿ ತೋರಿಸಿದರೆ ನಾನು ನಿಮಗೆ ಶರಣಾಗಿ ಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಬೈರೇಗೌಡರಾಗಲಿ, ಕಾಗೋಡು ತಿಮ್ಮಪ್ಪನವರಾಗಲಿ ಒಬ್ಬರಿಗೊಬ್ಬರು ಹೊಸದಾಗಿ ಶರಣಾಗಬೇಕಾಗಿಲ್ಲ, ಆಗಲೇ ಒಬ್ಬರಿಗೊಬ್ಬರು ಶರಣಾಗಿಬಿಟ್ಟಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಅತಿವೃಷ್ಠಿ, ಭೂಕಂಪದ ಬಗ್ಗೆ ಪ್ರಸ್ತಾಪಿಸಿ, ಇದರಿಂದ ಹಾನಿಗೊಳಗಾದವರಿಗೆ ಸರ್ಕಾರದಿಂದ ಸಾಕಷ್ಟು ಸಹಾಯ ಒದಗಸಲಾಗಿದೆಯೆಂದು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಕಳೆದೆರಡು ವರ್ಷಗಳಿಂದ ಗುಲ್ಬರ್ಗ, ಬೀದರ್, ರಾಯಚೂರು, ಧಾರವಾಡ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅತಿವೃಷ್ಠಿ, ಬರಗಾಲ ಉಂಟಾಗಿ ಇದರಿಂದ ನಾಡಿನ ರೈತರು, ಕೂಲಿಕಾರರು ಸಂಪೂರ್ಣವಾಗಿ ಕಂಗಾಲಾಗಿದ್ದಾರೆ. ಆದರೆ, ಸರ್ಕಾರವು ಅವರ ಬಗ್ಗೆ ಯಾವುದೇ ರೀತಿಯ ಚಿಂತನೆ ಮಾಡುತ್ತಿಲ್ಲ. ಅವರುಗಳು ಇಷ್ಟೊಂದು ಕಷ್ಟದಲ್ಲಿದ್ದರೂ ಸಹ ಸರ್ಕಾರ ಅವರಿಗೆ ಯಾವುದೇ ಒಂದು ರೀತಿಯ ಪರಿಹಾರವನ್ನು ಇವೊತ್ತಿನ ತನಕ ನೀಡಿಲ್ಲ. ಅವರಿಗೆ ಪರಿಹಾರ ಕೊಡುವ ಕುರಿತು ಸರ್ಕಾರದ ಮಟ್ಟದಲ್ಲಿ ಮಾತುಕತೆಗಳು ನಡೆದು ಆಜ್ಞೆಗಳಾಗಿದ್ದರೂ ಸರ್ಕಾರದ ಹಣಕಾಸಿನ ಮುಗ್ಗಟ್ಟಿನಿಂದ ಯಾವುದೇ ಪರಿಹಾರ ಸಿಕ್ಕಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಅವರು ಸರ್ಕಾರವನ್ನು ನಡೆಸಿದವರು ಗೊತ್ತಿದೆ. ನ್ಯಾಚುರಲ್ ಕೆಲಾಮಿಟಿ ಆದಂಥ ಸಂದರ್ಭದಲ್ಲಿ ಫಸಲಿಗೆ ಎಷ್ಟು ಪರಿಹಾರ ಕೊಡಬೇಕು? ಬೇರೆ ಬೇರೆಯದಕ್ಕೆ ಎಷ್ಟು ಎಷ್ಟು ಪರಿಹಾರವನ್ನು ಕೊಡಬೇಕು ಎನ್ನುವಬಗ್ಗೆ ಮೊದಲಿನಿಂದಲೂ ನಿಯಮಗಳಿವೆ. ಕೆಲವರ ಕಾಲದಲ್ಲಿ ಕಡಿಮೆ ಇತ್ತು ನಂತರ ಅದನ್ನು ಜಾಸ್ತಿ ಮಾಡಿದರು. ಆ ರೀತಿ ಬಂದಿದೆ. ಸರ್ಕಾರದ ಈ ನಿಯಮದಿಂದ ನಿಮ್ಮ ಕಾಲದಲ್ಲಿ ಕೊಡುತ್ತಿದ್ದ ಪರಿಹಾರಕ್ಕಿಂತ ಜಾಸ್ತಿ ಹಣವನ್ನು ಪರಿಹಾರವಾಗಿ ಕೊಡುವಂತೆ ಮಾಡಿದ್ದಾರೆ. ನಿಮ್ಮ ಕಾಲದಲ್ಲಿ ಒಂದು ಎಕರೆಗೆ ಫಸಲು ಹೋದರೆ ಕೇವಲ ನೂರು ರೂಪಾಯಿ ಪರಿಹಾರ ಸಿಗುತ್ತಿತ್ತು. ಇವತ್ತು ಅದು

ಇನ್ನೂರು ರೂಪಾಯಿ ಆಗಿದೆ. ಆದ್ದರಿಂದ ಆ ನಿಯಮವನ್ನು ಮೀರಿ, ಹೊಸದಾಗಿ ಹೇಗೆ ಪರಿಹಾರವನ್ನು ಕೊಡಲು ಸಾಧ್ಯ ನೀವೇ ಹೇಳಿ?

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಕಾಲದಲ್ಲಿ ಭೀಕರವಾದ ಬರಗಾಲವಿತ್ತು. ಸತತವಾಗಿ 5ವರ್ಷವಿತ್ತು. ಆಗ ನಮ್ಮ ಹಣಕಾಸಿನ ಪರಿಸ್ಥಿತಿಯೂ ಸಹ ಸರಿಯಾಗಿರಲಿಲ್ಲ. ಆದರೂ ಸಹ ರೈತರಿಗೆ ಒಂದು ವರ್ಷ ದಂಡದ ಬಡ್ಡಿಯಲ್ಲಿ ರಿಯಾಯಿತಿಯನ್ನು ಕೊಟ್ಟೆವು. ಬಡ್ಡಿಯಲ್ಲಿ ರಿಯಾಯಿತಿಯನ್ನು ಕೊಟ್ಟೆವು, ಎರಡು ರೂ. ಕಿ.ಲೋ.ನಂತೆ ಬಡವರಿಗೆ ಅಕ್ಕಿಯನ್ನು ಕೊಟ್ಟೆವು. ಯಾವ ಕಾರ್ಯಕ್ರಮವನ್ನು ನಾವು ನಿಲ್ಲಿಸಲಿಲ್ಲ. ಆದರೆ ತಾವು ಇವತ್ತು ಏನು ಮಾಡಿದ್ದೀರಿ? ತಾವು ಭೂಕಂಪದಿಂದ ಕೇವಲ 216 ಮನೆಗಳು ಮಾತ್ರ ಬಿದ್ದಿದೆ ಎಂದು ಹೇಳುತ್ತಿದ್ದೀರಿ. ನಾನು ಸ್ವತಃ ಅಲ್ಲಿನ ಎಲ್ಲಾ ಮನೆಗೆ ಭೇಟಿಕೊಟ್ಟಿದ್ದೇನೆ, ಕೇವಲ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಭೀಮಾನದಿಯ ಪಕ್ಕದ ಹಳ್ಳಿಯಲ್ಲೇ ಸಾವಿರಾರು ಮನೆಗಳು ಬಿದ್ದಿದೆ. ಆದರೆ ತಾವು ಹೇಳುತ್ತೀರಿ ಕೇವಲ 216 ಮನೆಗಳು ಮಾತ್ರಬಿದ್ದಿದೆ ಎಂದು. ಇದನ್ನು ಯಾವ ಪ್ರಕಾರದಲ್ಲಿ ನಂಬಲು ಸಾಧ್ಯ? ಇದು ಪತ್ರಿಕೆಗಳಲ್ಲಿ ಬರುವ ವಿಚಾರ. ಆ ಭಾಗದ ಜನರು ಅದನ್ನು ಓದಿದರೆ ತಾವು ಹೇಳಿರುವುದು ಸೇರಿಯೆಂದು ನಂಬಬೇಕಲ್ಲ? ತಾವು ಮನೆಗಳು ಬಿದ್ದರೆ ಹೆಚ್ಚಿನ ಹಣವನ್ನು, ಹತ್ತು ಸಾವಿರ ರೂಪಾಯಿಯವರೆಗೆ ಹಣವನ್ನು ಪರಿಹಾರವಾಗಿ ಕೊಡಬೇಕೆಂದು ಆಜ್ಞೆ ಮಾಡಿದ್ದೀರಿ, ಅದು ನಿಜ, ಆದರೆ ಆ ಆಜ್ಞೆಗಳು ಜಾರಿಯಲ್ಲಿ ಬರಬೇಕಾಗಿದೆ. ಆದರೆ ತಮ್ಮ ಹತ್ತಿರ ಹಣವಿಲ್ಲ. ಹಣವಿಲ್ಲದೆ ಇವತ್ತು ಯಾವ ಪರಿಹಾರದ ಕೆಲಸವೂ ನಡೆಯುತ್ತಿಲ್ಲ. 1992 ನೇ ಇಸವಿಯಲ್ಲಿ ವೀರಪ್ಪಮೊಯಿಲಿಯವರು ಏನು ಮುಖ್ಯಮಂತ್ರಿಯಾದರೋ ಆವಾಗ ಅತಿವೃಷ್ಟಿಯಾಯಿತು. ಅದನ್ನು ನಾನು ನೆನಪು ಮಾಡಿಕೊಡುತ್ತಿದ್ದೇನೆ. ಅವರು ಹೆಲಿಕಾಪ್ಟರ್‍ನಲ್ಲಿ ಹೋದರು. ಆವಾಗ ಏನು ರಾಯಚೂರು, ಗುಲ್ಬರ್ಗ, ಧಾರವಾಡ ಜಿಲ್ಲೆಯಲ್ಲೇನು ನೆರೆಹಾವಳಿಯಾಯಿತು, ಅತಿವೃಷ್ಟಿಯಾಯಿತು ಆಗ ಏನು ಪರಿಹಾರವನ್ನು ರೈತರಿಗೆ ಕೊಡಬೇಕಾಗಿತ್ತು ಆ ಕೆಲಸ ಇನ್ನೂ ಆಗಿಲ್ಲ. ಆ ಸಮಯದಲ್ಲಿ ಸರ್ಕಾರದ ಆಸ್ತಿಪಾಸ್ತಿಗಳಾದ, ಸೇತುವೆಗಳಿರಬಹುದು, ರಸ್ತೆಗಳಿರಬಹುದು ಏನು ನಷ್ಟವಾಯಿತು, ಅದರ ಮರುದುರಸ್ತಿಯ ಕೆಲಸವಾಗಿಲ್ಲ, ರೈತರಿಗೇನು ಬೆಳೆ ಪರಿಹಾರವನ್ನು ಕೊಡಬೇಕಾಗಿತ್ತೋ ಆ ಕೆಲಸ ಇನ್ನು ಆಗಿಲ್ಲ. ಅನಂತರ ಪುನಃ 1993ರಲ್ಲಿ ಏನು ಅತಿವೃಷ್ಟಿಯಾಯಿತು ಆಗಲೂ ಸಹ ರೈತರಿಗೇನು ಪರಿಹಾರವಾಗಿ ಸಹಾಯಮಾಡಿಲ್ಲ. ಆದರೆ ನೀವು ರಾಜ್ಯಪಾಲರ ಭಾಷಣದ ಮೂಲಕ ನಾವು ಆ ರೀತಿ ಮಾಡಿದ್ದೇವೆ, ಈ ರೀತಿ ಮಾಡಿದ್ದೇವೆಂದು ಹೇಳಿದರೆ ನಿಮ್ಮನ್ನು ಯಾರು ನಂಬಬೇಕು? ಇವತ್ತು ಬಹಳ ಜನರು ಕಷ್ಟದಲ್ಲಿದ್ದಾರೆ, ರೈತರು ಎಷ್ಟು ಕಷ್ಟದಲ್ಲಿದ್ದಾರೆಂದರೆ ಅವರ ಜೀವನದಲ್ಲಿ ಯಾವಾಗಲೂ ಸಹ ಇಷ್ಟೊಂದು ಕಷ್ಟದಲ್ಲಿರಲಿಲ್ಲ. ಕಳೆದ ಎರಡೂ ಮೂರು ವರ್ಷದಲ್ಲಿ ನಾಲ್ಕುಕಾಳು ಆಹಾರ ಪದಾರ್ಥಗಳನ್ನು ರೈತನು ಮನೆಗೆ ತೆಗೆದುಕೊಂಡು ಹೋಗಲು ಆಗಿಲ್ಲ. ಅತಿವೃಷ್ಟಿಯಿಂದ ಸೂರ್ಯಕಾಂತಿ, ಜೋಳ, ಭತ್ತ ಮತ್ತು ಹತ್ತಿಯ ಬೆಳೆಯು ನಾಶವಾಗಿ ಹೋಗಿರುವುದನ್ನು ನಾವು ಕಣ್ಣಲ್ಲಿ ನೋಡಿದ್ದೇವೆ. ನೂರಾರು ಕೋಟಿ ರೂಪಾಯಿಗಳ ಬೆಳೆಗಳೇನು ನಾಶವಾಗಿಹೋಗಿದೆ ಅದನ್ನು ನೋಡಲು ಸಾಧ್ಯವಾಗುವುದಿಲ್ಲ, ಕಣ್ಣಿನಲ್ಲಿ ನೀರು ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ರಾಯಚೂರು ಜಿಲ್ಲೆ, ಗುಲ್ಬರ್ಗಜಿಲ್ಲೆ, ಬಳ್ಳಾರಿ ಜಿಲ್ಲೆಯಲ್ಲಿದ್ದರೆ ತಮ್ಮ ಕಡೆಯಿಂದ ಆದ ಸಹಾಯವೇನು? ಏನೇನೂ ಇಲ್ಲ. ಅಲ್ಲಿ ಇಲ್ಲಿ ನೂರು ರೂಪಾಯಿ, ಎರಡುನೂರು ರೂಪಾಯಿಗಳ ಚೆಕ್‍ನ್ನು ಕೊಟ್ಟು ತಾವು ಪಲಾಯನ ಮಾಡಲು ಪ್ರಯತ್ನ ಮಾಡಿದ್ದೀರಿ. ಸೇತುವೆಗಳು ಬಿದ್ದಿದೆ. ಬ್ರಿಡ್ಜ್‍ಗಳು ಬಿದ್ದಿದೆ, ರಸ್ತೆಯ ಕೆಲಸವಾಗಬೇಕು. ಆದರೆ ಅದರ ಬಗ್ಗೆ

ತಾವೇನು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅದಲ್ಲದೆ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒಂದು ಮನವಿಯನ್ನು ಮಾಡಬೇಕು, ಅದನ್ನೇಕೆ ತಕ್ಷಣ ಮಾಡಲಿಲ್ಲ? ಅದಕ್ಕೇಕೆ ವಿಳಂಬ ಮಾಡಿದಿರಿ? ಕಳೆದ ಮೂರು ವರ್ಷದಲ್ಲಿ ನಮಗೇನು ಕೇಂದ್ರ ಸರ್ಕಾರದಿಂದ ಸಹಾಯ ಸಿಕ್ಕಿದೆ? ನಮ್ಮ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಕೆಟ್ಟದಾದ ಅತಿವೃಷ್ಟಿಯಾಗಿಲ್ಲ. ನಿಮ್ಮ ಕಾಲದಲ್ಲಿ ಏನು ಅತಿವೃಷ್ಟಿಯಾಯಿತು. ಅಷ್ಟೊಂದು ಕಷ್ಟ ಯಾವಾಗಲೂ ಆಗಿರಲಿಲ್ಲ. ಆ ರೀತಿ ಆಗಲೂ ಬಾರದು. ಆದರೆ ಕೇಂದ್ರ ಸರ್ಕಾರದ ಮಲತಾಯಿಧೋರಣೆಯಿಂದ ನಿಮಗೆ ಒಂದು ಪೈಸೆಯು ಸಹ ಪರಿಹಾರವಾಗಿ ಸಿಕ್ಕಿಲ್ಲ. ಇಲ್ಲಿ ಅತಿವೃಷ್ಟಿಯಾದರೆ ಕೇಂದ್ರ ಸರ್ಕಾರದಿಂದ ಯಾರೂ ಬರುವುದಿಲ್ಲ. ಇಲ್ಲಿ ಭೂಕಂಪರಾದರೆ, ಬರಗಾಲವಾದರೆ ನೋಡಲು ಯಾರೂ ಬರುವುದಿಲ್ಲ. ಆದರೆ ಆಂಧ್ರಪ್ರದೇಶವಾದರೆ, ತಮಿಳುನಾಡಿನಲ್ಲಾದರೆ ಹುಡುಕಿಕೊಂಡು ಹೋಗುತ್ತಾರೆ. ಈ ಪ್ರಕಾರ ಕೇಂದ್ರ ಸರ್ಕಾರವೇನು ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆಯನ್ನು ಇಟ್ಟುಕೊಂಡಿದೆ ಇದರ ಬಗ್ಗೆ ತಾವು ಕೊನೆಯಪಕ್ಷ ಪ್ರೊಟೆಸ್ಟನ್ನು ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದೇಶಪಾಂಡೆಯವರೇ ತಮಗೂ ಗೊತ್ತಿದೆ. ಪ್ರಕೃತಿ ವಿಕೋಪಕ್ಕೆ ಫಂಡ್ಸ್ ಏನು ಕೊಡುತ್ತಾರೆ. ಅದನ್ನು ನೋಡಿಕೊಂಡು ಅಡ್ವಾನ್ಸ್ ವೇಜ್ ಅಂಡ್ ಮೀನ್ಸ್ ನಿಂದಲೇ ಕೊಡುತ್ತಾರೆ. ಅದು ಸಾಲದ ರೂಪದಲ್ಲಿ. ನೇರವಾಗಿ ಅಸಿಸ್ಟೆನ್ಸ್ ಆಗಲೀ, ಗ್ರಾಂಟ್ ಆಗಲೀ ಯಾವ ರಾಜ್ಯಕ್ಕೂ ಕೂಡ ಕೊಡುವುದಿಲ್ಲ. ಪ್ರಧಾನಮಂತ್ರಿಯವರ ಪರಿಹಾರನಿಧಿಯಿಂದ 5 ಕೋಟಿ, 2 ಕೋಟಿ, 1 ಕೋಟಿ ಕೊಡಬಹುದೇ ಹೊರತಾಗಿ ನೇರವಾಗಿ 50 ಕೋಟಿ 100 ಕೋಟಿ ಎಲ್ಲೂ ಕೂಡ ಯಾವ ಸರ್ಕಾರಕ್ಕೂ ಯಾವ ರಾಜ್ಯಕ್ಕೂ ಕೊಡುವುದಿಲ್ಲ. ತಮ್ಮ ಕಾಲದಲ್ಲೂ ಕೂಡ ಸಿಕ್ಕಿಲ್ಲ. ಆದರೆ 'ಈಗ 8ನೇ ಫೈನಾನ್ಸ್ ಬಂದಮೇಲೆ ಪ್ರತಿಯೊಂದು ಸ್ಟೇಟ್ಗಳಿ ಇಷ್ಟು ಎಂದು ನಿಗದಿ ಮಾಡಿದ್ದಾರೆ. ಕರ್ನಾಟಕಕ್ಕೆ 27ಕೋಟಿ ರೂ. ಆಂಧ್ರಕ್ಕೆ ಸ್ವಲ್ಪ ಜಾಸ್ತಿ, ಯು.ಪಿ.ಗೆ ನೂರು ಕೋಟಿ ಹೀಗೆ ಮಾಡಿದ್ದಾರೆ. ಅಷ್ಟು ಬಿಟ್ಟು ನೀವು ಎಷ್ಟೇ ಕೇಳಿದರೂ ಕೂಡ ಅಡ್ವಾನ್ಸ್ ಅಸಿಸ್ಟೆನ್ಸ್ ಕೊಡಬಹುದೇ ಹೊರತು ನೇರವಾಗಿ ನಿಮಗೆ ಗ್ರಾಂಟ್ ಎಲ್ಲಿ ಕೊಟ್ಟಿದ್ದಾರೆ ಹೇಳಿ? ಹಿಂದಿನಿಂದ ತಾವು ಕೂಡ ಈ ಸದನದಲ್ಲಿ ಇದ್ದೀರಿ. ಎಲ್ಲಿ ಕೊಟ್ಟಿದ್ದಾರೆ ಹಾಗೆ ಕೊಡುವುದಿಲ್ಲ. ಈಗ ಹುಡ್ಕೋದಿಂದ ಏನಾದರೂ ಲೋನ್ ವಿಶ್ವಬ್ಯಾಂಕ್ನಿಂದ ಏನಾದರೂ ಕೇಳಬಹುದು. ಆದರೆ ಲೋನ್ ಮಾತ್ರ ಗ್ರಾಂಟ್ ರೂಪದಲ್ಲಿ ಕೊಟ್ಟಿಲ್ಲ. ಅದಕ್ಕೆ ಕೇಂದ್ರಸರ್ಕಾರ ಮಲತಾಯಿ ಧೋರಣೆ ಮಾಡಿದೆ ಎನ್ನುವುದು ಸರಿಯಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಷ್ಟೊಂದು ಪ್ರಮಾಣದಲ್ಲಿ ಭೂಕಂಪ ನೆರೆಹಾವಳಿ ಅತಿವೃಷ್ಟಿಯಾದಾಗ ಕೇಂದ್ರ ಸರ್ಕಾರ ಯಾವ ರೀತಿಯಲ್ಲಿ ಸಹಾಯಕ್ಕೆ ಬರಬೇಕಾಗಿತ್ತು. ಮಹಾರಾಷ್ಟ್ರದಲ್ಲಿ ಭೂಕಂಪವಾಯಿತು ಅವರಿಗೆ ಪರಿಹಾರ ನಿಧಿಯನ್ನು ಕೊಟ್ಟಿದ್ದಾರೆ. 1991-92 ಈ ಎರಡು ವರ್ಷಗಳು beyond one's imagination ಯಾವಾಗಲೂ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ 20 ಸಾವಿರ ಮನೆಗಳು ಹಾಳಾಗಿದೆ ಅದರಲ್ಲಿ For fully collapsed houses they have approved and they are giving loan for fully collapsed houses.

ಶ್ರೀ ಆರ್. ವಿ. ದೇಶಪಾಂಡೆ : ಎಲ್ಲಿ ಕೊಟ್ಟಿದ್ದಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಣ ಬರುತ್ತಾ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ಬರುತ್ತಿರುವುದನ್ನು ನಾನು ನೋಡಿದ್ದೇನೆ. ಸಾಕಷ್ಟು ಬಂದಿದೆ. ಹಾಗಾಗಿ ಇವತ್ತು ಕೇವಲ ಈ ರಾಜ್ಯಪಾಲರ ಭಾಷಣದಲ್ಲಿ ರೈತರಿಗೆ, ಬಡವರಿಗೆ ಈ ಸಂಕಟ ನಿವಾರಣೆಗಾಗಿ ತಾವು ಏನು ಆರ್ಥಿಕ ನೆರವು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ ಇದು ಸತ್ಯಕ್ಕೆ ದೂರವಾದ ಸಂಗತಿ. ಹಲವಾರು ಬಾರಿ ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ ಪತ್ರ ಬರೆದೆ. ಅದಕ್ಕೆ ತಾವು ರೈತನಿಗೆ ಪರಿಹಾರನಿಧಿ ಕೊಡಬೇಕಾದರೆ ಲ್ಯಾಂಡ್ ಕಲ್ಟಿವೇಟ್ ಏನು ಮಾಡುತ್ತಾರೆ ಅದರಲ್ಲಿ ಮೂರನೆಯ ಎರಡು ಭಾಗ ಬೆಳೆ ಹಾಳಾಗಬೇಕು. ಒಬ್ಬ ರೈತ ನಾಲ್ಕು ಎಕರೆ ಭೂಮಿ ವವ್ಯಸಾಯ ಮಾಡಿದ್ದರೆ ಅದರಲ್ಲಿ ಮೂರು ಎಕರೆ ಭೂಮಿಯ ಬೆಳೆ ಹಾಳಾದರೆ ಅವರಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವೆಂದು ಹೇಳಿದ್ದೀರಿ. ಶೇ. 100 ರಷ್ಟು ಕೊಡುವುದಕ್ಕೆ ಆಗುವುದಿಲ್ಲ ಎಂದರೆ, ತಾವು 6-12-93ರಂದು ಹೊರಡಿಸಿರುವ ಸರ್ಕ್ಯುಲರ್ ವಿಥ್-ಡ್ರಾ ಮಾಡಬೇಕಾಗುತ್ತದೆ. ಈ ಸುತ್ತೋಲೆಯಿಂದ ಯಾವ ರೈತರಿಗೂ ನೆರವು ಸಿಕ್ಕಲಿಲ್ಲ. 11 ಸಾವಿರ ಆದಾಯ ಮಿತಿ ಹಾಕಿದ್ದೀರಿ. ಇವತ್ತು ಒಬ್ಬ ಕೂಲಿಯವ ದಿನಕ್ಕೆ 30-40 ರೂಪಾಯಿಗಳು ದುಡಿಯುತ್ತಾನೆ. ಒಂದು ಕಡೆ ಹೀಗೆ ಆರ್ಡರ್ ಮಾಡಿದ್ದೀರಿ. ಆ ಸುತ್ತೋಲೆಯಲ್ಲಿ 11 ಸಾವಿರದ ಒಳಗೆ ಆದಾಯವಿರಬೇಕು, ಮೂರನೆ ಎರಡು ಭಾಗ ಬೆಳೆ ಹಾಳಾಗಿರಬೇಕು. ಅಂತ ಹೀಗೆ ಕಂಡೀಷನ್ ಹಾಕಿದರೆ ಒಬ್ಬ ರೈತರಿಗೂ ಇದರಿಂದ ಅನುಕೂಲವಾಗಿಲ್ಲವೆಂದು ನಾನು ಹೇಳುತ್ತೇನೆ. ಆದುದರಿಂದ ಈ ರೀತಿಯ ಕಂಡೀಷನ್ ಅನ್ನು ರೈತರ ದೃಷ್ಟಿಯಿಂದ ಸರ್ಕಾರ ವಿತ್‌ಡ್ರಾ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಸಾಲ ಮನ್ನಾ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಾದರೆ ಕಳೆದ 2-3 ವರ್ಷಗಳಿಂದ ರೈತರು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಇಂತಹ. ಪರಿಸ್ಥಿತಿಯಲ್ಲಿ ತಾವು ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳುತ್ತೀರಿ. ನೀವು ಕೇವಲ ಬೆಳೆ ಸಾಲ ಮನ್ನಾ ಮಾಡಿದ್ದೀರಿ ಅಷ್ಟೇ, ಶಾಸನ ಸಭೆಯಲ್ಲಿ ಏನು ಘೋಷಿಸಿದ್ದೀರಿ. ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿದೆಯೆ ಎಂಬುದರ ಬಗ್ಗೆ ನೋಡುವುದಾಗಿ ಹೇಳಿದ್ದೀರಿ. ನಾನು ಹೇಳುತ್ತೇನೆ ನೀವು ಅಧಿಕಾರ ಬಿಟ್ಟು ಹೋಗುವ ಕಾಲ ಸಮೀಪಿಸುತ್ತಿದೆ.

ತಾವು ಹೋಗುವ ದಿನ ಸ್ವಲ್ಪ ಹತ್ತಿರ ಬಂದಿದೆ ಎಂದು ಅರ್ಥ. You are near now. ನವೆಂಬರ್ ತಿಂಗಳಿನಲ್ಲಿ ಚುನಾವಣೆ ಮಾಡಿದರೆ ಇನ್ನು ಎಷ್ಟು ತಿಂಗಳು ಉಳಿಯಿತು? 5-6 ತಿಂಗಳು ಉಳಿಯಿತು. ಹೋಗುವಾಗಲಾದರೂ ಒಂದು ಒಳ್ಳೆಯ ಕೆಲಸ ಮಾಡಿ ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಯಾರು ಯಾರಿಗೆ ಹೇಳುತ್ತಿದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ : ನಾನು ಅವರಿಗೆ ಹೇಳುತ್ತಿದ್ದೇನೆ. ನನಗೆ ಹೇಳಿಕೊಳ್ಳುವುದಕ್ಕೆ ಆಗುತ್ತದೆಯೇ? ಅಥವಾ ನಿಮಗೆ ಹೇಳುತ್ತಿದ್ದೇನೆಯೇ? ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಏಕೋ ಕನಸು ಕಾಣುತ್ತಿದ್ದೀರಿ ದೇಶಪಾಂಡೆಯವರೇ. ಪರವಾಗಿಲ್ಲ ಒಳ್ಳೆಯ ಕನಸು ಕಾಣುತ್ತಿದ್ದೀರಿ.

ಶ್ರೀ ಆರ್. ವಿ. ದೇಶಪಾಂಡೆ : ಆಯಿತು ಕನಸು ಕಾಣುತ್ತಿದ್ದೇನೆ. ನಾನು ಹೇಳುತ್ತೇನೆ, ಈ ರಾಜ್ಯದ ಸಂವಿಧಾನದ ಇತಿಹಾಸದಲ್ಲಿ ಇದು ನಿಮ್ಮ ಕೊನೆಯ ರಾಜ್ಯಪಾಲರ ಭಾಷಣ. ಇನ್ನು ಮುಂದೆ ನಿಮಗೆ ರಾಜ್ಯಪಾಲರ ಭಾಷಣ ಮಾಡಿಸುವ ಯೋಗ ಬರುವುದಿಲ್ಲ. ಹಾಗಾಗಿ ಎಚ್ಚರಿಕೆ ಕೊಡುತ್ತಿದ್ದೇನೆ, ಇನ್ನು ಸಮಯ ಇದೆ, ಸುಧಾರಿಸಿಕೊಳ್ಳಿ. ತಾವು ರೈತರ ಬಗ್ಗೆ ಬಡವರ ಬಗ್ಗೆ ಚಿಂತನೆ ಮಾಡಿ. ಬೆಳೆ ಸಾಲವನ್ನು ಮನ್ನಾ ಮಾಡಿ. ನಮ್ಮ ಸರ್ಕಾರ ಇದ್ದಾಗ ನಾವು ಎಷ್ಟು ಕಷ್ಟದಲ್ಲಿ ಇದ್ದಿವಿ. ಆದರೆ ನಾವು ರೈತರಿಗೆ ಸಾಕಷ್ಟು ರಿಯಾಯಿತಿ ಕೊಟ್ಟೆವು. ಅದು ಬಡ್ಡಿ

ಮನ್ನಾ ಮಾಡಿರಬಹುದು. ಬಡ್ಡಿಗೆ ಬಡ್ಡಿ ಮನ್ನಾ ಮಾಡಿರಬಹುದು. ನಾವು ಏಕೆ ಹಾಗೆ ಮಾಡಿದೆವು. ಎಂದರೆ ನಮ್ಮ ಕಮಿಟ್ಮೆಂಟ್ ಹಾಗೆ ಇತ್ತು. ಹಾಗಾಗಿ ಇವತ್ತು ಸರ್ಕಾರಕ್ಕೆ ಹೇಳುತ್ತಿದ್ದೇನೆ, ರೈತರ ಆಶೀರ್ವಾದ ಪಡೆದುಕೊಳ್ಳುವುದಕ್ಕೆ ಯಾವ ರೈತ ಬಹಳ ಕಷ್ಟದಲ್ಲಿ ಇದ್ದಾನೆ, ಅವನ ಸಹಾಯಕ್ಕೆ ತಾವು ಧಾವಿಸಬೇಕು. ಅವರ ಬೆಳೆ ಸಾಲ ಏನು ಅದನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸುತ್ತೇನೆ. ಇನ್ನು ವಸೂಲಾತಿ ವಿಚಾರ, ತಮಗೆ ಗೊತ್ತಿದೆ, ಬೆಳೆ ಏನೂ ಬಂದಿಲ್ಲ ಎಂದು ಗೊತ್ತಿದೆ. ಆದರೆ ಇವತ್ತು ಎಲ್ಲಾ ಕಡೆ ಬಹಳ ದೊಡ್ಡ ಪ್ರಮಾಣದಲ್ಲಿ ರಿಕವರಿ ನಡೆಯುತ್ತಿದೆ. ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯಿಸುತ್ತಿದ್ದೇನೆ. ತಕ್ಷಣ ಕೊನೇಪಕ್ಷ, ಕ್ರಾಪ್ ಲೋನ್ ರಿಕವರೀಸ್ ಏನು ಇದೆ ಇದು ಸ್ಟಾಪ್ ಆಗಬೇಕು. ರೈತರು ಕಷ್ಟದಲ್ಲಿದ್ದಾರೆ, ತೊಂದರೆಯಲ್ಲಿದ್ದಾರೆ ಎಂದು ಸಹ ಒಪ್ಪಿಕೊಂಡಿದ್ದೀರಿ. ತಾವು ಒಪ್ಪಿಕೊಂಡನಂತರ ರೈತರ ಸಹಾಯಕ್ಕೆ ಧಾವಿಸಬೇಕಾಗುತ್ತದೆ. ಅದೇ ಪ್ರಕಾರ ಸರ್ಕಾರಿ ಆಸ್ತಿಪಾಸ್ತಿ ವಿಚಾರ. ರಸ್ತೆಗಳು ಬ್ರಿಡ್ಜ್‌ಗಳು ಎಲ್ಲಾ ಡ್ಯಾಮೇಜ್ ಆಗಿವೆ. ಇನ್ನು ಅದಕ್ಕೆ ರಿಪೇರಿಯಾಗಿಲ್ಲ. ಅದಕ್ಕೆ ಹಣ ಬಿಡುಗಡೆಯಾಗಿಲ್ಲ. ಮಾನ್ಯ ಧರ್ಮಸಿಂಗ್ ರವರು ನಮ್ಮ ಸ್ನೇಹಿತರು. ಅವರು ಏನೋ ನಮಗೆ ಪ್ರೀತಿಯಿಂದ ಸಹಾಯ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದರು.

ಆದರೆ ಫೈನಾನ್ಸ್ ಕಮಿಷನ್‌ರವರು ಒಪ್ಪಿಕೊಂಡಿಲ್ಲ. ಈಗ ಹಣ ಇಲ್ಲ ಮುಂದೆ ಮಾಡೋಣ ಎಂದು. I am not criticising you. ನಿಮ್ಮ ಇನ್ಟೆನ್ಶನ್ ಬಗ್ಗೆ ನಾನು ಹೇಳುತ್ತಾ ಇಲ್ಲ. ಆದರೆ ಹಣ ಬರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳುತ್ತಿರುವುದು ಬಹಳ ಚೆನ್ನಾಗಿದೆ. ಎಲ್ಲಾ ಸುತ್ತಿ ಬಳಸಿ ಬಯ್ದುಕೊಂಡು ಬರುವುದು. ಆಮೇಲೆ ನಾನು ಬಯ್ಯುತ್ತಿಲ್ಲ, ನಿಮಗೆ ಹೇಳುತ್ತಾ ಇಲ್ಲ ಅಂತ ಹೇಳುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಈಗ ನೋಡಿ ಅವರು ಆರ್ಡರ್ ಮಾಡಿದ್ದುದು ನಿಜ ಇದೆ. It is a fact that tthe Revenue Minister ordered. But the order could not be implemented because of financial problems. I cannot challenge his intention. I appreciate that he has done it. ನನಗೆ ಇಷ್ಟು ಹಣ ರಿಲೀಸ್ ಮಾಡಿ ಎಂದು ಅವರು ಆರ್ಡರ್ ಮಾಡಿದ್ದಾರೆ. ಆದರೆ ಹಣ ಇನ್ನು ಕೊಟ್ಟಿಲ್ಲ. ಅದು ಫೈನಾನ್ಸ್ ಮಿನಿಸ್ಟರ್ ಕೊಡಬೇಕು. ಫೈನಾನ್ಸ್ ಮಿನಿಸ್ಟರ್ ನಿಮಗೆ ಕೊಡುವ ಹಣ ಕೊಟ್ಟಿಲ್ಲ ಎಂದರೆ ನೀವು ಏನು ಮಾಡುತ್ತೀರಿ? ಇವತ್ತು ನೆರೆ ಹಾವಳಿ ಸಂತ್ರಸ್ಥರಿಗೆ ಸರ್ಕಾರದಿಂದ ಯಾವ ರೀತಿಯ ಸಹಾಯವಾಗಿಲ್ಲ. ತಮ್ಮ ಇನ್ಟೆನ್ಷನ್ ಚೆನ್ನಾಗಿ ಇದೆ. ಆದರೆ ಆರ್ಡರ್ ಇಶ್ಯೂ ಮಾಡಿರಬಹುದು. ತಾವು ಎರಡು ಆರ್ಡರ್ಸ್ ಏನು ಮಾಡಿದ್ದೀರಲ್ಲ ಅದರ ಬಗ್ಗೆ ಹೇಳುವುದಾದರೆ, (ಈ ಹಂತದಲ್ಲಿ ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದರು) ಮಾನ್ಯ ವಾಟಾಳ್ ನಾಗರಾಜ್‌ರವರು ಗಲಾಟೆ ಮಾಡಿದರು, ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಇಲ್ಲ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ತಾವು ಇರಬೇಕಾಗಿತ್ತು ಎಂದು ಹೇಳುತ್ತಿದ್ದರು. ಈಗ ತಾವು ಬಂದಿದ್ದೀರಿ ಸಂತೋಷ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಎಲ್ಲೇ ಇದ್ದರೂ ವಿಧಾನ ಸಭೆಯಲ್ಲೇ ಇರುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳೇ ಡಿಸೆಂಬರ್ 6ನೇ ತಾರೀಖು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದಿದ್ದೇನೆ. ರೈತರಿಗೆ ಬೆಳೆ ಹಾನಿಯಾಗಿದಲ್ಲಿ ಅದಕ್ಕೆ ಒಂದು ಪರಿಹಾರ ಸಿಗಬೇಕಾಗಿದ್ದರೆ, ಅವನು ನಾಲ್ಕು ಎಕರೆ ಮಾಡಿದ್ದರೆ 3 ಎಕರೆ ಡ್ಯಾಮೇಜ್ ಆಗಿರಬೇಕು. $\frac{2}{3}$ crop should be damaged.

Only then he is entitled what is this? ನಾನು ಮಾರ್ಕೆಟ್ ಪ್ರೈಜ್ ಕೊಡುವುದಕ್ಕೆ ಹೇಳುವುದಿಲ್ಲ, ಅವರಿಗೆ ಮಿನಿಮಂ ಪ್ರೈಜ್ ಸಿಗಬೇಕು. ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, You have to withdraw that circular.

ಆ ಆದಾಯಮಿತಿ 11 ಸಾವಿರ ಏನು ಹಾಕಿದ್ದೀರಿ ಅದರಿಂದ ತಮ್ಮ ಇನ್ಟೆನ್ಷನ್ಸ್ ಒಳ್ಳೆಯದಿದ್ದರೂ ಸಹ ಯಾವ ರೈತರಿಗೂ ಸಹ ನೆರೆ ಹಾವಳಿಯಿಂದ ಸಂತ್ರಸ್ಥರಿಗೆ ಸಹಾಯ ಆಗಬೇಕು ಅದು ಆಗಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ವಸೂಲಾತಿ ವಿಚಾರ. ಇವತ್ತು ತಾವೇ ರಾಜ್ಯಪಾಲರ ಭಾಷಣದಲ್ಲಿ ಒಪ್ಪಿಕೊಂಡಿರಿ ಹಲವಾರು ಜನ ರೈತರು ಕಷ್ಟದಲ್ಲಿ ಇದ್ದಾರೆ, ಬೆಳೆ ಹಾಳಾಗಿದೆ, ನೂರಾರು ಕೋಟಿ ರೂಪಾಯಿ ನಷ್ಟವಾಗಿದೆ ಅಂತ. ಹಾಗಾದರೆ ರೈತರ ಬೆಳೆ ನಿಮಗೆ ಸಿಗುವುದಿಲ್ಲ. ಹಾಗಾದರೆ ನೀವು ಕೋ-ಆಪರೇಟೀವ್ ಲೋನ್ಸ್ ರಿಕವರಿಯನ್ನು ಏಕೆ ಸ್ಟಾಪ್ ಮಾಡುತ್ತಿಲ್ಲ?

5.50 ಪಿ.ಎಂ.

ಹಾಗಾಗಿ ಬೆಳೆ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಮತ್ತು ಈ ಸಾಲದ ರೆಕವರಿ ಬಂದ್ ಮಾಡುವ ವಿಚಾರದಲ್ಲಿ ಸ್ಪಷ್ಟವಾಗಿ ಸರ್ಕಾರದ ನೀತಿ ಏನಿದೆ ಎನ್ನುವುದನ್ನು ತಿಳಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಇವತ್ತು ಹಲವಾರು ಸಮಸ್ಯೆಗಳನ್ನು ಕ್ರಿಯೇಟ್ ಮಾಡಿದ್ದಾರೆ, ತಾವು ಏನೊಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅದು ಒಂದೂ ಇಂಪ್ಲಿಮೆಂಟ್ ಆಗುತ್ತಿಲ್ಲ. ಜಿಲ್ಲಾ ಪರಿಷತ್ತಿನವರು ಹಲವಾರು ಶಿಕ್ಷಕರಿಗೆ ಅಪಾಯಿಂಟ್ಮೆಂಟ್ ಮಾಡಿದ್ದಾರೆ. ಆ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ ಆದರೆ ಅದು ಜಾರಿಗೆ ತಂದಿಲ್ಲ. ಇವತ್ತು ನೀವು ಪೋಲೀಸ್ ರೆಕ್ರೂಟ್ಮೆಂಟ್ ಮಾಡುತ್ತಿದ್ದೀರಿ ಆ ರೆಕ್ರೂಟ್ಮೆಂಟ್ನಲ್ಲಿ 23 ವರ್ಷದ ಮೇಲೆ ಯಾರದ್ದು ಹೆಚ್ಚು ವಯಸ್ಸಾಗುತ್ತದೆ ಅವರಿಗೆ ಎಲಿಜಿಬಲಿಟಿ ಇಲ್ಲ ಎಂದು ಮಾಡಿದ್ದೀರಿ ಈ ರೀತಿ ಮಾಡುವುದರಿಂದ ಎಷ್ಟೋ ಜನ, ಎಷ್ಟೋ ವರ್ಷಗಳಿಂದ ಉದ್ಯೋಗಾವಕಾಶಗಳು ಸಿಗುತ್ತದೆಂದು ಕಾದವರಿಗೆ ಬಹಳ ನಿರಾಸೆಯಾಗುತ್ತಿದೆ ಅದೇ ಪ್ರಕಾರ ನೀರಾವರಿ ವಿಚಾರವಾಗಿ ಮಾತನಾಡುವುದನ್ನು ಮರೆತೆ. ಕೃಷ್ಣ ಬೇಸಿನ್ನಲ್ಲಿ ಸುಮಾರು 420 ಇಂಜಿನೀಯರ್‌ಗಳನ್ನು ರೆಕ್ರೂಟ್ಮೆಂಟ್ ಮಾಡಿದ್ದೀರಿ ಅದರ ಬಗ್ಗೆ ದೂರುಗಳು ನಮಗೆ ನಿಮಗೆ ಕೂಡ ಬಂದಿದೆ, ನಾನೂ ಕೂಡ ಈ ಬಗ್ಗೆ ಪತ್ರವನ್ನು ಬರೆದಿದ್ದೇನೆ ಈ ಬಗ್ಗೆ ವಿಚಾರಣೆ ಮಾಡುತ್ತೇನೆಂದು ತಾವು ಕೂಡ ನನಗೆ ಪತ್ರ ಬರೆದಿದ್ದೀರಿ ಫಾಲ್ಸ್‌ಫಿಗರ್ಸ್ ಕಂಪ್ಯೂಟರ್‌ಗೆ ಫೀಡ್ ಮಾಡಿ ಯಾರು ಎಲಿಜಬಲಿಟಿ ಇಲ್ಲ ಅಂತಹವರಿಗೆ ಎಲಿಜೆಬಲಿಟಿ ಎಂದು ಮಾಡಿದ್ದಾರೆ. ಈ 5 ಜಿಲ್ಲೆಗಳಲ್ಲಿ ರೆಕ್ರೂಟ್ಮೆಂಟ್ ಮಾಡಬೇಕಾದುದು ಬಿಟ್ಟು ಬೇರೆ ಜಿಲ್ಲೆಗಳಲ್ಲಿ ರೆಕ್ರೂಟ್ಮೆಂಟ್ ಮಾಡಿದ್ದಾರೆ. ಇದರಿಂದ ಆ ಭಾಗದ ಎಷ್ಟೋ ಯುವಕರಿಗೆ ಬಹಳ ಅನ್ಯಾಯವಾಗಿದೆ.

ಅದರ ಬಗ್ಗೆ ಈವರೆಗೂ ಕೂಡ ಕ್ರಮ ಆಗಿಲ್ಲದೇ ಇರುವುದರಿಂದ ಆ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಒತ್ತಾಯಿಸುತ್ತಿದ್ದೇನೆ. ಈಗ ಸುಮಾರು ಐದಾರು ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳುತ್ತೇವೆಂದು ಘೋಷಣೆ ಮಾಡುತ್ತಿದ್ದೀರಿ ಅವರನ್ನು ತಾವು ಯಾವಾಗ ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ. ಅವರನ್ನು ತೆಗೆದುಕೊಳ್ಳುವ ವಿಚಾರದಲ್ಲಿ ನಾನು ಒಂದು ಸಲಹೆಯನ್ನು ಮಾಡುತ್ತೇನೆ. ಈಗಾಗಲೇ ಈ ವಿಚಾರದಲ್ಲಿ ನಿಮ್ಮ ಸರ್ಕಾರದ ಆಜ್ಞೆ ಹೋಗಿದೆ. ನಮ್ಮ ಕಾಲದಲ್ಲಿ ಸುಮಾರು 28-29 ವರ್ಷ ವಯಸ್ಸಾಗಿದ್ದವರಿಗೂ ಕೂಡ ಅವಕಾಶ ಮಾಡಿ ಕೊಟ್ಟಿದ್ದೆವು. ಎಜ್ಯುಮೆರಿಟ್ ಎಂದು ಅವರ ಸಲುವಾಗಿ ರಿಜರ್ವೇಶನ್ ಇಟ್ಟಿದ್ದೆವು ಆ ಒಂದು ಆಜ್ಞೆಯನ್ನು ತಾವು ವಾಪಸ್ಸು ತೆಗೆದುಕೊಂಡಿದ್ದೀರಿ. ಆ ಜನರಿಗೂ ಕೂಡ ನಾವು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಈ ರಾಜ್ಯಪಾಲರ ಭಾಷಣ ಪೊಳ್ಳು ಘೋಷಣೆಯಿಂದ

ತುಂಬಿದೆ ಇದರಲ್ಲಿ ಯಾವುದೇ ಒಂದು ಕ್ಲಿಯರ್‌ಕಟ್ ಪಾಲಿಸಿ ಇಲ್ಲ ಸರ್ಕಾರದ ಸ್ಪಷ್ಟವಾದ ನೀತಿ ಇಲ್ಲ ನನಗೆ ಗೊತ್ತಿದೆ ತಾವು ಇನ್ನು ಐದಾರು ತಿಂಗಳು ಅಧಿಕಾರದಲ್ಲಿರಬಹುದು. ಚುನಾವಣೆಗೆ ನಾವು ಹೋಗಬೇಕಾಗುತ್ತದೆ. ಜನರು ಏನು ತೀರ್ಪು ಕೊಡುತ್ತಾರೋ ಗೊತ್ತಿಲ್ಲ ನಾವು ಅಧಿಕಾರಕ್ಕೆ ಬರುತ್ತೇವೆಂದು ನಾವು ಹೇಳುತ್ತೇವೆ ತಾವು ಅಧಿಕಾರಕ್ಕೆ ಬರುತ್ತೇವೆಂದು ತಾವು ಹೇಳುತ್ತೀರಿ ಅದು ಜನರು ಕೊಡತಕ್ಕಂಥ ತೀರ್ಪಿನ ಮೇಲೆ ನಿರ್ಣಯವಾಗುತ್ತದೆ. ತಾವು ರಾಜ್ಯಪಾಲರ ಭಾಷಣದಲ್ಲಿ ತಮ್ಮ ಅಚೀವ್ಮೆಂಟ್ ಬಗ್ಗೆ ಏನನ್ನು ಹೇಳಿಲ್ಲ ತಮ್ಮ ಗುರಿಗಳ ಬಗ್ಗೆ ಪುನಃ ಪ್ರಸ್ತಾಪ ಮಾಡುತ್ತಾ ಬಂದಿದ್ದೀರಿ ವಿನಃ 4 ವರ್ಷಗಳಿಂದ ಅಚೀವ್ಮೆಂಟ್ ಏನು ಮಾಡಿದ್ದೀರಿ ಅದರ ಬಗ್ಗೆ ಏನೂ ಹೇಳಲಿಲ್ಲ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯಪಾಲರ ಭಾಷಣ ಅಂದರೆ ಕೇವಲ ರಾಜ್ಯಪಾಲರ ಮುಖಾಂತರ ಪೊಳ್ಳು ಘೋಷಣೆಗಳ ಭಾಷಣವಾಗಿದೆ ಆದ್ದರಿಂದ ಅದರಲ್ಲಿ ಯಾವ ಪಾಲಿಸಿ ಇಲ್ಲ ಎಂದು ಹೇಳಿ ಇದನ್ನು ನಾನು ವಿರೋಧಿಸುತ್ತಾ ಮಾನ್ಯ ಅಧ್ಯಕ್ಷರು ಇಷ್ಟೊಂದು ಸಮಯವನ್ನು ನನಗೆ ಮಾತನಾಡಲಿಕ್ಕೆ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳುತ್ತೇನೆ

ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿನ ಅನುಪೂರಕ ಅಂದಾಜುಗಳ ಮೇಲಿನ ಚರ್ಚೆ.

ಅಧ್ಯಕ್ಷರು : ಈಗ 1993-94ನೇ ಸಾಲಿನ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೇ ಕಂತು ಹಾಗೂ ಎರಡನೇ ಕಂತುಗಳ) ಮೇಲೆ ಮುಂದುವರೆದ ಚರ್ಚೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ಏಕಾಂತಯ್ಯನವರು ಅರ್ಧದಲ್ಲೇ ತಮ್ಮ ಭಾಷಣವನ್ನು ನಿಲ್ಲಿಸಿದ್ದರು. ಈಗ ಅವರು ಮಾತನಾಡಬೇಕು.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಈ ಪೂರಕ ಅಂದಾಜುಗಳ 2ನೇ ಕಂತು ಏನಿತ್ತು ಅದರ ಬಗ್ಗೆ ಮಾತನಾಡುತ್ತಾ ಮೊಲ್ಯಾಸಿಸ್ ಕಂಟ್ರೋಲ್ ಆರ್ಡರನ್ನು ಡಿ ಕಂಟ್ರೋಲ್ ಮಾಡಿದ್ದರಿಂದ ಈ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಏನು ಪರಿಣಾಮ ಉಂಟಾಯಿತೆಂಬುದನ್ನು ಹೇಳುತ್ತಿದ್ದೇನೆ ಅದನ್ನು ಮುಂದುವರಿಸುತ್ತಾ ಇನ್ನು ಕೆಲವು ವಿಚಾರಗಳನ್ನು ಮಾತ್ರ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸುಮಾರು 700 ಕೋಟಿ ರೂ.ಗಳನ್ನು ಬೇಡಿಕೆ ಸಂಖ್ಯೆ 25 ರಲ್ಲಿ ಸರ್ಕಾರ ಈ ಸಭೆಯ ಮುಂದಿಟ್ಟಿದೆ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ತಮಗೆ ತಿಳಿದಿರುವಂತೆ ಡಿ ಕಂಟ್ರೋಲ್ ಆದಮೇಲೆ ಹಿಂದೆ 150-200 ರೂ. ಇದ್ದುದು ಇವತ್ತು ಮಹಾರಾಷ್ಟ್ರದಲ್ಲಿ 2500 ರೂ. ಆಗಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಕರ್ನಾಟಕದಲ್ಲಿ 1600 ರೂ.ನಿಂದ 1700 ರೂ.ವರೆಗೆ ಇದೆ. ತಮಗೆ ಗೊತ್ತಿರುವಂತೆ ಕರ್ನಾಟಕ ರಾಜ್ಯದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳಾಗಿರಬಹುದು, ಅಥವಾ ಬೇರೆ ಸಕ್ಕರೆ ಕಾರ್ಖಾನೆಗಳೇನಿವೆ ಅವು ಮೊಲ್ಯಾಸಿಸ್ಸ್ನು ಉತ್ಪಾದನೆ ಮಾಡುತ್ತಿವೆ.

ಈ ರೀತಿ ಉತ್ಪಾದನೆಯಾದುದು ಖರ್ಚಾಗದೇ ಇರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಪಕ್ಕದ ಮಹಾರಾಷ್ಟ್ರದಲ್ಲಿ 2500 ರೂ.ಗಳಿಗೆ ಮಾರಾಟವಾಗುತ್ತಿದ್ದರೆ ನಮ್ಮ ಕರ್ನಾಟಕದಲ್ಲಿ ಇವತ್ತಿನ ದಿವಸ ಮಾನ್ಯ ಮಂತ್ರಿಗಳಾದ ಲಮಾಣಿಯವರು ಹೇಳಿದಂತೆ ಅವರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿರುವಂಥ ಮೊಲ್ಯಾಸಿಸ್ಸ್ನು ತೆಗೆದುಕೊಳ್ಳುವುದಕ್ಕೆ ಜನ